
ಸಂಪುಟ: 05 ಸಂಚಿಕೆ: 190 ಪುಟಗಳು: 08 ಮಂಗಳವಾರ 23 ಸೆಪ್ಟೆಂಬರ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ



ಯಾ ದೇವಿ ಸರ್ವ ಭೂತೇಷು
ಬ್ರಹ್ಮಚಾರಿಣಿ ರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ
ನಮಸ್ತಸ್ಯೈ ನಮೋ ನಮಃ

## ಡಿಕೆಶಿ ಅಕ್ರಮ ಆಸ್ತಿ ಪ್ರಕರಣ ಸುಪ್ರೀಂ ಕೋರ್ಟ್‌ನ ಹೊಸ ಪೀಠಕ್ಕೆ ವರ್ಗಾವಣೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಅಕ್ರಮ ಆಸ್ತಿ ಪ್ರಕರಣದ ತನಿಖೆಗೆ ಅನುಮತಿ ಹಿಂಪಡೆದ ಕರ್ನಾಟಕ ಸರಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮತ್ತೊಂದು ಪೀಠಕ್ಕೆ ವರ್ಗಾಯಿಸಿದೆ.

ನ್ಯಾ. ಸೂರ್ಯಕಾಂತ್ ನೇತೃತ್ವದ ಹೊಸ ನ್ಯಾಯಪೀಠವು ಕರ್ನಾಟಕ ಸರಕಾರದ ವಿರುದ್ಧ ಸಿಬಿಐ ಮತ್ತು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸಲ್ಲಿಸಿರುವ ಅರ್ಜಿಗಳನ್ನು ವಿಚಾರಣೆ ನಡೆಸಲಿದೆ. ಈ ಮುನ್ನ ನ್ಯಾ. ಸೂರ್ಯಕಾಂತ್ ನೇತೃತ್ವದ ಮತ್ತೊಂದು ಪೀಠವು ಇವುಗಳನ್ನು ವಿಚಾರಣೆ ನಡೆಸುತ್ತಿತ್ತು. ಸಿಜೆಐ ಬಿ.ಆರ್. ಗವಾಯಿ ಮತ್ತು ನ್ಯಾ. ಕೆ. ವಿನೋದ್ ನೇತೃತ್ವದ ಪೀಠ ಸೋಮವಾರ ಈ ವಿಷಯ ತಿಳಿಸಿದೆ. ವಿಚಾರಣೆ ವೇಳೆ ಡಿ.ಕೆ. ಶಿವಕುಮಾರ್ ಪರ ವಕೀಲರಾದ ಅಭಿಷೇಕ್ ಸಿಂಘ್ವಿ ಅವರು, ''ರಾಜಕೀಯ ವಿವಾದಗಳನ್ನು ಕೋರ್ಟ್‌ಗೆ ತರದೆ ಹೊರಗೆ ಪರಿಹರಿಸಿಕೊಳ್ಳಬೇಕೆಂದು ಈ ಮುನ್ನ ಸಿಜೆಐ ಹೇಳಿದ್ದರು'' ಎಂದು ಮಾಹಿತಿ ನೀಡಿದರು.

## 1 ಸಾವಿರ ಕೋಟಿ ವೆಚ್ಚದಲ್ಲಿ ಎಲ್‌ಇಎಪಿ: ಪ್ರಿಯಾಂಕ್

• ಉದಯವಾಹಿನಿ, ಬೆಂಗಳೂರು

'ತಂತ್ರಜ್ಞಾನ ಕ್ಷೇತ್ರವನ್ನು ಬೆಂಗಳೂರಿನ ಹೊರಗೆ ವಿಸ್ತರಿಸುವ ಉದ್ದೇಶ ಹೊಂದಿರುವ ಎಲ್‌ಇಎಪಿ (ಸ್ಥಳೀಯ ಆರ್ಥಿಕ ವೇಗವರ್ಧಕ ಕಾರ್ಯಕ್ರಮ-ಲೀಪ್) ಕಾರ್ಯಕ್ರಮಕ್ಕೆ 1,000 ಕೋಟಿ ಮೀಸಲಿಡಲಾಗಿದೆ. ಇದರಿಂದ ಸ್ಥಳೀಯವಾಗಿ 5 ಲಕ್ಷ ಉದ್ಯೋಗ ಸೃಷ್ಟಿ ಆಗಲಿದೆ' ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. 'ತಂತ್ರಜ್ಞಾನ, ನಾವೀನ್ಯ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಬಲಪಡಿಸಲು ಕರ್ನಾಟಕ ಸರ್ಕಾರವು ನ್ಯೂಜೆರ್ಸಿ ರಾಜ್ಯದ ಜೊತೆ ಮೂರು ವರ್ಷಗಳ ಮಹತ್ವದ ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಿದೆ' ಎಂದರು. 'ಈ ಒಪ್ಪಂದದಿಂದ ಪರಿಸರ ವ್ಯವಸ್ಥೆ ಹಾಗೂ ಮಾನವ ಸಂಪನ್ಮೂಲಕ್ಕೂ ಹೆಚ್ಚು ಒತ್ತು ಸಿಗಲಿದೆ. ಜೀವವಿಜ್ಞಾನ (ಅಲೈಡ್ ಹೆಲ್ತ್ ಸೈನ್ಸ್), ಡೀಪ್ ಟೆಕ್ನಾಲಜಿ (ಸೈಬರ್ ಸೆಕ್ಯುರಿಟಿ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್‌ಗಳಲ್ಲಿ ಜಂಟಿಯಾಗಿ ಯೋಜನೆಗಳನ್ನು ರೂಪಿಸಲಾಗುವುದು. ಕೌಶಲ ಸುಧಾರಣೆ ಗಮನದಲ್ಲಿ ಇಟ್ಟುಕೊಂಡು ಈ ಒಪ್ಪಂದ ಮಾಡಿಕೊಳ್ಳಲಾಗಿದೆ. ಎಲ್‌ಇಎಪಿ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದು ತುಮಕೂರು, ಶಿವಮೊಗ್ಗ ಮತ್ತು ಕಲಬುರಗಿಯಲ್ಲಿ ಮಾಹಿತಿ ತಂತ್ರಜ್ಞಾನದ ಕ್ಲಸ್ಟರ್ ಅಭಿವೃದ್ಧಿಪಡಿಸಲಾಗುವುದು' ಎಂದರು.

## ಸಮೀಕ್ಷೆ 3 ತಿಂಗಳು ಮುಂದೂಡಿ ಮಲ್ಲಿಕಾರ್ಜುನ ಖರ್ಗೆಗೆ ಮನವಿ

• ಉದಯವಾಹಿನಿ, ಬೆಂಗಳೂರು

ಸರಿಯಾದ ಸಿದ್ಧತೆ ಮಾಡಿಕೊಳ್ಳದೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಆರಂಭಿಸಲಾಗಿದೆ. ಹೀಗಾಗಿ, ಮೂರು ತಿಂಗಳ ಅವಧಿಗೆ ಮುಂದೂಡಬೇಕು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಒಕ್ಕಲಿಗ ಮೀಸಲಾತಿ ಹೋರಾಟ ಸಮಿತಿ ಮನವಿ ಸಲ್ಲಿಸಿದೆ. ಸದಾಶಿವನಗರದಲ್ಲಿರುವ ನಿವಾಸದಲ್ಲಿ ಖರ್ಗೆ ಅವರನ್ನು ಭೇಟಿ ಮಾಡಿದ ಒಕ್ಕಲಿಗ ನಾಯಕರು, ಸಮೀಕ್ಷೆ ಮುಂದೂಡುವಂತೆ ಆಗ್ರಹಿಸಿದರು. ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಿಲ್ಲ.

ಆ್ಯಪ್‌ನಲ್ಲಿ ಮಾಹಿತಿ ಅಪ್ ಲೋಡ್ ಆಗುತ್ತಿಲ್ಲ ಎಂದು ದೂರಿದರು. ಖರ್ಗೆ ಅವರ ಭೇಟಿ ಬಳಿಕ ಮಾತನಾಡಿದ ರಾಜ್ಯ ಒಕ್ಕಲಿಗ ಮೀಸಲಾತಿ ಹೋರಾಟ ಸಮಿತಿಯ ಪ್ರಧಾನ ಸಂಚಾಲಕ ಆಡಿಟರ್ ನಾಗರಾಜ್ ಯಲಚವಾಡಿ, 'ಸಮೀಕ್ಷೆ ಮುಂದೂಡುವಂತೆ ಒಕ್ಕಲಿಗ ಸಮುದಾಯದ ಸಭೆಯಲ್ಲೂ ಮನವಿ ಮಾಡಲಾಗಿತ್ತು. ಆ ವಿಚಾರವನ್ನು ಖರ್ಗೆಯವರ ಗಮನಕ್ಕೆ ತರಲಾಗಿದೆ. ಸಮೀಕ್ಷೆಯನ್ನು ಮುಂದೂಡಲೇಬೇಕೆಂದು ಮನವಿ ಮಾಡಿದ್ದೇವೆ. ಪರಿಶೀಲಿಸುವುದಾಗಿ ಅವರು ತಿಳಿಸಿದ್ದಾರೆ' ಎಂದರು.

## ರಜೆ ಮುಗಿದ ತಕ್ಷಣ ಶಾಲೆ ಆರಂಭ: ಮಧು ಬಂಗಾರಪ್ಪ

• ಉದಯವಾಹಿನಿ, ಬೆಂಗಳೂರು


ಶಾಲಾ ಅವಧಿಯಲ್ಲಿ ಬೋಧನೆಗೆ ಅಡ್ಡಿಯಾಗಬಾರದು ಎಂಬ ಕಾರಣಕ್ಕೆ ಜಾತಿವಾರು ಸಮೀಕ್ಷೆಗೆ ದಸರಾ ರಜೆಯನ್ನು ಬಳಸಿಕೊಂಡಿದ್ದೇವೆ. ರಜೆ ಮುಗಿದ ತಕ್ಷಣ ಶಾಲೆಗಳು ಪುನರಾರಂಭವಾಗಲಿವೆ' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು. 'ಶಿಕ್ಷಕರಿಗೆ ದಸರಾ ಹಬ್ಬ ಮಾಡಲು ಅವಕಾಶ ಕೊಡದೇ ಸಮೀಕ್ಷೆ ಮಾಡಿಸಲಾಗುತ್ತಿದೆ ಎಂದು ಬಿಜೆಪಿ ಆರೋಪ ಮಾಡಿದೆ. ಬಿಜೆಪಿ ಅವಧಿಯಲ್ಲೂ ಶಿಕ್ಷಕರ ಮೇಲೆ ಅನ್ಯ ಕಾರ್ಯಗಳ ಭಾರ ಇತ್ತು. ಕೇಂದ್ರ ಸರ್ಕಾರ ನಡೆಸುವ ಗಣತಿಯನ್ನು ಅವರು ಯಾರ ಬಳಿ ಮಾಡಿಸುತ್ತಾರೆ ಶಿಕ್ಷಕರನ್ನು ಬಳಸದ ಹೊರತು ಬೇರೆ ಪರ್ಯಾಯ ವ್ಯವಸ್ಥೆ ಎಲ್ಲಿದೆ' ಎಂದು ಪ್ರಶ್ನಿಸಿದರು. 'ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಅರಿಯಲು ಸಮೀಕ್ಷೆ ಅನಿವಾರ್ಯ ಸಮೀಕ್ಷೆಯಲ್ಲಿ ಭಾಗವಹಿಸಲು ಶಿಕ್ಷಕರು ಹಾಗೂ ಶಿಕ್ಷಕರ ಸಂಘಟನೆಗಳ ಜತೆ ಮಾತನಾಡಿ ಮನವರಿಕೆ ಮಾಡಿಕೊಟ್ಟಿದ್ದೇವೆ. ಎಂದರು.

ಬಾನು ಮುಷ್ತಾಕ್ ಮೇಲಿನ ಗೌರವ ಹೆಚ್ಚಾಗಿದೆ : ಛಲವಾದಿ ನಾರಾಯಣಸ್ವಾಮಿ

ಸೂರ್ಯತೇಜದೊಂದಿಗೆ ಹೊಳೆದ ನಾಡದೇವಿ

ವಿಶ್ವವಿಖ್ಯಾತ ನಾಡಹಬ್ಬ ದಸರಾಗೆ ಅಧಿಕೃತ ಚಾಲನೆ ನೀಡಿದ ಬೂಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್

# ದಸರಾ ವೈಭವ ಚಾಮುಂಡೇಶ್ವರಿ ಕಾಪಾಡವ್ವ



ಪ್ರತಿ ವರ್ಷದಂತೆ ಈ ವರ್ಷವೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಸೆಸ್ಕ್)ದ ವತಿಯಿಂದ ದಸರಾ ದೀಪಾಲಂಕಾರ ಮಾಡಲಾಗಿದ್ದು , ಕಳೆದ ವರ್ಷಕ್ಕಿಂತಲೂ ಹೆಚ್ಚು ಆಕರ್ಷಣೀಯವಾಗಿ ಈ ಬಾರಿಯ ದೀಪಾಲಂಕಾರ ಕಂಗೊಳಿಸಲಿದೆ. ಈ ಮೂಲಕ ಸಾಂಸ್ಕೃತಿಕ ರಾಜಧಾನಿ ಮೈಸೂರು 21 ದಿನಗಳ ಕಾಲ ದೀಪದ ಬೆಳಕಿನಲ್ಲಿ ಮಿನುಗಲಿದೆ.




### ಚಾಮುಂಡಿ ತಾಯಿಯ ಸೀರೆ ಪಡೆದ ಮುಷ್ತಾಕ್

ದಸರಾ ಉದ್ಘಾಟನೆಗೆ ಆಗಮಿಸಿದ ಬಾನು ಮುಷ್ತಾಕ್ ಚಾಮುಂಡಿ ತಾಯಿಯ ದರ್ಶನ ಪಡೆದು ಮಂಗಳಾರತಿ ಸ್ವೀಕರಿಸಿದರು.ಹಸಿರು ಬಾರ್ಡರ್ ಇರುವ ಹಳದಿ ಮೈಸೂರು ರೇಷ್ಮೆ ಸೀರೆ, ತಲೆಗೆ ಮೈಸೂರು ಮಲ್ಲಿಗೆ ಮುಡಿದು ಬಾನು ಮುಷ್ತಾಕ್ ದೇವಸ್ಥಾನಕ್ಕೆ ಆಗಮಿಸಿದರು. ಗರ್ಭಗುಡಿ ಮುಂಭಾಗದ ಆವರಣದಲ್ಲಿ ನಿಂತು ತಾಯಿ ಚಾಮುಂಡಿ ದರ್ಶನ ಪಡೆದರು. ನಂತರ ಗಣಪತಿಗೆ ಕೈ ಮುಗಿದು, ಮಂಗಳಾರತಿ ಪಡೆದು ಪ್ರಸಾದ ಸ್ವೀಕರಿಸಿದ್ದಾರೆ. ಚಾಮುಂಡಿ ಬೆಟ್ಟಕ್ಕೆ ಬಾನು ಮುಷ್ತಾಕ್ ಇಡೀ ಕುಟುಂಬವೇ ಹಾಜರಾಗಿದ್ದು ವಿಶೇಷ ಖಾಸಗಿ ಹೋಟೆಲಿನಿಂದ ಕಾರಿನಲ್ಲಿ ಚಾಮುಂಡಿ ಬೆಟ್ಟಕ್ಕೆ ಬಾನು ಮುಷ್ತಾಕ್ ಆಗಮಿಸಿದರೆ ಸಿಎಂ ಮತ್ತು ಸಚಿವರು ಐರಾವತ ಬಸ್ಸಿನಲ್ಲಿ ಆಗಮಿಸಿದರು.

### ಒಡೆಯರ್ ಖಾಸಗಿ ದರ್ಬಾರ್ ಆರಂಭ

ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಅರಮನೆಯಲ್ಲಿ ರಾಜವಂಶಸ್ಥರ ಖಾಸಗಿ ದರ್ಬಾರ್ ಸೋಮವಾರದಿಂದ ಆರಂಭವಾಯಿತು. ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ರತ್ನಖಚಿತ ಸಿಂಹಾಸನರೂಢರಾಗಿ ನಡೆಸಿದ ಖಾಸಗಿ ದರ್ಬಾರ್, ರಾಜರ ಕಾಲದ ಗತವೈಭವವನ್ನು ನೆನಪಿಸಿತು. ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್, ಆದ್ಯವೀರ್ ನರಸಿಂಹರಾಜ ಒಡೆಯರ್, ಯುಗಾಧ್ಯಕ್ಷ ಕೃಷ್ಣರಾಜ ಒಡೆಯರ್ ಪಾಲ್ಗೊಂಡು ಅರಮನೆಯಲ್ಲಿ ನಡೆದ ಖಾಸಗಿ ದರ್ಬಾರ್, ನವರಾತ್ರಿ ಆಚರಣೆಗಳಲ್ಲಿ ಸಂಭ್ರಮ ಸಡಗರದಿಂದ ಪಾಲ್ಗೊಂಡರು.



• ಉದಯವಾಹಿನಿ ಮೈಸೂರು

ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವವನ್ನು ಬೂಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಅವರು ಉದ್ಘಾಟಿಸಿದರು. ಬೆಳಗ್ಗೆ 10:10 ರಿಂದ 10:40ರ ಶುಭ ವೃಶ್ಚಿಕ ಲಗ್ನದಲ್ಲಿ ಚಾಮುಂಡಿ ಬೆಟ್ಟದ ವೇದಿಕೆಯಲ್ಲಿ ಬೆಳ್ಳಿಯ ರಥದಲ್ಲಿ ಇರುವ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಮತ್ತು ಪುಷ್ಪಾರ್ಚನೆ ನೆರವೇರಿಸುವ ಮೂಲಕ ನಾಡಹಬ್ಬಕ್ಕೆ ವಿದ್ಯುಕ್ತ ಚಾಲನೆ ನೀಡಿದರು.

ಇದಕ್ಕೂ ಮುನ್ನ ಈ ಬಾರಿಯ ದಸರಾ ಉದ್ಘಾಟಕರಾದ ಸಾಹಿತಿ ಬಾನು ಮುಷ್ತಾಕ್, ಸಿಎಂ ಸಿದ್ದರಾಮಯ್ಯ ಹಾಗೂ ಗಣ್ಯರು ಚಾಮುಂಡಿ ದೇವಸ್ಥಾನಕ್ಕೆ ಭೇಟಿ ನೀಡಿದರು. ಗಣಪತಿಗೆ ಪೂಜೆ ಸಲ್ಲಿಸಿದ ನಂತರ ಚಾಮುಂಡೇಶ್ವರಿ ತಾಯಿಯ ದರ್ಶನ ಪಡೆದರು. ಈ ಸಂದರ್ಭದಲ್ಲಿ ಬಾನು ಮುಷ್ತಾಕ್ ಅವರು ಮಂಗಳಾರತಿ ಪಡೆದರು. ಬಳಿಕ ಚಾಮುಂಡೇಶ್ವರಿ ಆಡಳಿತ ಮಂಡಳಿಯು ಬಾನು ಮುಷ್ತಾಕ್ ಅವರಿಗೆ ಹೂವಿನ ಹಾರ ಹಾಕಿ ಜರಿಸೀರೆಯನ್ನು ನೀಡಿತು. ಚಾಮುಂಡೇಶ್ವರಿ ತಾಯಿಯ ಗರ್ಭಗುಡಿಯ ಮುಂಭಾಗದಲ್ಲಿ ಸಾಹಿತಿ ಬಾನು ಮುಷ್ತಾಕ್ ಚಾಮುಂಡೇಶ್ವರಿಗೆ ಕೈ ಮುಗಿದು ಭಾವುಕರಾದರು. 11 ದಿನಗಳ ನಾಡಹಬ್ಬ ದಸರಾ ಮಹೋತ್ಸವದ ಕಾರ್ಯಕ್ರಮಗಳಿಗೆ ಸಾಹಿತಿ ಹಾಗೂ ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಅವರು ಉದ್ಘಾಟಿಸಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಹೆಚ್.ಸಿ.ಮಹದೇವಪ್ಪ ಸೇರಿದಂತೆ ಗಣ್ಯರು ಹಾಜರಿದ್ದರು.

ನವರಾತ್ರಿಯ ಮೊದಲ ದಿನ ಬೆಳಗ್ಗೆ ಚಾಮುಂಡಿಬೆಟ್ಟದಲ್ಲಿ ನಿರ್ಮಾಣವಾಗಿರುವ ಉದ್ಘಾಟನಾ ವೇದಿಕೆಗೆ ನಾಡ ಅಧಿದೇವತೆಯ ಉತ್ಸವ ಮೂರ್ತಿಯನ್ನು ಅಲಂಕಾರ ಮಾಡಿ ವೇದಿಕೆಯಲ್ಲಿರುವ ಬೆಳ್ಳಿಯ ರಥಕ್ಕೆ ತಂದು ಕೂರಿಸಲಾಯಿತು. ಬಳಿಕ ಬೆಳಗ್ಗೆ 10:10 ರಿಂದ 10:40ರ ಶುಭ ವೃಶ್ಚಿಕ ಲಗ್ನದಲ್ಲಿ ಗಣ್ಯರು ದೀಪ ಬೆಳಗಿಸಿ, ನಾಡದೇವತೆಗೆ ಪುಷ್ಪಾರ್ಚನೆ ಮಾಡುವ ಮೂಲಕ ನಾಡಹಬ್ಬಕ್ಕೆ ವಿದ್ಯುಕ್ತ ಚಾಲನೆ ನೀಡಿದರು. ನಂತರ ಗಣ್ಯರ ಮಾತು ಹಾಗೂ ಉದ್ಘಾಟಕರ ಬಾಷಣ. ನಂತರ ಮೈಸೂರು ನಗರದಲ್ಲಿ ವಿವಿಧ ದಸರಾ ಕಾರ್ಯಕ್ರಮಗಳು ಉದ್ಘಾಟನೆಯಾದವು. ಈ ಮಧ್ಯೆ ಬಾನು ಮುಷ್ತಾಕ್ ಅವರ ಬದುಕು-ಬರಹ ಪುಸ್ತಕ ಬಿಡುಗಡೆಯಾದವು.

ದಸರಾ ಉದ್ಘಾಟನೆ ಕಾರ್ಯಕ್ರಮಕ್ಕಾಗಿ ವಾಟರ್ ಪ್ರೂಫ್ ವೇದಿಕೆ ಸಿದ್ಧವಾಗಿದೆ. ವೇದಿಕೆಯಲ್ಲಿ ಗಣ್ಯರಿಗೆ ಆಸನದ ವ್ಯವಸ್ಥೆ, ವೇದಿಕೆ ಮುಂಭಾಗದಲ್ಲಿ ಗಣ್ಯರು ಹಾಗೂ ಪತ್ರಕರ್ತರಿಗೆ ಹಾಗೂ ಸಾಮಾನ್ಯ ಜನರಿಗೂ ಸಹ ಆಸನದ ವ್ಯವಸ್ಥೆ ಮಾಡಲಾಗಿದೆ. ಕಾರ್ಯಕ್ರಮಕ್ಕೆ ಎಲ್ಲಾರಿಗೂ ಪಾಸ್ ವ್ಯವಸ್ಥೆ ಹಾಗೂ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಉದ್ಘಾಟನಾ ಕಾರ್ಯಕ್ರಮಕ್ಕೆ ಮುಗಿಯುವವರೆಗೂ ಭಕ್ತರಿಗೆ ಚಾಮುಂಡಿ ತಾಯಿಯ ದರ್ಶನಕ್ಕೆ ಅವಕಾಶವಿರುವುದಿಲ್ಲ. ಖಾಸಗಿ ವಾಹನಗಳಿಗೂ ನಿರ್ಬಂಧವಿದ್ದು, ಚಾಮುಂಡಿಬೆಟ್ಟದ ಕೆಳಭಾಗದಲ್ಲೇ ಪೊಲೀಸ್ ಬ್ಯಾರಿಕೇಡ್ ಹಾಕಲಾಗಿದೆ.

**ಆಹಾರ ಮೇಳಕ್ಕೆ ಚಾಲನೆ:** ವಿಶ್ವವಿಖ್ಯಾತ ಮೈಸೂರು ದಸರಾ 2025ರ ಅಂಗವಾಗಿ ಸೋಮವಾರ ಜನಪ್ರಿಯ ಆಹಾರ ಮೇಳ ಹಾಗೂ ದೀಪಾಲಂಕಾರಕ್ಕೆ ಚಾಲನೆ ನೀಡಲಾಯಿತು. ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾಗಿರುವ ವಿದ್ಯುತ್ ದೀಪಾಲಂಕಾರಕ್ಕೆ ಇಂಧನ ಸಚಿವರಾದ ಕೆ.ಜೆ.ಜಾರ್ಜ್ ಅವರು ಚಾಲನೆ ನೀಡಿದರು.ನಗರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ಹಸಿರು ಚಪ್ಪರದ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಇಂಧನ ಸಚಿವರಾದ ಕೆ.ಜೆ. ಜಾರ್ಜ್ ಅವರು ದಸರಾ ವಿದ್ಯುತ್ ದೀಪಾಲಂಕಾರಕ್ಕೆ ವಿಧ್ಯುಕ್ತ ಚಾಲನೆ ನೀಡಿದರು.

### ಪುಳಿಯೋಗರೆ ಸವಿದ ಸಿಎಂ


ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಆಹಾರ ಮೇಳಕ್ಕೆ ಸಿಎಂ ಸಿದ್ದರಾಮಯ್ಯ ಹಾಗೂ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಚಾಲನೆ ನೀಡಿದರು. ಸಿದ್ದರಾಮಯ್ಯ ಪುಳಿಯೋಗರೆ ರುಚಿ ಸವಿದು ಖುಷಿಪಟ್ಟರು. 160 ಮಳಿಗೆಗಳಲ್ಲಿ ನಾನಾ ಬಗೆಯ ಆಹಾರ ವೈವಿಧ್ಯಗಳನ್ನು ಸವಿಯುವ ಅವಕಾಶ ಪ್ರವಾಸಿಗರಿಗೆ ಸಿಗಲಿದ್ದು, ಅ. 5ರವರೆಗೆ ನಡೆಯಲಿದೆ. ಅದರಲ್ಲೂ ಹೂವಿನಿಂದ ಅರಳಿದ ಕಲಾಕೃತಿಗಳು ಎಲ್ಲಾರನ್ನೂ ತನ್ನತ್ತ ಸೆಳೆಯುತ್ತವೆ. ಇದಕ್ಕೆ ದಸರಾ ಫಲಪುಷ್ಪ ಪ್ರದರ್ಶನ ಸಾಕ್ಷಿಯಾಗಿದೆ. ಒಂದೆಡೆ ಹೂವುಗಳಲ್ಲೇ ಮೈದಳೆದ ಗಾಂಧಿ ಮಂಟಪ, ಮತ್ತೊಂದೆಡೆ ಪಂಚ ಗ್ಯಾರಂಟಿ ಯೋಜನೆ ಮಾದರಿಗಳು ಸಾರ್ವಜನಿಕರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿವೆ. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ, ಸಚಿವ ಕೆ. ವೆಂಕಟೇಶ್ ಮೇಳಕ್ಕೆ ಚಾಲನೆ ನೀಡಿದರು. ಫಲಪುಷ್ಪ ಪ್ರದರ್ಶನವು ಅ. 2ರವರೆಗೆ ಇರಲಿದ್ದು, ವಯಸ್ಕರಿಗೆ 50 ರೂ., ಮಕ್ಕಳಿಗೆ 25 ರೂ. ಪ್ರವೇಶ ದರ ನಿಗದಪಡಿಸಲಾಗಿದೆ.

### 136 ಕಿ.ಮೀ ದೀಪಾಲಂಕಾರ

ದಸರಾ ಹಿನ್ನೆಲೆಯಲ್ಲಿ ಈ ಬಾರಿ ನಗರದ 136 ಕಿ.ಮೀ ವ್ಯಾಪ್ತಿಯ ರಸ್ತೆಗಳು ಹಾಗೂ 118 ವೃತ್ತಗಳಲ್ಲಿ ದೀಪಾಲಂಕಾರ ಮಾಡಲಾಗಿದೆ. ಇದರೊಂದಿಗೆ ನಗರದ ಪ್ರಮುಖ ಕಡೆಗಳಲ್ಲಿ ಎಲ್‌ಇಡಿ ಬಲ್ಬ್‌ಗಳಿಂದ ನಿರ್ಮಿಸಲಾದ 80 ವಿವಿಧ ಪ್ರತಿಕೃತಿಗಳನ್ನು ಇರಿಸಲಾಗಿದೆ. ನಿಗದಿಯಂತೆ ಸೆ.22ರಿಂದ ಅ.2ರವರೆಗೆ ವಿದ್ಯುತ್ ದೀಪಾಲಂಕಾರ ನಡೆಯಲಿದ್ದು, ಇದರೊಂದಿಗೆ ಮುಖ್ಯಮಂತ್ರಿಗಳ ನಿರ್ದೇಶನದಂತೆ 10 ದಿನಗಳು ವಿಸ್ತರಣೆ ಮಾಡಿಲಾಗಿದೆ, ಈ ಮೂಲಕ ಒಟ್ಟು 21 ದಿನಗಳ ಕಾಲ ವಿದ್ಯುತ್ ದೀಪಾಲಂಕಾರ ಇರಲಿದೆ. ಇದಕ್ಕಾಗಿ 300 ಕಿ.ಲೋ ವ್ಯಾಟ್‌ಗಳ, 2,57,520 ಯೂನಿಟ್ ವಿದ್ಯುತ್ ಬಳಕೆ ಮಾಡಲಾಗುತ್ತಿದೆ.

### ಕಂಗೊಳಿಸುತ್ತಿದೆ ಮೈಸೂರು

ಇಡೀ ಮೈಸೂರು ನಗರ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿದೆ. ಪ್ರಮುಖವಾಗಿ ಅರಮನೆ ಸುತ್ತಲಿನ ರಸ್ತೆಗಳು ಸೇರಿದಂತೆ ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ, ಅಲ್ಬರ್ಟ್ ವಿಕ್ಟರ್ ರಸ್ತೆ, ಜೆಎಲ್‌ಬಿ ರಸ್ತೆ, ಚಾಮರಾಜ ಜೋಡಿರಸ್ತೆ, ಹೊರವಲಯದಲ್ಲಿನ ಪ್ರಮುಖ ಹೆದ್ದಾರಿಗಳಿಗೂ ದೀಪಾಲಂಕಾರ ಮಾಡಲಾಗಿದೆ. ನಗರ ವ್ಯಾಪ್ತಿಯಲ್ಲಿರುವ ಪ್ರಮುಖ ವೃತ್ತಗಳಿಗೂ ಆಕರ್ಷಕ ದೀಪಾಲಂಕಾರ ಮಾಡಲಾಗಿದೆ. ಇದಲ್ಲದೆ ದೊಡ್ಡಕೆರೆ ಮೈದಾನ, ಕೆ.ಆರ್.ವೃತ್ತ, ಚಾಮರಾಜ ವೃತ್ತ, ರಾಮಸ್ವಾಮಿ ವೃತ್ತ, ರೈಲ್ವೆ ನಿಲ್ದಾಣ ಸಮೀಪ, ಗನ್‌ಹೌಸ್, ಎಲ್‌ಐಸಿ ವೃತ್ತ ಸೇರಿದಂತೆ ವಿವಿಧೆಡೆ ಹಲವು ಕಲಾಕೃತಿಗಳನ್ನು ನಿರ್ಮಿಸಲಾಗಿದೆ.



## ಆರ್‌ಎಫ್‌ಒ ವರ್ಗಾವಣೆಯಲ್ಲೂ ಭ್ರಷ್ಟಾಚಾರ: ಕರ್ನಾಟಕ ವಲಯ ಅರಣ್ಯ ಅಧಿಕಾರಿಗಳ ಸಂಘ

• ಉದಯವಾಹಿನಿ, ಬೆಂಗಳೂರು

'ವಲಯ ಅರಣ್ಯಾಧಿಕಾರಿಗಳ (ಆರ್‌ಎಫ್‌ಒ) ವರ್ಗಾವಣೆಯಲ್ಲಿ ರಾಜಕೀಯ ಒತ್ತಡ, ವೈಯಕ್ತಿಕ ಶಿಫಾರಸು, ಭ್ರಷ್ಟಾಚಾರ ಮತ್ತು ಅಕ್ರಮಗಳು ನಡೆಯುತ್ತಿವೆ ಎಂಬ ದಟ್ಟ ಭಾವನೆ ಅಧಿಕಾರಿಗಳು ಮತ್ತು ಸಾರ್ವಜನಿಕರಲ್ಲಿದೆ. ಇವುಗಳ ನಿಯಂತ್ರಣಕ್ಕೆ ಮತ್ತು ವರ್ಗಾವಣೆಯಲ್ಲಿ ಪಾರದರ್ಶಕತೆ ತರಲು ಆರ್‌ಎಫ್‌ಒ ವರ್ಗಾವಣೆಯನ್ನೂ ಕೌನ್ಸೆಲಿಂಗ್ ನಿರ್ವಹಣಾ ವ್ಯವಸ್ಥೆಗೆ (ಟಿಸಿಎಂಎಸ್) ಒಳಪಡಿಸಬೇಕು' ಎಂದು ಕರ್ನಾಟಕ ರಾಜ್ಯ ವಲಯ ಅರಣ್ಯ ಅಧಿಕಾರಿಗಳ ಸಂಘ ಒತ್ತಾಯಿಸಿದೆ.

ಸಂಘದ ಪದಾಧಿಕಾರಿಗಳು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.

ಈಗಾಗಲೇ ಮುಂಚೂಣಿ ಸಿಬ್ಬಂದಿಯ ವರ್ಗಾವಣೆಗೆ ಕೌನ್ಸೆಲಿಂಗ್ ವ್ಯವಸ್ಥೆ ಜಾರಿ ಮಾಡಲಾಗಿದೆ. ಮುಂಚೂಣಿ ಸಿಬ್ಬಂದಿ ಎಂದರೆ, ಡಿಆರ್‌ಎಫ್‌ಒ, ಗಾರ್ಡ್, ವಾಚರ್ಸ್, ಮಾವುತರು-ಕಾವಡಿಗಳು. ಇದನ್ನು ಆರ್‌ಎಫ್‌ಒಗಳಿಗೂ ವಿಸ್ತರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕೌನ್ಸೆಲಿಂಗ್ ನಿರ್ವಹಣಾ ವ್ಯವಸ್ಥೆ

'ಅರಣ್ಯ ರಕ್ಷಣೆಯಲ್ಲಿ ವಲಯ ಅರಣ್ಯ ಅಧಿಕಾರಿಗಳ ಪಾತ್ರ ಮಹತ್ವದ್ದು. ಅರಣ್ಯಗಳು ಮತ್ತು ವನ್ಯಜೀವಿ ಧಾಮಗಳ ಸಂರಕ್ಷಣೆಯಲ್ಲಿ ದಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಆದರೆ, ಇತ್ತೀಚಿನ ವರ್ಷಗಳಲ್ಲಿ ಇತರ ಇಲಾಖೆಗಳಂತೆ ಅರಣ್ಯ ಇಲಾಖೆಯಲ್ಲೂ ನಿರ್ದಿಷ್ಟ ಅರಣ್ಯ ವಲಯಗಳಿಗೆ ಹಣ ಕೊಟ್ಟು ಪೋಸ್ಟಿಂಗ್ ಪಡೆದುಕೊಳ್ಳುವ ಕೆಟ್ಟ ಪರಂಪರೆ ಆರಂಭವಾಗಿದೆ. ಇದಕ್ಕೆ ಕಡಿವಾಣ ಹಾಕಬೇಕು' ಎಂದು ಹೇಳಿದ್ದಾರೆ. 'ಈ ರೀತಿಯ ವರ್ಗಾವಣೆಗಳಿಂದ ಅರಣ್ಯ ಒತ್ತುವರಿ ತೆರವು, ವನ್ಯಜೀವಿ ಸಂಘರ್ಷ ನಿರ್ವಹಣೆ ಮತ್ತು ಸಾಮಾಜಿಕ ಅರಣ್ಯದಂತಹ ದೀರ್ಘಾವಧಿ ಯೋಜನೆಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಇಂತಹ ಯೋಜನೆಗಳಿಗೆ ಅಧಿಕಾರಿಯ ನಿರಂತರ ಉಪಸ್ಥಿತಿ ಮತ್ತು ಸ್ಥಳೀಯ ಜ್ಞಾನ ಅಗತ್ಯ. ಅನಿಯಂತ್ರಿತ ವರ್ಗಾವಣೆ ಯೋಜನೆಗಳು ಹಳಿ ತಪ್ಪಲು ಕಾರಣ ಆಗಿವೆ. ಭ್ರಷ್ಟಾಚಾರಕ್ಕೆ ಪರೋಕ್ಷವಾಗಿ ಪ್ರೋತ್ಸಾಹ ನೀಡಿದಂತಾಗಿದೆ' ಎಂದು ದೂರಿದ್ದಾರೆ.



### ಆರ್‌ಎಫ್‌ಒಗಳ ಬೇಡಿಕೆಗಳು

ಕೌನ್ಸೆಲಿಂಗ್ ಮೂಲಕ ವರ್ಗಾವಣೆಗಾಗಿ ಆನ್‌ಲೈನ್ ಪೋರ್ಟಲ್ ಅಭಿವೃದ್ಧಿಪಡಿಸಬೇಕು. ಈಗ ಇರುವ ಟಿಸಿಎಂಎಸ್ ಅನ್ನು ಅಬಕಾರಿ ಇಲಾಖೆಯ ಮಾದರಿಯಲ್ಲಿ ಒಂದು ಸಮಗ್ರ ಆನ್‌ಲೈನ್ ಪೋರ್ಟಲ್ ಆಗಿ ಮೇಲ್ದರ್ಜೆಗೇರಿಸಬೇಕು. ಸೇವಾ ಹಿರಿತನ ದುರ್ಗಮ ಮತ್ತು ಅತಿಸೂಕ್ಷ್ಮ ಪ್ರದೇಶಗಳಲ್ಲಿನ ಸೇವೆ ಕಾರ್ಯಕ್ಷಮತೆ ಮೌಲ್ಯ ಮಾಪನ ವಿಶೇಷ ಸಾಧನೆಗಳು ಪತಿ ಪತ್ನಿ ಪ್ರಕರಣಗಳು ಗಂಭೀರ ಅನಾರೋಗ್ಯ ಮತ್ತು ಮಕ್ಕಳ ಶಿಕ್ಷಣದಂತಹ ವಿಷಯಗಳಿಗೆ ನಿರ್ದಿಷ್ಟ ಅಂಕ ನೀಡುವ ಅಂಕ-ಆಧಾರಿತ ಮಾನದಂಡವನ್ನೂ ಅಳವಡಿಸಬೇಕು. ವರ್ಗಾವಣೆಗೆ ಅರ್ಹರಾದ ಅಧಿಕಾರಿಗಳ ಪಟ್ಟಿ ಅವರು ಗಳಿಸಿದ ಅಂಕಗಳು ಮತ್ತು ಅಂತಿಮ ವರ್ಗಾವಣೆ ಆದೇಶಗಳನ್ನು ಸಾರ್ವಜನಿಕವಾಗಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಇದರಿಂದ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಖಚಿತಪಡಿಸುತ್ತದೆ.

# ಜಾತಿ ಗಣತಿ ಜಟಾಪಟಿ: ಅತ್ತ ಸಮುದಾಯ, ಇತ್ತ ಪಕ್ಷ, ಇಕ್ಕಟ್ಟಿನಲ್ಲಿ ಸಿಲುಕಿದ ಡಿಸಿಎಂ

• ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ( ಜಾತಿ ಗಣತಿ) ಅಧಿಕೃತವಾಗಿ ಆರಂಭ • ಸಿಎಂ ಸಿದ್ದರಾಮಯ್ಯ ತನ್ನ ನಿಲುವಿಗೆ ಬದ್ಧ

• ಉದಯವಾಹಿನಿ, ಬೆಂಗಳೂರು

ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ( ಜಾತಿ ಗಣತಿ) ಅಧಿಕೃತವಾಗಿ ಆರಂಭಗೊಂಡಿದೆ. ಒಂದು ಕಡೆಯಲ್ಲಿ ಮೈಸೂರು ದಸರಾ ಉದ್ಘಾಟನೆ ದಿನವೇ ಜಾತಿ ಗಣತಿಯೂ ಆರಂಭಗೊಂಡಿದೆ. ಈ ಮೂಲಕ ಸಿಎಂ ಸಿದ್ದರಾಮಯ್ಯ ತನ್ನ ನಿಲುವಿಗೆ ಬದ್ಧರಾಗಿ ನಡೆದುಕೊಂಡಿದ್ದಾರೆ. ಆದರೆ, ಸರ್ಕಾರ ಹಾಗೂ ಸಿಎಂ ನಡೆಯಿಂದ ಡಿಸಿಎಂ ಡಿಕೆ ಶಿವಕುಮಾರ್ ಹಾಗೂ ಇಬ್ಬರು ಸಚಿವರು ಇಕ್ಕಟ್ಟಿಗೆ ಸಿಲುಕಿದ್ದಾರೆ. ಜಾತಿ ಗಣತಿಗೆ ಪ್ರಭಾವಿ ಸಮುದಾಯಗಳ ವಿರೋಧ ಇದೆ. ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯ ಜಾತಿ ಗಣತಿಗೆ ವಿರೋಧ ವ್ಯಕ್ತಪಡಿಸಿದೆ. ಭಾನುವಾರ ನಡೆದ ಒಕ್ಕಲಿಗ ಸ್ವಾಮೀಜಿಗಳ ಸಭೆಯಲ್ಲೂ ಡಿಕೆಶಿ ಆದಿಯಾಗಿ ಸಚಿವರು ಹಾಗೂ ಇತರ ಸಮುದಾಯದ ಮುಖಂಡರು ಭಾಗಿಯಾಗಿದ್ದರು. ಮತ್ತೊಂದು ಕಡೆಯಲ್ಲಿ ಲಿಂಗಾಯತ ಸಮುದಾಯದ ಸ್ವಾಮೀಜಿಗಳ ಪಕ್ಷಾತೀಯವಾಗಿ ಮುಖಂಡರನ್ನು ಕರೆದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.







**ಪಕ್ಷ ವರ್ಸಸ್ ಸಮುದಾಯ:** ಜಾತಿ ಗಣತಿ ರಾಷ್ಟ್ರಮಟ್ಟದಲ್ಲಿ ನಡೆಸಬೇಕು ಎಂಬ ನಿಲುವು ಕಾಂಗ್ರೆಸ್ ಪಕ್ಷದ್ದಾಗಿದೆ. ಕಾಂತರಾಜು ಆಯೋಗದ ಸಮೀಕ್ಷೆಯ ದತ್ತಾಂಶಗಳು 10 ವರ್ಷ ಹಳೆಯದಾಗಿದೆ ಎಂಬ ಕಾರಣವನ್ನು ನೀಡಿ ಹೊಸತಾಗಿ ಸಮೀಕ್ಷೆಯನ್ನು ನಡೆಸಲು ಸರ್ಕಾರ ತೀರ್ಮಾನಿಸಿತ್ತು. ಅದರಂತೆ ಸಮೀಕ್ಷೆ ಆರಂಭಗೊಂಡಿದೆ.

ಆದರೆ ಡಿಸಿಎಂ ಡಿಕೆ ಶಿವಕುಮಾರ್ ಅವರು ಈ ಸಂದರ್ಭದಲ್ಲಿ ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ಸಮುದಾಯದ ಪ್ರಮುಖರು ಜಾತಿ ಗಣತಿಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಸಭೆಯಲ್ಲಿ ತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ಸ್ವಾಮೀಜಿಗಳು ವ್ಯಕ್ತಪಡಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಡಿಕೆಶಿ ಭಾನುವಾರ ನಡೆದ ಸಭೆಯಲ್ಲೂ ಜಾತಿ ಗಣತಿ ಮುಂದೂಡುವ ಬಗ್ಗೆ ಸಮುದಾಯದ ಅಭಿಪ್ರಾಯಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಸಚಿವ ಸಂಪುಟ ಸಭೆಯಲ್ಲೂ ಜಾತಿ ಗಣತಿಗೆ ತನ್ನ ಅಭಿಪ್ರಾಯ ವಿರೋಧವಾಗಿತ್ತು ಎಂಬ ಸಂದೇಶವನ್ನು ಹೊರಗಡೆ ರವಾನೆ ಮಾಡಿದ್ದಾರೆ.

**ಪಕ್ಷದ ಹೈಕಮಾಂಡ್ ನಿಲುವಿಗೆ ಭಿನ್ನ ಸಂದೇಶ:** ಮತ್ತೊಂದು ಕಡೆಯಲ್ಲಿ ಕಾಂಗ್ರೆಸ್ ಪಕ್ಷ ಜಾತಿ ಗಣತಿ ಪರವಾಗಿ ಇದೆ. ಹೀಗಿರುವಾಗ ಸಮುದಾಯ ಮತ್ತು ಪಕ್ಷ ಎರಡಕ್ಕೂ ಸಮ್ಮತಿ ಆಗುವಂತಹ ನಿಲುವು ಕೈಗೊಳ್ಳಬೇಕಾದ ಅನಿವಾರ್ಯತೆ ಸ್ಥಿತಿಯಲ್ಲಿದ್ದಾರೆ. ಇತ್ತೀಚೆಗೆ ಡಿಕೆಶಿ ಸದನದಲ್ಲಿ ಆರ್ ಎಸ್ ಎಸ್ ಗೀತೆಯನ್ನು ಹಾಡುವ ಮೂಲಕ ಸುದ್ದಿಯಲ್ಲಿದ್ದರು. ಹೈಕಮಾಂಡ್ ನಾಯಕರಿಗೆ ಈ ಬಗ್ಗೆ ಸ್ಪಷ್ಟನೆ ಕೊಡಬೇಕಾದ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿತ್ತು. ಆದರೆ ಇದೀಗ ಮತ್ತೆ ಅಂತಹ ಸ್ಥಿತಿ ಡಿಕೆಶಿಗೆ ನಿರ್ಮಾಣವಾಗಿದೆ. ಜಾತಿ ಗಣತಿಯ ಬಗ್ಗೆ ತನ್ನ ನೇರ ನಿಲುವು ಏನೆಂಬುವುದನ್ನು ಬಹಿರಂಗಗೊಳಿಸಲಾಗದೆ ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ.

### ಖಂಡ್ರೆ, ಎಂಬಿ ಪಾಟೀಲ್ ಪರಿಸ್ಥಿತಿ ಭಿನ್ನವಾಗಿಲ್ಲ

ಮತ್ತೊಂದು ಕಡೆಯಲ್ಲಿ ರಾಜ್ಯದ ಪ್ರಭಾವಿ ಸಚಿವರಾದ ಎಂಬಿ ಪಾಟೀಲ್ ಹಾಗೂ ಈಶ್ವರ ಖಂಡ್ರೆ ಅವರ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಜಾತಿ ಗಣತಿ ವಿಚಾರವಾಗಿ ಲಿಂಗಾಯತ ಸಮುದಾಯದಲ್ಲಿ ಸಾಕಷ್ಟು ವಿರೋಧಗಳಿವೆ. ಅಲ್ಲದೆ, ಕ್ರಿಶ್ಚಿಯನ್ ಧರ್ಮದ ಹೆಸರನ್ನು ಜಾತಿ ಸೂಚಕದ ಮುಂದೆ ಉಲ್ಲೇಖ ಮಾಡಿದ್ದಕ್ಕೆ ಅಸಮಾಧಾನವೂ ಇದೆ. ಈಶ್ವರ್ ಖಂಡ್ರೆ ಅವರು ಜಾತಿ ಗಣತಿಯ ಬಗ್ಗೆ ತಮ್ಮ ನಿಲುವು ಏನು ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸುವ ಗೌಜಿಗೆ ಹೋಗುತ್ತಿಲ್ಲ. ಸಚಿವ ಸಂಪುಟ ಸಭೆಯಲ್ಲೂ ಜಾತಿ ಗಣತಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಅವರಂತೆ ಎಂಬಿ ಪಾಟೀಲ್ ಕೂಡಾ ಸಂಪುಟ ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಬಹಿರಂಗವಾಗಿ ಸ್ಪಷ್ಟ ನಿಲುವನ್ನು ವ್ಯಕ್ತಪಡಿಸುವ ಧೈರ್ಯವನ್ನು ತೋರಿಸುತ್ತಿಲ್ಲ. ಸದ್ಯ ಜಾತಿ ಗಣತಿ ಆರಂಭಗೊಂಡರೂ ಒಂದಿಷ್ಟು ಗೊಂದಲಗಳು ಸಮಸ್ಯೆಯನ್ನು ಸೃಷ್ಟಿಸಿದೆ.

ಈ ದಿನದ ದರ | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹11,307/Gram24ct ₹10,365/Gram22ct | ಬೆಳ್ಳಿ: ₹138.60/Gram

# ಕಾಂಗ್ರೆಸ್ ಸರ್ಕಾರದ ಬೂಟಾಟಿಕೆ, ಪುಂಡಾಟಿಕೆಯ ಸಮೀಕ್ಷೆ

## ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಆಗ್ರಹ, ಜಾತಿಗಣತಿ ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಜಾತಿಗಳ ಕ್ರಿಶ್ಚಿಯನ್ ಟ್ಯಾಗ್ ಕೈಬಿಡಿ

ಒಂದು ನಿಗದಿತ ಧರ್ಮವನ್ನು ಬೆಳೆಸುವ ಉದ್ದೇಶ ಸರ್ಕಾರಕ್ಕೆ ಇದ್ಯಾ? ಈ ಸಮೀಕ್ಷೆಯಲ್ಲಿ ಆದಿ ಆಂಧ್ರ ಕ್ರಿಶ್ಚಿಯನ್, ಆದಿ ಕರ್ನಾಟಕ ಕ್ರಿಶ್ಚಿಯನ್, ಆದಿ ದ್ರಾವಿಡ ಕ್ರಿಶ್ಚಿಯನ್ ಸೇರಿ ಹತ್ತಾರು ಜಾತಿಗಳನ್ನು ಸೇರಿಸಲು ನಿಮಗೆ ಯಾರು ಪ್ರೇರಣೆ ಕೊಟ್ಟಿದ್ದಾರೆ. ಈ ಜಾತಿಗಳ ಕ್ರಿಶ್ಚಿಯನ್ ಟ್ಯಾಗ್ ಅನ್ನು ಸಮೀಕ್ಷೆಯ ವೇಳೆ ಸೇರಿಸಬಾರದು ಎಂದು ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಆಗ್ರಹಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತಿಗಣತಿ ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ ಎಂದರು.

ಇದನ್ನು ಸಾಮಾಜಿಕ-ಆರ್ಥಿಕ ಸರ್ವೇ ಎಂದು ಹೇಳಿದ್ದಾರೆ. ಆದರೆ, ಇವರು ಜಾತಿಗಳಿಗೆ ಆದಿ ಆಂಧ್ರ ಕ್ರಿಶ್ಚಿಯನ್, ಆದಿ ಕರ್ನಾಟಕ ಕ್ರಿಶ್ಚಿಯನ್, ಆದಿದ್ರಾವಿಡ ಕ್ರಿಶ್ಚಿಯನ್, ಬಂಜಾರ ಕ್ರಿಶ್ಚಿಯನ್, ಬುಡಗ ಜಂಗಮ ಕ್ರಿಶ್ಚಿಯನ್, ಹೊಲೆಯ ಕ್ರಿಶ್ಚಿಯನ್ ಹೀಗೆ ಪರಿಶಿಷ್ಟ ಜಾತಿಗಳಲ್ಲಿ ಇರುವ ಎಲ್ಲಕ್ಕೂ ಕ್ರಿಶ್ಚಿಯನ್ ಪದ ಸೇರಿಸಿದ್ದಾರೆ. ಇದರ ಹಿಂದೆ ಇವರನ್ನೆಲ್ಲ ಕ್ರಿಶ್ಚಿಯನ್ ಮಾಡುವ ಉದ್ದೇಶವೇ ಕಾಂಗ್ರೆಸ್ ಸರ್ಕಾರದ ಈ ಸಮೀಕ್ಷೆ ಬೂಟಾಟಿಕೆ ಮತ್ತು ಪುಂಡಾಟಿಕೆಯದು ಎಂದು ಆಕ್ಷೇಪಿಸಿದರು.

ಯಾವ ಜಾತಿಯಿಂದ ಬಂದವರು, ಯಾವ ಧರ್ಮದಿಂದ ಬಂದವರೆಂದು ನೀವು ಸಮೀಕ್ಷೆಯಲ್ಲಿ ತಿಳಿಸಬೇಕಿಲ್ಲ. ಇದು ಸರ್ಕಾರಿ ದಾಖಲೆಗೆ ಬೇಕಾಗಿಲ್ಲ. ಇದೆಲ್ಲ ಬಿಟ್ಟು ಕುರುಬ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್ ಹೀಗೆ ಮಾಡುವುದು ಕಾನೂನುಬಾಹಿರ. ಇದನ್ನು ಮಾಡಿದರೆ ಜನಾಂಗಗಳ ಹೋರಾಟ ಸತತವಾಗಿ ಇರಲಿದೆ. ರಾಜ್ಯದಲ್ಲಿ ಯಾರೂ ನೆಮ್ಮದಿಯಿಂದ ಇರಬಾರದೆಂಬ ಉದ್ದೇಶ ಸರ್ಕಾರಕ್ಕಿದೆ. ಇನ್ನು ಹಿಂದುಳಿದ ವರ್ಗಗಳ ಆಯೋಗದ ಸಮೀಕ್ಷಾ ವರದಿ ಹೇಗಿರುತ್ತದೆ ಎಂಬುದು ಜನರಿಗೆ ಬಿಟ್ಟ ವಿಚಾರ ಎಂದು ಕಿಡಿಕಾರಿದರು.

**ಸಮೀಕ್ಷೆ ವಿಚಾರದಲ್ಲಿ ಟ್ರಂಪ್ ಮಾರ್ಗದರ್ಶನ ನೀಡಿದರೇ:** ಸಮೀಕ್ಷೆ ವಿಚಾರದಲ್ಲಿ ಟ್ರಂಪ್ ಮಾರ್ಗದರ್ಶನ ನೀಡಿದರೇ ಸೋನಿಯಾ ಗಾಂಧಿ ಈ ರೀತಿ ಮಾಡಲು ಹೇಳಿದ್ದಾರಾ? ಜನಸಾಮಾನ್ಯರು ಅರ್ಜಿ ನೀಡಿ ಅಥವಾ ಬೀದಿಗಿಳಿದು ಕ್ರಿಶ್ಚಿಯನ್ ಎಂದು ಸೇರಿಸಲು ಒತ್ತಾಯಿಸಿದರೇ ಎಂದು ಪ್ರಶ್ನಿಸಿದರು. ಇದನ್ನು ಮಾಡದಂತೆ ಜನರು ಬೀದಿಗೆ ಇಳಿದಿದ್ದಾರೆ. ನಿಮಗೆ ಅದರ ಕುರಿತು ಗೌರವ ಇಲ್ಲ. ಮುಖ್ಯಮಂತ್ರಿ ಒಬ್ಬರನ್ನು ಹೊರತುಪಡಿಸಿದರೆ ಇಡೀ ಕಾಂಗ್ರೆಸ್ ಸಚಿವ ಸಂಪುಟವು ಇದರ ವಿರುದ್ಧ ಇದೆ. ಬಿಜೆಪಿ ಪೂರ್ಣ ಮುಖಂಡತ್ವ ನಿಮ್ಮ ವಿರುದ್ಧ ಇದೆ. ಜನತಾದಳ ವಿರುದ್ಧ ಇದೆ. ಮಠಮಾನ್ಯಗಳ ಗುರುಹಿರಿಯರು, ಸಮುದಾಯಗಳ ಮುಖಂಡರು ನಿಮ್ಮ ವಿರುದ್ಧ ಇದ್ದಾರೆ ಎಂದು ಗಮನಸೆಳೆದರು.

ರಾಜ್ಯದಲ್ಲಿ ಅತಿಯಾದ ಗೊಂದಲದಿಂದ, ಗೊಂದಲಗಳ ಮಧ್ಯೆ ಇವತ್ತಿನಿಂದ ಹಿಂದುಳಿದ ವರ್ಗಗಳ ಆಯೋಗದ ಮೂಲಕ ಜಾತಿಗಳ ಸಮೀಕ್ಷೆ ಮಾಡಲು ಸರ್ಕಾರ ಮುಂದಾಗಿದೆ. ಈ ಸಮೀಕ್ಷೆ ಹೊಸದೇನೂ ಅಲ್ಲ.

ಕಾಂತರಾಜು ಆಯೋಗ ರಚಿಸಿ ಸಮೀಕ್ಷೆ ಮಾಡಲಾಗಿತ್ತು. ಆದರೆ ಸರ್ಕಾರ ಅದನ್ನು ಒಪ್ಪಲಿಲ್ಲ. ಆ ವರದಿ ಎಲ್ಲಿ ಹೋಯಿತೆಂದು ಗೊತ್ತಿಲ್ಲ. ಅದು ಕಳವಾಗಿದೆಯಂತೆ, ಅದೇನು ಚಿನ್ನವೇ? ಕದ್ದ ಆಯೋಗದ ವರದಿಯನ್ನು ಪತ್ತೆ ಮಾಡಲು ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ ಎಂದು ದೂರಿದರು.

### ಜನರ ಹಣ ಇಷ್ಟಬಂದಂತೆ ಪೋಲು ಮಾಡಲು ಈ ಸಮೀಕ್ಷೆ

**ಮೊದಲನೇ ಆಯೋಗಕ್ಕೆ ಸುಮಾರು 180 ಕೋಟಿ ರೂ. ಖರ್ಚು ಮಾಡಿದ್ದರು. ಜಯಪ್ರಕಾಶ್ ಹೆಗ್ಡೆಯವರ ಆಯೋಗದ ವರದಿಗೆ ಎಷ್ಟು ಖರ್ಚಾಗಿದೆ ಎಂದು ಬಾಯಿ ಬಿಡುತ್ತಿಲ್ಲ. ಕಾಂತರಾಜು ವರದಿ ಒಪ್ಪಿದ್ದರೆ ಜನರ ಭಾವನೆಗೆ ಗೌರವ ಬರುತ್ತಿತ್ತು. ಈಗ ಮತ್ತೆ 425 ಕೋಟಿ ರೂ. ಖರ್ಚು ಮಾಡುತ್ತಿದ್ದಾರೆ. ಇದೇನು ಕಾಂಗ್ರೆಸ್ಸಿನ ಖಜಾನೆ, ಮನೆಯಿಂದ ತಂದು ಕೊಡುತ್ತೀರಾ? ಜನರ ಹಣವನ್ನು ಇಷ್ಟಬಂದಂತೆ ಪೋಲು ಮಾಡಲು ನಿಮಗೆ ಯಾರು ಅಧಿಕಾರ ಕೊಟ್ಟವರು? ಎಂದು ಪ್ರಶ್ನಿಸಿದರು.**

---

## ನಕಲಿ reward ಲಿಂಕ್ ಬಗ್ಗೆ ಇರಲಿ ಎಚ್ಚರ! ಏನಿದು ಸೈಬರ್ ವಂಚಕರ ಹೊಸ ತಂತ್ರ?

• ಉದಯವಾಹಿನಿ, ಬೆಂಗಳೂರು

ಹಬ್ಬದ ಸೀಸನ್ ಆರಂಭವಾಗುತ್ತಿದ್ದಂತೆ ಬ್ಯಾಂಕ್ ಗ್ರಾಹಕರೇ ಹುಷಾರಾಗಿರಿ. ಸೈಬರ್ ವಂಚಕರು, ನಕಲಿ ವೆಬ್ ಸೈಟ್ ಅಥವಾ ಲಿಂಕ್‌ಗಳ ಮೂಲಕ ಬಹುಮಾನ, ಕ್ಯಾಶ್‌ಬ್ಯಾಕ್ ಆಫರ್‌ಗಳೊಂದಿಗೆ ವಂಚನೆಗೆ ಬೀಳಿಸುತ್ತಿದ್ದಾರೆ. ಈ ಕುರಿತು TNIEಗೆ ಜೊತೆ ಮಾತನಾಡಿದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು, ಸೈಬರ್ ವಂಚಕರು ಫೋನ್ ಕಾಲ್, SMS ಅಥವಾ WhatsApp ಮೂಲಕ ಅಧಿಕೃತ ಬ್ಯಾಂಕಿಂಗ್ ಆ್ಯಪ್ ಅಥವಾ ವೆಬ್‌ಸೈಟ್‌ಗಳಲ್ಲಿ ದುರುದ್ದೇಶಪೂರಿತ APKಫೈಲ್ ಗಳನ್ನು ಕಳುಹಿಸುವ ಮೂಲಕ ವಂಚಿಸುತ್ತಾರೆ ಎಂದು ತಿಳಿಸಿದರು.

**ಸೈಬರ್ ವಂಚರು ಹೇಗೆಲ್ಲಾ ಆಮಿಷವೊಡ್ಡುತ್ತಾರೆ:** ಬಳಸದ ಕಾರ್ಡ್‌ಗಳಿಗೆ ಬಹುಮಾನ ನೀಡುತ್ತೇವೆ ಅಥವಾ ಹಬ್ಬದ ಕ್ಯಾಶ್‌ಬ್ಯಾಕ್ ಸಿಕ್ಕಿದೆ ಎಂದು ವಂಚರು ಆಮಿಷದ ವಂಚನೆಗೆ ಬೀಳಿಸುತ್ತಾರೆ. ಇದಕ್ಕಾಗಿ ಪ್ರಮುಖ ಸಾರ್ವಜನಿಕ ವಲಯ ಮತ್ತು ಖಾಸಗಿ ಬ್ಯಾಂಕ್‌ಗಳು ಮತ್ತಿತರ ಪ್ರಮುಖ ಹಣಕಾಸು ಸಂಸ್ಥೆಗಳ ಹೆಸರನ್ನು ಅವರು ಬಳಸುತ್ತಾರೆ. ಆ ಲಿಂಕ್ ಗಳನ್ನು ಒಮ್ಮೆ ಡೌನ್‌ಲೋಡ್ ಮಾಡಿದ ನಂತರ ದುರುದ್ದೇಶಪೂರಿತ ಫೈಲ್‌ಗಳು ದೂರದಿಂದಲೇ ವಂಚಕರು ನಮ್ಮ ಬ್ಯಾಂಕ್ ಖಾತೆ ಪ್ರವೇಶಿಸಲು ಅವಕಾಶ ಮಾಡಿಕೊಡುತ್ತದೆ. ಅಲ್ಲದೇ ಬ್ಯಾಂಕ್ ಖಾತೆಯಿಂದ ಸುಲಭವಾಗಿ ಹಣ ದೋಚುತ್ತಾರೆ.

---

## ಏರ್‌ಪೋರ್ಟ್‌ನಲ್ಲಿ ದಸರಾ ಸಂಭ್ರಮ ಸೆ.29ರವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ರಾಜ್ಯಾದ್ಯಂತ ಎಲ್ಲೆಡೆ ನವರಾತ್ರಿ ಸಂಭ್ರಮ ಮನೆಮಾಡಿದೆ. ಅದೇ ರೀತಿ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದಸರಾ ಹಿನ್ನೆಲೆಯಲ್ಲಿ ಸೆ. 22 ರಿಂದ 29 ರವರೆಗೆ ಎಂಟು ದಿನಗಳ ಕಾಲ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಈ ಕಾರ್ಯಕ್ರಮಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗ-ಪ್ರಾಯೋಜಕತ್ವ ನೀಡಿದ್ದು, ಈ ಸಾಂಸ್ಕೃತಿಕ ಹಬ್ಬದಲ್ಲಿ ಭಾಗವಹಿಸಲು ಸಾರ್ವಜನಿಕರಿಗೆ ಮುಕ್ತ ಮತ್ತು ಉಚಿತ ಅವಕಾಶವಿದ್ದು, ವಿಮಾನ ಪ್ರಯಾಣದ ಟಿಕೆಟ್ ಅಗತ್ಯವಿರುವುದಿಲ್ಲ. ಈ ಬಗ್ಗೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಮಾಹಿತಿ ನೀಡಿದೆ. ಏರ್‌ಪೋರ್ಟ್‌ನಲ್ಲಿ ದಸರಾ ಸಂಭ್ರಮಕ್ಕೆ ಚಾಲನೆ ದೊರೆತಿದ್ದು, ಡೊಳ್ಳು ಕುಣಿತ, ಗಾರುಡಿ ಗೊಂಬೆ ಪ್ರದರ್ಶನ ನೋಡುಗರ ಗಮನ ಸೆಳೆಯಿತು. ಟರ್ಮಿನಲ್ 1 ಮತ್ತು ಟರ್ಮಿನಲ್ 2 ರಲ್ಲಿ ನಡೆಯಲಿರುವ ದಸರಾ ಸಂಭ್ರಮಾಚರಣೆಗೆ ಆಗಮಿಸಿ ಕಲೆ, ಸಂಗೀತ, ನೃತ್ಯ ಮತ್ತು ಸಂಪ್ರದಾಯದ ಸೊಬಗನ್ನು ಆಸ್ವಾದಿಸಲು ಪ್ರಾಧಿಕಾರ ಮನವಿ ಮಾಡಿದೆ. ಪ್ರಯಾಣಿಕರು, ಸಾರ್ವಜನಿಕರು ತಮ್ಮ ಸ್ನೇಹಿತರು ಮತ್ತು ಕುಟುಂಬದವರೊಂದಿಗೆ ತೆರಳಿ ಬೆಂಗಳೂರು ಏರ್‌ಪೋರ್ಟ್‌ನಲ್ಲಿ ದಸರಾ ಹಬ್ಬದ ಸಂಭ್ರಮವನ್ನು ಸವಿಯಬಹುದಾಗಿದೆ.

---

## ಬಾನು ಮುಷ್ತಾಕ್ ಮೇಲೆ ನಮಗೆ ಗೌರವ ಹೆಚ್ಚಾಗಿದೆ: ನಾರಾಯಣಸ್ವಾಮಿ

• ಉದಯವಾಹಿನಿ, ಬೆಂಗಳೂರು

ಸಾಹಿತಿ ಬಾನು ಮುಷ್ತಾಕ್ ಅವರ ಮೇಲೆ ನಮಗೆ ಗೌರವ ಹೆಚ್ಚಾಗಿದೆ ಎಂದು ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ. ಬಾನು ಮುಷ್ತಾಕ್ ಅವರ ಹಿಂದಿನ ಹೇಳಿಕೆಗೆ ನಮ್ಮ ವಿರೋಧ ಇತ್ತು. ಇಡೀ ರಾಜ್ಯದಲ್ಲಿ ಹಿಂದುತ್ವ ಪರಿಪಾಲಕರು ಯಾರೂ ಅವರ ಹೇಳಿಕೆ ಒಪ್ಪಲಿಲ್ಲ. ಇವತ್ತು ಅವರ ಭಾಷಣ ನೋಡಿ ನಮಗೆ ಸಂತೋಷ ಆಗಿದೆ ಎಂದರು. ಮುಸ್ಲಿಂ ಹೆಣ್ಣು ಮಗಳು ಹಿಂದೂ ಹೆಣ್ಣುಮಗಳಂತೆ ಅರಿಶಿಣ ಬಣ್ಣದ ಸೀರೆಯುಟ್ಟು ಹೂ ಮುಡಿದು ದೇವಸ್ಥಾನಕ್ಕೆ ಬಂದು, ಆರತಿ ಬೆಳಗಿ, ಮಂಗಳಾರತಿ ತೆಗೆದುಕೊಂಡಿದ್ದಾರೆ. ಹಿಂದೂ ಸಂಸ್ಕೃತಿ ಪರವಾಗಿ ನಿಂತು ಅವರು ದಸರಾ ಉದ್ಘಾಟನೆ ಮಾಡಿದ್ದಾರೆ ಎಂದು ಹೇಳಿದರು. ನಮಗೆ ಏನು ಬೇಕಿತ್ತೋ? ನಮ್ಮ ನಿರೀಕ್ಷೆ ಏನು ಇತ್ತೋ ಅದನ್ನು ಅವರು ಇವತ್ತು ಮಾಡಿದ್ದಾರೆ. ಹಿಂದೂ ಸಂಸ್ಕೃತಿಗೆ ಗೌರವ ಕೊಟ್ಟು ಬಾನು ಮುಷ್ತಾಕ್ ಇವತ್ತು ನಡೆದುಕೊಂಡಿದ್ದಾರೆ. ಹೀಗಾಗಿ ಅವರ ಮೇಲೆ ನಮಗೆ ಗೌರವ ಹೆಚ್ಚಾಗಿದೆ ಎಂದು ತಿಳಿಸಿದರು.

---

## ಮಕ್ಕಳ ದಾಸೋಹ ಸಂಗ್ರಹಕ್ಕೆ ಕಾರು ಉಡುಗೊರೆ ನೀಡಿದ ವಿನೋದ್ ರಾಜ್

• ಉದಯವಾಹಿನಿ, ಬೆಂಗಳೂರು

ದಿ.ಹಿರಿಯ ನಟಿ, ತಾಯಿ ಲೀಲಾವತಿ ಅವರ ಸ್ಮರಣಾರ್ಥ ಮಠದ ಮಕ್ಕಳ ಅನ್ನ ದಾಸೋಹ ಸಂಗ್ರಹ ಸೇವೆಗೆ ನೆರವಾಗುವ ನಿಟ್ಟಿನಲ್ಲಿ ನಟ ವಿನೋದ್ ರಾಜ್ ಅವರು ಕಾರೊಂದನ್ನು ಉಡುಗೊರೆಯಾಗಿ ನೀಡಿದ್ದಾರೆ. ಬೆಂಗಳೂರು ಹೊರವಲಯದ ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿಯ ತೋಟದಲ್ಲಿ ಬಾಗಲಕೋಟೆಯ ಮಹಾಂತ ಮಂದಾರ ಮಠ ಬನಹಟ್ಟಿ ಪೂಜ್ಯ ಶ್ರೀ ಮಹಾಂತ ದೇವರು ಸ್ವಾಮೀಜಿ ಅವರಿಗೆ ಮಾರುತಿ ಕಂಪನಿಯ ಕಾರನ್ನು ಹಸ್ತಾಂತರ ಮಾಡಿ ನೆರವಾಗಿದ್ದಾರೆ. ಈ ಮೊದಲು ಸ್ಥಳೀಯವಾಗಿ ಲೀಲಾವತಿ ಅವರ ಹೆಸರಿನಲ್ಲಿ ಸಾರ್ವಜನಿಕ ಆಸ್ಪತ್ರೆ, ಪಶು ಚಿಕಿತ್ಸಾಲಯ, ರಸ್ತೆ ರಿಪೇರಿ ಇನ್ನಿತರ ಕೆಲಸ ಕಾರ್ಯಗಳ ಮೂಲಕ ಸಮಾಜಕ್ಕೆ ತನ್ನದೇ ರೀತಿಯಲ್ಲಿ ಸಹಾಯ ಮಾಡುತ್ತ ಬಂದಿರುವ ವಿನೋದ್ ರಾಜ್ ಇದೀಗ ಮಕ್ಕಳ ಅನ್ನ ದಾಸೋಹ ಸಂಗ್ರಹಕ್ಕೆ ನೆರವಾಗುವ ನಿಟ್ಟಿನಲ್ಲಿ ಕಾರನ್ನು ಉಡುಗೊರೆಯಾಗಿ ನೀಡಿದ್ದಾರೆ. ಇದೇ ವೇಳೆ ಕಾರಿಗೆ ದೃಷ್ಟಿ ತೆಗೆದು, ನಿಂಬೆ ಹಣ್ಣು ಒಡೆದು ಶ್ರೀಗಳು ಕಾರು ಚಾಲನೆ ಮಾಡಿದರು. ಈ ಮೂಲಕ ಜನರ ಮೆಚ್ಚುಗೆಗೆ ನಟ ವಿನೋದ್ ರಾಜ್ ಸಾಕ್ಷಿಯಾಗಿದ್ದಾರೆ.

---

## ಗುಂಡಿಗಳಿಂದ ಮುಕ್ತವಾಗುತ್ತದೆಯೇ ಹೊಂಡ ಸಿಟಿ ಬೆಂಗಳೂರು?


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಧಾನಿಯಲ್ಲಿ 470 ಪ್ರಮುಖ ರಸ್ತೆಗಳಿದ್ದು, 1,344.7 ಕಿ.ಮೀ. ಉದ್ದದ ರಸ್ತೆಗಳಲ್ಲಿ ಸುಮಾರು ಶೇ. 50 ರಷ್ಟು ಗುಂಡಿಗಳಿವೆ, ಸಂಚಾರ ಇಲಾಖೆಯು ಅಂತಹ ರಸ್ತೆಗಳಲ್ಲಿ 4,830 ಗುಂಡಿಗಳನ್ನು ಗುರುತಿಸಿದೆ. ಸಂಚಾರ, ದೀರ್ಘ ಪ್ರಯಾಣದ ಸಮಯವನ್ನು ಉಲ್ಲೇಖಿಸಿ ಬೆಂಗಳೂರಿನಿಂದ ಸ್ಥಳಾಂತರಗೊಳ್ಳುವುದಾಗಿ ಲಾಜಿಸ್ಟಿಕ್ಸ್ ಸಂಸ್ಥೆ ತಿಳಿಸಿದೆ. ನಗರದ ದೀರ್ಘಕಾಲದ ರಸ್ತೆ ಮತ್ತು ಸಂಚಾರ ಸಮಸ್ಯೆಗಳು ಹಾಗೆಯೇ ಉಳಿದಿವೆ. ರಸ್ತೆಗಳು ಎಂದಾದರೂ ಗುಂಡಿಗಳಿಂದ ಮುಕ್ತವಾಗುತ್ತವೆಯೇ, ಸಂಚಾರ ಸಮಸ್ಯೆಗಳನ್ನು ಎಂದಾದರೂ ಸರಿಪಡಿಸಲಾಗುತ್ತದೆಯೇ? ನಿಯಮಿತ ಪ್ರವಾಹವು ಎಂದಾದರೂ ಕೊನೆಗೊಳ್ಳುತ್ತದೆಯೇ ಎಂದು ನಿವಾಸಿಗಳು ಪ್ರಶ್ನಿಸಿದ್ದಾರೆ. ಒಂದು ವಾರದಲ್ಲಿ ನಡೆದ ಗುಂಡಿಗಳಿಗೆ ಸಂಬಂಧಿಸಿದ ಘಟನೆಗಳು ಐಟಿ ಬೆಲ್ಟ್ ಆಗಿರುವ ಮಹದೇವಪುರದಲ್ಲಿ ಮೂಲಸೌಕರ್ಯದ ಕೊರತೆ ಬಗ್ಗೆ ತಿಳಿಸಿವೆ. ಕಳೆದ ವಾರ, 20 ಮಕ್ಕಳನ್ನು ಹೊತ್ತ ಶಾಲಾ ವ್ಯಾನ್ ಪಾಣತ್ತೂರಿನಲ್ಲಿ ರಸ್ತೆ ಬದಿಯ ಕಂದಕಕ್ಕೆ ಡಿಕ್ಕಿ ಹೊಡೆದು ಕೆಸರಿನಲ್ಲಿ ಸಿಲುಕಿತು. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅದನ್ನು ಸರಿಪಡಿಸಲು ಮುಂದಾದಾಗ, ಲಾಜಿಸ್ಟಿಕ್ಸ್ ಸಂಸ್ಥೆಯೊಂದು ಬೆಂಗಳೂರಿನಿಂದ ಹೊರಹೋಗುತ್ತಿರುವುದಾಗಿ ಘೋಷಿಸಿತು, ಇದು ರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಯಿತು. ಇದರಿಂದ ಬೆಂಗಳೂರಿನ ಐಟಿ ರಾಜಧಾನಿ ಎಂಬ ಇಮೇಜ್‌ಗೆ ಮತ್ತೆ ಭಾರಿ ಹೊಡೆತ ನೀಡಿತು. ಕೈಗಾರಿಕಾ ದಿಗ್ಗಜರಾದ ಕಿರಣ್ ಮಜುಂದಾರ್-ಶಾ ಮತ್ತು ಮೋಹನ್ ದಾಸ್ ಪೈ ಅವರು ಸರ್ಕಾರವನ್ನು ಎಚ್ಚರಿಸುತ್ತಾ, ಶಿಥಿಲಗೊಂಡಿರುವ ಮೂಲಸೌಕರ್ಯವನ್ನು ಸರಿಪಡಿಸುವಂತೆ ಹೇಳಿದರು.

---

## ಇನ್ಫೋಸಿಸ್ ಸುಧಾಮೂರ್ತಿಗೆ ಸೈಬರ್ ಕಳ್ಳರ ಕಾಟ

• ಉದಯವಾಹಿನಿ, ಬೆಂಗಳೂರು



ರಾಜ್ಯಸಭಾ ಸಂಸದೆ ಹಾಗೂ ಇನ್ಫೋಸಿಸ್ ಫೌಂಡೇಶನ್ ಚೇರ್ಮನ್ ಆಗಿರುವ ಸುಧಾಮೂರ್ತಿ ಅವರಿಗೆ ಸೈಬರ್ ವಂಚಕನೊಬ್ಬ ಕರೆ ಮಾಡಿ ಬೆದರಿಕೆ ಹಾಕಿರುವ ಘಟನೆ ನಡೆದಿದೆ.

ಮೂಲಗಳ ಪ್ರಕಾರ ಬೆಳಗ್ಗೆ 9.40ರ ವೇಳೆಗೆ ಸೈಬರ್ ವಂಚಕ ಸುಧಾಮೂರ್ತಿ ಅವರಿಗೆ ಕರೆ ಮಾಡಿದ್ದು, ತಾನು ಟೆಲಿಕಾಂ ಸಚಿವಾಲಯದ ಸಿಬ್ಬಂದಿ... ನಿಮ್ಮ ಮೊಬೈಲ್ ಫೋನ್ ಸಂಖ್ಯೆಯನ್ನು ಅಶ್ಲೀಲ ವೀಡಿಯೊಗಳನ್ನು ಪ್ರಸಾರ ಮಾಡಲು ಬಳಸಲಾಗುತ್ತಿದೆ. ಮಧ್ಯಾಹ್ನ 12 ಗಂಟೆಯೊಳಗೆ ಫೋನ್ ಸಂಖ್ಯೆಯ ಸಂಪರ್ಕ ಕಡಿತಗೊಳಿಸಲಾಗುವುದು ಎಂದು ಹೇಳಿದ್ದಾನೆ.

ಇನ್ನು ಸುಧಾಮೂರ್ತಿ ಅವರು ಈ ಸಂಖ್ಯೆಯನ್ನು ಟ್ರೂ ಕಾಲರ್‌ನಲ್ಲಿ ಪರಿಶೀಲಿಸಿದಾಗ ಅದು ಟೆಲಿಕಾಂ ವಿಭಾಗ ಎಂದು ಸೂಚಿಸಿತ್ತು. ಹೀಗಾಗಿ ಸುಧಾಮೂರ್ತಿ ಅವರು ಫೋನ್ ರಿಸೀವ್ ಮಾಡಿದ್ದಾರೆ. ಇದೀಗ ಈ ಕುರಿತು ಸುಧಾಮೂರ್ತಿ ಬೆಂಗಳೂರು ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ವಂಚಕನ ಫೋನ್ ನಂಬರ್ ಸೇರಿದಂತೆ ಹಲವು ಮಾಹಿತಿಗಳನ್ನು ಪಡೆದುಕೊಂಡಿದ್ದಾರೆ. ಸುಧಾ ಮೂರ್ತಿಗೆ ಕರೆ ಮಾಡಿ ವಂಚಿಸಲು ಯತ್ನಿಸಿದ ಆರೋಪಿ ಪತ್ತೆಗಾಗಿ ಬಲೆಬೀಸಿದ್ದಾರೆ.

**ಆಗಿದ್ದೇನು?**

ಸುಧಾಮೂರ್ತಿಗೆ ಕರೆ ಮಾಡಿದ ವಂಚಕ, 2020ರಲ್ಲಿ ನಿಮ್ಮ ಫೋನ್ ನಂಬರ್ ರಿಜಿಸ್ಟ್ರೇಶನ್ ಮಾಡಲಾಗಿದೆ. ಆದರೆ ಆಧಾರ್ ಕಾರ್ಡ್ ಲಿಂಕ್ ಮಾಡಿಲ್ಲ. ನಿಮ್ಮ ಫೋನ್ ನಂಬರ್ ಮೂಲಕ ಅಶ್ಲೀಲ ವಿಡಿಯೋಗಳನ್ನು ಬೇರೆಯವರಿಗೆ ಕಳುಹಿಸುತ್ತೇನೆ. 12 ಗಂಟೆ ಒಳಗೆ ಫೋನ್ ಸಂಪರ್ಕ ತೆಗೆಯುತ್ತೇನೆ ಎಂದು ಬೆದರಿಕೆ ಹಾಕಿದ್ದಾನೆ. ಸುಧಾ ಮೂರ್ತಿ ಅವರಿಗೆ ಸೆಪ್ಟೆಂಬರ್ 5 ರಂದು ಬೆಳಿಗ್ಗೆ 9.40 ಕ್ಕೆ ಕರೆ ಬಂದಿತು. ಟ್ರೂಕಾಲರ್ ಅಪ್ಲಿಕೇಶನ್‌ನಲ್ಲಿ ಸಂಖ್ಯೆಯನ್ನು ಪರಿಶೀಲಿಸಿದಾಗ, ಅದು ಟೆಲಿಕಾಂ ಇಲಾಖೆ ಎಂದು ತೋರಿಸಿದೆ. ಈ ಸಂಬಂಧ ಸುಧಾಮೂರ್ತಿ ಪರವಾಗಿ 65 ವರ್ಷದ ಬಿ ಗಣಪತಿ ದೂರು ದಾಖಲಿಸಿದ್ದಾರೆ. ಸೆಪ್ಟೆಂಬರ್ 20 ರಂದು ಸೈಬರ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಆರೋಪಿಗಳು ಅವರಿಂದ ಸೂಕ್ಷ್ಮ ಮಾಹಿತಿಯನ್ನು ಪಡೆಯಲು ಬಯಸಿದ್ದಾರೆ ಎಂದು ಅಧಿಕಾರಿಗಳು ಶಂಕಿಸಿದ್ದಾರೆ.

---

## ರಾಜ್ಯದ ಹೊರಗೆ ಅಧ್ಯಯನಕ್ಕೆ ಮುಂದಾದ ಸಾರಿಗೆ ಇಲಾಖೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಬೈಕ್ ಟ್ಯಾಕ್ಸಿ ನಿಷೇಧದ ನಂತರ, ರಾಜ್ಯ ಸಾರಿಗೆ ಇಲಾಖೆ ಅಧಿಕಾರಿಗಳು ಭಾರತದಾದ್ಯಂತ ಬೈಕ್ ಟ್ಯಾಕ್ಸಿಗಳು ಕಾರ್ಯನಿರ್ವಹಿಸುತ್ತಿರುವ ನಗರಗಳಿಗೆ ಭೇಟಿ ನೀಡಿದ್ದು ಹಲವು ಸವಾಲುಗಳ ನಡುವೆಯೂ ಅವುಗಳನ್ನು ಹೇಗೆ ನಿರ್ವಹಿಸಲಾಗುತ್ತಿದೆ ಎಂಬುದರ ಕುರಿತು ಅಧ್ಯಯನ ನಡೆಸಲಿದ್ದಾರೆ. ತಂಡವು ವರದಿಯನ್ನು ಸಾರಿಗೆ ಕಾರ್ಯದರ್ಶಿ ಎನ್‌ವಿ ಪ್ರಸಾದ್ ನೇತೃತ್ವದ ಉನ್ನತ ಮಟ್ಟದ ಸಮಿತಿಗೆ ಸಲ್ಲಿಸಲಿದೆ ಎಂದು ಮೂಲಗಳು ತಿಳಿಸಿವೆ.

ನಂತರ ಸಮಗ್ರ ವರದಿಯನ್ನು ಸಿದ್ಧಪಡಿಸಲು ತೀರ್ಮಾನಿಸಲಾಗಿದ್ದು, ಇದು ಕರ್ನಾಟಕದಲ್ಲಿ ಬೈಕ್ ಟ್ಯಾಕ್ಸಿಗಳ ಭವಿಷ್ಯವನ್ನು ನಿರ್ಧರಿಸುವ ಸಾಧ್ಯತೆಯಿದೆ. ಇಬ್ಬರು ಸಾರಿಗೆ ಅಧಿಕಾರಿಗಳ ತಂಡವನ್ನು ರಚಿಸಲಾಗಿದ್ದು, ಸದ್ಯ ಬೈಕ್ ಟ್ಯಾಕ್ಸಿಗಳ ಸೇವೆ ಲಭ್ಯವಿರುವ ಐದು ನಗರಗಳಾದ ದೆಹಲಿ, ಮುಂಬೈ, ಚೆನ್ನೈ, ಹೈದರಾಬಾದ್ ಕೋಲ್ಕತ್ತಾಗಳಿಗೆ ಭೇಟಿ ನೀಡಲು ಸೂಚಿಸಲಾಗಿದೆ. ಟ್ಯಾಕ್ಸಿಗಳನ್ನು ಯಾವ ಮಾರ್ಗಸೂಚಿಗಳ ಅಡಿಯಲ್ಲಿ ನಿರ್ವಹಿಸಲಾಗುತ್ತದೆ ಪರವಾನಗಿಗಳನ್ನು ಹೇಗೆ ನೀಡಲಾಗುತ್ತದೆ, ಶುಲ್ಕ ಮತ್ತು ಬೈಕ್ ಟ್ಯಾಕ್ಸಿಗಳಾಗಿ ಬಳಸಲು ಅನುಮತಿಸಲಾದ ವಾಹನಗಳ ಪ್ರಕಾರ ಯಾವುದು ಎಂಬುದರ ಕುರಿತು ಕಾನೂನು ಅಂಶಗಳನ್ನು ತಂಡ ಪರಿಶೀಲಿಸಲಿದೆ.

ಇದಲ್ಲದೆ, ಈ ನಗರಗಳಲ್ಲಿನ ಸರ್ಕಾರಗಳು ಬೈಕ್ ಟ್ಯಾಕ್ಸಿ ಬಳಕೆದಾರರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ತೆಗೆದುಕೊಂಡ ಕ್ರಮಗಳನ್ನು ಸಹ ಅಧ್ಯಯನ ನಡೆಸುವಂತೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಬೈಕ್ ಟ್ಯಾಕ್ಸಿ ಕಾರ್ಯಾಚರಣೆಗೆ ಅನುಮತಿ ನೀಡಲು ಯಾವುದೇ ನೀತಿಗಳನ್ನು ರೂಪಿಸುತ್ತಿಲ್ಲ ಎಂದು ರಾಜ್ಯ ಸಾರಿಗೆ ಇಲಾಖೆ ಆರಂಭದಿಂದಲೂ ಹೇಳುತ್ತಾ ಬಂದಿದೆ. ಆಗಸ್ಟ್‌ನಲ್ಲಿ ಕರ್ನಾಟಕ ಹೈಕೋರ್ಟ್ ಬೈಕ್ ಟ್ಯಾಕ್ಸಿ ನೀತಿಯ ಕುರಿತು ನಿರ್ಧರಿಸಲು ರಾಜ್ಯ ಸರ್ಕಾರಕ್ಕೆ ಒಂದು ತಿಂಗಳ ಕಾಲಾವಕಾಶ ನೀಡಿದ ನಂತರ ಅದು ತನ್ನ ಅಧಿಕಾರಿಗಳನ್ನು ಇತರ ನಗರಗಳಿಗೆ ಕಳುಹಿಸಿದೆ.

**ತಮ್ಮ ಭೇಟಿಯ ಸಮಯದಲ್ಲಿ ಬೈಕ್ ಟ್ಯಾಕ್ಸಿ ಕಾರ್ಯಾಚರಣೆಯಲ್ಲಿನ ಸವಾಲುಗಳನ್ನು ಸಹ ಪರಿಶೀಲಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅಧಿಕಾರಿಗಳು ಈ ವಾರ ತಮ್ಮ ವರದಿಯನ್ನು ಉನ್ನತ ಮಟ್ಟದ ಸಮಿತಿಗೆ ಸಲ್ಲಿಸುವ ನಿರೀಕ್ಷೆಯಿದೆ. ನಂತರ ಸಾರಿಗೆ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗುವುದು ಎಂದು ಮೂಲಗಳು ತಿಳಿಸಿವೆ.**

---

## ಖಾಲಿ ಜಾಗಗಳಲ್ಲಿ ಕಸ ಸುರಿಯುತ್ತಿರುವ ಹೊರಮಾವು ನಿವಾಸಿಗಳು!

• ಉದಯವಾಹಿನಿ, ಬೆಂಗಳೂರು

ಕಸದ ವಾಹನಗಳ ಕೊರತೆಯಿಂದಾಗಿ ಸುರಿಯುತ್ತಿರುವ ಕಸ ಸಂಗ್ರಹಿಸಲಾಗುತ್ತಿಲ್ಲ, ಹೀಗಾಗಿ ಹೊರಮಾವು 25ನೇ ವಾರ್ಡ್ ನ ನಿವಾಸಿಗಳು ಖಾಲಿ ಸ್ಥಳಗಳಲ್ಲಿ ಕಸ ಸುರಿಯುವಂತಾಗಿದೆ.

ನಿವಾಸಿಗಳ ಪ್ರಕಾರ, ವಾರ್ಡ್‌ನಲ್ಲಿ 750 ಕ್ಕೂ ಹೆಚ್ಚು ಮನೆಗಳಿವೆ, ಆದರೆ ಮನೆ-ಮನೆ ಕಸ ಸಂಗ್ರಹಣೆಗೆ ಕೇವಲ ಎರಡರಿಂದ 3 ಆಟೋ-ಟಿಪ್ಪರ್‌ಗಳನ್ನು ಮಾತ್ರ ನಿಯೋಜಿಸಲಾಗಿದೆ. ಪರಿಣಾಮವಾಗಿ, ವಾಹನಗಳು ಒಂದೇ ಸುತ್ತನ್ನು ಪೂರ್ಣಗೊಳಿಸಲು ಮೂರರಿಂದ ನಾಲ್ಕು ದಿನಗಳನ್ನು ತೆಗೆದುಕೊಳ್ಳುತ್ತವೆ, ಇದರಿಂದಾಗಿ ಮನೆಗಳ ಕಸ ಸಂಗ್ರಹಿಸಲು ಹಲವು ದಿನಗಳವರೆಗೆ ಕಾಯಬೇಕಾಗುತ್ತದೆ. ದೀರ್ಘಕಾಲದವರೆಗೆ ಒದ್ದೆಯಾದ ತ್ಯಾಜ್ಯವನ್ನು ಸಂಗ್ರಹಿಸಲು ಸಾಧ್ಯವಾಗದ ಹಲವಾರು ನಿವಾಸಿಗಳು, ಸಮುದಾಯ ಕಸದ ತೊಟ್ಟಿಗಳು ಲಭ್ಯವಿಲ್ಲದ ಕಾರಣ ಖಾಲಿ ಜಾಗಗಳಲ್ಲಿ ಕಸ ಸುರಿಯುತ್ತಿದ್ದಾರೆ. ನಿವಾಸಿಗಳು ತ್ಯಾಜ್ಯವನ್ನು ನೇರವಾಗಿ ತ್ಯಾಜ್ಯ ಸಂಗ್ರಹಕಾರರಿಗೆ ಹಸ್ತಾಂತರಿಸಲು ಸಾಧ್ಯವಾಗದಿದ್ದಾಗ ತ್ಯಾಜ್ಯವನ್ನು ವಿಲೇವಾರಿ ಮಾಡಲು ಇವು ಪರ್ಯಾಯ ಮಾರ್ಗವಾಗಿವೆ.

ಮಾರ್ಷಲ್‌ಗಳು ಅಥವಾ ಸಿಬ್ಬಂದಿಯ ಸಮಯಪ್ರಜ್ಞೆಯ ಬಗ್ಗೆ ನನಗೆ ಯಾವುದೇ ದೂರುಗಳಿಲ್ಲ. ಸಮಸ್ಯೆ ವಾಹನಗಳ ಕೊರತೆ.


ಉದಯವಾಹಿನಿ ಚಿತ್ರ

ಆಟೋ ಹಿಂತಿರುಗುವ ಹೊತ್ತಿಗೆ, ಈಗಾಗಲೇ ಮೂರನೇ ದಿನವಾಗಿದೆ ಮತ್ತು ಜನರು ತಾಳ್ಮೆ ಕಳೆದುಕೊಳ್ಳುತ್ತಾರೆ ಎಂದು ಸುರೇಶ್ ಬಾಬು ಹೇಳಿದರು. ಹೊರಮಾವು ಕೆರೆಯ ಬಳಿ ತ್ಯಾಜ್ಯ ಸುರಿಯುತ್ತಿದ್ದಕ್ಕಾಗಿ ಇತ್ತೀಚೆಗೆ ಒಬ್ಬ ನಿವಾಸಿಗೆ ದಂಡ ವಿಧಿಸಲಾಯಿತು. ಡೈಪರ್‌ಗಳನ್ನು ವಿಲೇವಾರಿ ಮಾಡಲು ನಾನು ನಾಲ್ಕು ದಿನಗಳವರೆಗೆ ಕಾಯುತ್ತಿದ್ದೆ. ಸಂಗ್ರಹಣಾ ವಾಹನವು ತುಂಬಾ ಬೇಗನೆ ಹೋಯಿತು. ಹೀಗಾಗಿ ನಾನು ಅದನ್ನು ಹೊರಗೆ ಬಿಸಾಡಬೇಕಾಯಿತು. ಹೀಗಾಗಿ ದಂಡವನ್ನು ಪಾವತಿಸಲು ನನಗೆ ಅಭ್ಯಂತರವಿಲ್ಲ, ಆದರೆ ಯಾರಿಗೆ ದೂರು ನೀಡಬೇಕೆಂದು ನನಗೆ ತಿಳಿದಿಲ್ಲ ಎಂದು ಮತ್ತೊಬ್ಬ ನಿವಾಸಿ ಜಗನ್ನಾಥ್ ಹೇಳಿದರು. ಇತರ ನಿವಾಸಿಗಳು ಪರಿಷ್ಕೃತ ಸಂಗ್ರಹ ಸಮಯದ ಸಮಸ್ಯೆಗಳ ಬಗ್ಗೆ ತಿಳಿಸಿದ್ದಾರೆ. ಬೆಳಿಗ್ಗೆ ಕಚೇರಿಗೆ ಹೋಗುವವರು, ತಡವಾಗಿ ಕೆಲಸ ಮಾಡುವ ತಂತ್ರಜ್ಞರು ಮತ್ತು ಮೇಲಿನ ಮಹಡಿಯಲ್ಲಿರುವ ವೃದ್ಧ ನಿವಾಸಿಗಳು ವೇಳಾಪಟ್ಟಿಯನ್ನು ಹೊಂದಿಸಲು ಹೆಣಗಾಡುತ್ತಾರೆ, ಇದರ ಪರಿಣಾಮವಾಗಿ ಕಸದ ಚೀಲಗಳನ್ನು ಖಾಲಿ ಸ್ಥಳಗಳಿಗೆ ಎಸೆಯಲಾಗುತ್ತದೆ ಎಂದರು.

**ಘನ ತ್ಯಾಜ್ಯ ನಿರ್ವಹಣಾ ತಂಡವು ತನ್ನ ಕೆಲಸವನ್ನು ಮಾಡುತ್ತಿದೆ, ಆದರೆ ಹೆಚ್ಚುವರಿ ವಾಹನಗಳಿಗಾಗಿ ನಿಗಮಕ್ಕೆ ನಾವು ಪದೇ ಪದೇ ಎರಡು ವರ್ಷಗಳಿಂದ ವಿನಂತಿ ಮಾಡುತ್ತಿದ್ದರೂ ಪ್ರಯೋಜನವಾಗಿಲ್ಲ. ನೇರವಾಗಿ ತ್ಯಾಜ್ಯವನ್ನು ಹಸ್ತಾಂತರಿಸಲು ಸಾಧ್ಯವಾಗದ ನಿವಾಸಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು ಎಂದು ಮಲ್ಲಪ್ಪ ಲೇಔಟ್ ನಿವಾಸಿಗಳ ಕಲ್ಯಾಣ ಸಂಘದ ಕಾರ್ಯದರ್ಶಿ ಶ್ರೀಕಾಂತ್ ತಿಳಿಸಿದ್ದಾರೆ.**

---

## ಬಿಜೆಪಿ ಸಂಸದ ಡಾ.ಕೆ.ಸುಧಾಕರ್ ಅವರ ಪತ್ನಿಗೆ ಸೈಬರ್ ವಂಚನೆ

• ಉದಯವಾಹಿನಿ, ಬೆಂಗಳೂರು

ಚಿಕ್ಕಬಳ್ಳಾಪುರ ಬಿಜೆಪಿ ಸಂಸದ ಡಾ.ಕೆ.ಸುಧಾಕರ್ ಅವರ ಪತ್ನಿಯೂ ಡಿಜಿಟಲ್ ಅರೆಸ್ಟ್ ಆಗಿದ್ದು, 14 ಲಕ್ಷ ರೂ. ವಂಚನೆ ಮಾಡಲಾಗಿತ್ತು. ಸಕಾಲಕ್ಕೆ ದೂರು ನೀಡಿದ ಪರಿಣಾಮ ಹಣವನ್ನು ವಶಕ್ಕೆ ಪಡೆದು ಹಿಂದಿರುಗಿಸಲಾಗಿದೆ.

ಜಾಗೃತಿಯ ಹೊರತಾಗಿಯೂ ಡಿಜಿಟಲ್ ಅರೆಸ್ಟ್ ಪ್ರಕರಣದಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಆನ್‌ಲೈನ್ ಖದೀಮರು ಸಿರಿವಂತರನ್ನೇ ಟಾರ್ಗೆಟ್ ಮಾಡುತ್ತಿದ್ದಾರೆ. ಇದಕ್ಕೆ ರಾಜಕಾರಣಿಗಳು, ಅವರ ಕುಟುಂಬಸ್ಥರು ಹೊರತಲ್ಲ.

ಬಿಜೆಪಿ ಸಂಸದ ಡಾ.ಕೆ.ಸುಧಾಕರ್ ಪತ್ನಿ ಡಾ.ಪ್ರಿಯಾ ಅವರಿಗೆ ಆಗಸ್ಟ್ 26 ರಂದು ಸೈಬರ್ ವಂಚಕ ಕರೆ ಮಾಡಿ ನಾವು ಮಹಾರಾಷ್ಟ್ರದ ಮುಂಬಯಿ ಸೈಬರ್ ವಿಭಾಗದ ಸಿಬ್ಬಂದಿ ಎಂದು ಹೇಳಿಕೊಂಡು ಖಾತೆಗೆ ಹಣ ವರ್ಗಾವಣೆ ಮಾಡಿಕೊಂಡಿದ್ದಾನೆ.


ಉದಯವಾಹಿನಿ ಚಿತ್ರ

ಕೂಡಲೇ ಎಚ್ಚೆತ್ತುಕೊಂಡು ಪ್ರಿಯಾ ಅವರು ರಾಷ್ಟ್ರೀಯ ಸೈಬರ್ ಸಹಾಯವಾಣಿ 1930 ಕ್ಕೆ ಕರೆ ಮಾಡಿ ದೂರು ದಾಖಲಿಸಿದ್ದಾರೆ. ಕೂಡಲೇ ಸಿಬ್ಬಂದಿ ಖಾತೆಯನ್ನು ಫ್ರೀಜ್ (ತಾತ್ಕಾಲಿಕ ಸ್ಥಗಿತ) ಮಾಡಿದ್ದಾರೆ. ಬಳಿಕ ಕೋರ್ಟ್‌ನ ಮೊರೆ ಹೋಗಿ ಹಣವನ್ನು ವಾಪಸ್ ಪಡೆದುಕೊಂಡಿದ್ದಾರೆ.

**ಸಂಸದರ ಪತ್ನಿಗೆ ವಂಚಿಸಿದ್ದು ಹೇಗೆ?**

**ಮುಂಬಯಿ ಸೈಬರ್ ವಿಭಾಗದಿಂದ ಎಂದು ಕರೆ ಮಾಡಿದ ವಂಚಕನು, ನಿಮ್ಮ ಹೆಸರಲ್ಲಿ ಕ್ರೆಡಿಟ್ ಕಾರ್ಡ್ ಮಾಡಿಸಿ ಅಕ್ರಮವಾಗಿ ವರ್ಗಾವಣೆ ಮಾಡಿದ್ದಾರೆ. ಇದಕ್ಕೆ ದಂಡ ಕಟ್ಟಬೇಕು ಎಂದೆಲ್ಲಾ ಸುಳ್ಳು ಹೇಳಿದ್ದಾರೆ ಎನ್ನಲಾಗಿದೆ. ಘಟನೆ ನಡೆದ ಬಳಿಕ ಬೆಂಗಳೂರಿನ ಪಶ್ಚಿಮ ಸೈಬರ್ ಠಾಣೆಗೆ ಡಾ.ಪ್ರಿಯಾ ದೂರು ನೀಡಿದ್ದರು. ಸದ್ಯ ಸೈಬರ್ ವಂಚಕರ ಜಾಲ ಪತ್ತೆಗೆ ಕ್ರಮಕ್ಕೆಗೊಳ್ಳಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.**

---

## ಜಿಎಸ್‌ಟಿ ವಿರುದ್ಧ ತೀವ್ರ ವಾಗ್ದಾಳಿ: ಸಚಿವ ಪ್ರಿಯಾಂಕ್ ಖರ್ಗೆ

• ಉದಯವಾಹಿನಿ, ಬೆಂಗಳೂರು



ಗಬ್ಬರ್ ಸಿಂಗ್ ದರೋಡೆಯ ಪ್ರಮಾಣವನ್ನು ಕಡಿಮೆ ಮಾಡಿದ್ದಾನೆ, ಇದಕ್ಕಾಗಿ ಎಲ್ಲರೂ ಜಿಎಸ್‌ಟಿ ಉಳಿತಾಯ ಉತ್ಸವ ಆಚರಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಪ್ರಿಯಾಂಕ್ ಖರ್ಗೆ, ಈ ಗಬ್ಬರ್ ಸಿಂಗ್ 8 ವರ್ಷ ಮಾಡಿದ ಪೂರ್ಣ ಪ್ರಮಾಣದ ಲೂಟಿಯನ್ನು ಎಲ್ಲರೂ ಮರೆತುಬಿಡಬೇಕು ಕೇಂದ್ರ ಸರ್ಕಾರದ ವರಸೆ ಇದು ಈ ದೇಶದ ಜನರನ್ನು ಹೇಗೆ ಬೇಕಾದರೂ ಮರಳು ಮಾಡಬಹುದಾದಷ್ಟು ಮೂರ್ಖರು ಎಂದು ಭ್ರಮಿಸಿದೆ ಬಿಜೆಪಿ. ಆದರೆ ಜನರು ಮೂರ್ಖರಲ್ಲ ಎಂದು ಟೀಕಾ ಪ್ರಹಾರ ನಡೆಸಿದ್ದಾರೆ.

ಈಗ ಜಿಎಸ್‌ಟಿ ಉಳಿತಾಯ ಉತ್ಸವ ಮಾಡಬೇಕಂತೆ, ಕಳೆದ 8 ವರ್ಷದಿಂದ ಜಿಎಸ್‌ಟಿ ಲೂಟಿ ಉತ್ಸವ ಮಾಡುತ್ತಿದ್ದರಲ್ಲವೇ ಜನರನ್ನು ಬಾವಿಗೆ ತಳ್ಳಿದ್ದು ಇವರೇ, ಈಗ ಬಾವಿಯಿಂದ ಮೇಲೇತ್ತಲು ಏಣಿ ಕೊಟ್ಟಿದ್ದೇವೆ ಎನ್ನುತ್ತಿರುವವರೂ ಇವರೇ. ಏಣಿ ಕೊಟ್ಟಿದ್ದಕ್ಕೆ ಕ್ರೆಡಿಟ್ ತೆಗೆದುಕೊಳ್ಳಲು ಹವಣಿಸುತ್ತಿದೆ, 8 ವರ್ಷದಿಂದ ಜನರನ್ನು ಬಾವಿಗೆ ತಳ್ಳಿದ್ದರ ಪಾಪದ ಹೊಣೆಯೂ ಮೋದಿಯವರದ್ದೇ ಎಂದು ವಾಗ್ದಾಳಿ ನಡೆಸಿದ್ದಾರೆ.

---

# ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಕೆ; ಜಾತಿಗಣತಿ ಭವಿಷ್ಯ ನಿರ್ಧಾರ

## ಪಿಐಎಲ್ ಅನ್ನು ಹೈಕೋರ್ಟ್ ನ್ಯಾಯಮೂರ್ತಿ ವಿಭು ಬಖ್ರು, ಸಿ.ಎಂ ಜೋಶಿ ಅವರಿದ್ದ ಪೀಠ ವಿಚಾರಣೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಜಾತಿ ಸಮೀಕ್ಷೆ ಸೋಮವಾರದಿಂದ ಆರಂಭಗೊಂಡಿದೆ. ಆದರೆ, ಈ ಸಮೀಕ್ಷೆ ಪ್ರಶ್ನಿಸಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಕೆಯಾಗಿದ್ದು, ಅರ್ಜಿ ವಿಚಾರಣೆ ನಡೆಸಿರುವ ಹೈಕೋರ್ಟ್ ನ್ಯಾಯಪೀಠವು, ನಾಳೆ (ಸೆ.23) ಮಧ್ಯಾಹ್ನ 2.30ಕ್ಕೆ ವಿಚಾರಣೆ ಮುಂದೂಡಿದೆ.

ಹೀಗಾಗಿ ಜಾತಿಗಣತಿ ಮುಂದುವರಿಯುತ್ತಾ ಅಥವಾ ಕೋರ್ಟ್ ತಡೆಯಾಜ್ಞೆ ನೀಡುತ್ತಾ ಎಂಬ ಕುತೂಹಲ ಮೂಡಿದೆ.ಜಾತಿಗಣತಿ ಪ್ರಶ್ನಿಸಿ ಸಲ್ಲಿಸಿದ್ದಂತ ಪಿಐಎಲ್ ಅನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ನ್ಯಾಯಮೂರ್ತಿ ಸಿ.ಎಂ ಜೋಶಿ ಅವರಿದ್ದ ಪೀಠ ವಿಚಾರಣೆ ನಡೆಸಿತು. ಅರ್ಜಿದಾರರ ಪರವಾಗಿ ಹಿರಿಯ ವಕೀಲ ಪ್ರಭುಲಿಂಗ ನಾದವಗಿ ವಾದ ಮಂಡಿಸಿದರು.

ಅರ್ಜಿದಾರರ ಪರ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ್ ವಾದ ಮಂಡಿಸಿ, ಜನ ಗಣತಿಗಿಂತ ಈ ಸರ್ವೆ ಯಾವ ರೀತಿಯಲ್ಲೂ ಕಡಿಮೆಯಲ್ಲ. ಜನಗಣತಿಯನ್ನು ಕೇಂದ್ರ ಸರ್ಕಾರವಷ್ಟೇ ಮಾಡಬೇಕೆಂದು ವಾದಿಸಿದರು.



ಉದಯವಾಹಿನಿ ಚಿತ್ರ

ರಾಜ್ಯದೆಲ್ಲೆಡೆ ಸರ್ಕಾರ ಜಾತಿ ಗಣತಿಗೆ ಆದೇಶಿಸಿದೆ. ಸಂವಿಧಾನದ ಆರ್ಟಿಕಲ್ 342ಎ (3)ಗೆ ವಿರುದ್ಧವಾಗಿದೆ. ಹಿಂದುಳಿದ ವರ್ಗಗಳ ಆಯೋಗದ ಹಿಂದಿನ ವರದಿ ಪರಿಗಣಿಸದೇ ಹೊಸ ಪ್ರಕ್ರಿಯೆ ಆರಂಭಿಸಲಾಗಿದೆ ಎಂದರು.

ಜಾತಿಗಣತಿಯ ಅಂಕಿ ಅಂಶಗಳನ್ನು ಆಧಾರ್‌ಗೆ ಲಿಂಕ್ ಮಾಡುತ್ತಿದ್ದಾರೆ. ಜಿಯೋ ಟ್ಯಾಗಿಂಗ್ ಮಾಡಿ ಆಧಾರ್ ಲಿಂಕ್ ಮಾಡುತ್ತಿದ್ದಾರೆ. ಸರ್ಕಾರದ ಈ ಕ್ರಮ ಕಾನೂನು ಬಾಹಿರವಾಗಿದೆ ಎಂಬುದಾಗಿ ವಾದಿಸಿದರು. ಅರ್ಜಿದಾರರ ಪರವಾಗಿ ಅಶೋಕ್ ಹಾರನಹಳ್ಳಿ ವಾದಿಸುತ್ತಾ, ಹೊಸ ಜಾತಿಗಳನ್ನು ಸರ್ಕಾರ ಸೃಷ್ಟಿ ಮಾಡುತ್ತಿದೆ. ಒಕ್ಕಲಿಗ ಕ್ರಿಶ್ಚಿಯನ್, ಬ್ರಾಹ್ಮಣ ಕ್ರಿಶ್ಚಿಯನ್ ಎಂದು ವಿಂಗಡಿಸಿದ್ದಾರೆ. ಯಾವುದೇ ಅಂಕಿ ಅಂಶದ ವಿಶ್ಲೇಷಣೆ ಇಲ್ಲದೆಯೂ ಜನಗಣತಿ ಮಾಡಲಾಗುತ್ತಿದೆ. ಜನಗಣತಿ ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲವೆಂದು ವಾದಿಸಿದರು. ಅಂಕಿ-ಅಂಶ ಸಂಗ್ರಹಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ. ಸರ್ವೆ ಮೂಲಕ ಅಂಕಿ-ಅಂಶ ಸಂಗ್ರಹಿಸಲಾಗುತ್ತಿದೆ. ಸಾಮಾಜಿಕ, ಆರ್ಥಿಕ, ಹಿಂದುಳಿದಿರುವಿಕೆಯ ಅಂಕಿ-ಅಂಶ ಸಂಗ್ರಹಿಸುತ್ತಿದ್ದೇವೆ ಎಂಬುದಾಗಿ ವಾದಿಸಿದರು. ಆ ಬಳಿಕ ಅರ್ಜಿದಾರರ ಪರ ಹಿರಿಯ ವಕೀಲ ವಿವೇಕ್ ರೆಡ್ಡಿ ವಾದಿಸಿ, ಜನರ ಸ್ಥಿತಿ ಪರಿಶೀಲನೆ ಹಿಂದುಳಿದ ವರ್ಗಗಳ ಕರ್ತವ್ಯ ಅಲ್ಲ. ಸರ್ಕಾರ ರಾಜಕೀಯ ಉದ್ದೇಶದಿಂದ ಗಣತಿ ಮಾಡುತ್ತಿದೆ ಎಂದರು.

**ಸರ್ಕಾರದ ಪರವಾಗಿ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಿ, ಇದೇ ರೀತಿಯ ಪ್ರಕರಣದಲ್ಲಿ ಹಿಂದೆಯೂ ಮಧ್ಯಂತರ ತಡೆ ನೀಡಿಲ್ಲ. ಜನಗಣತಿ ಮಾಡುತ್ತಿಲ್ಲ. ಕೇವಲ ಸರ್ವೆ ಮಾಡುತ್ತಿದ್ದೇವೆ. ಹೀಗಾಗಿ ಯಾವುದೇ ಮಧ್ಯಂತರ ತಡೆ ನೀಡದಂತೆ ಮನವಿ ಮಾಡಿದರು.**

**ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು, ಬಖ್ರು ಅವರು ಎಲ್ಲಾ ಅರ್ಜಿದಾರರು ಸೇರಿ ನಿಮ್ಮ ಲಿಖಿತ ಸಾರಾಂಶ ಸಲ್ಲಿಸಿ, ಪ್ರತಿಯೊಬ್ಬರಿಗೂ ಎಷ್ಟು ಸಮಯ ಬೇಕೆಂದು ತಿಳಿಸಿ. ಅರ್ಜಿದಾರರ ವಾದದಲ್ಲಿ ಹುರುಳಿರುವಂತಿದೆ. ಸರ್ವೆ ಸದ್ಯಕ್ಕೆ ಮುಂದೂಡಲು ಸಾಧ್ಯವೇ ಎಂಬುದಾಗಿ ಸರ್ಕಾರದ ಪರ ವಕೀಲರಿಗೆ ಪ್ರಶ್ನಿಸಿದರು. ದಸರಾ ಬಳಿಕ ಅಂತಿಮ ವಿಚಾರಣೆ ನಡೆಸಬಹುದು. ಈಗ ಮಧ್ಯಂತರ ತಡೆ ಬೇಕಿಲ್ಲವೆಂದು ಸಿಂಘ್ವಿ ವಾದಿಸಿದರು. ಈ ವಾದ ಪ್ರತಿವಾದವನ್ನು ಆಲಿಸಿದಂತ ಹೈಕೋರ್ಟ್ ನ್ಯಾಯಪೀಠವು ನಾಳೆ ಮಧ್ಯಾಹ್ನ 2.30ಕ್ಕೆ ವಿಚಾರಣೆಯನ್ನು ಮುಂದೂಡಿದೆ.**

# ಬಾನು ವಿವಾದದ ನಡುವೆ ದಸರಾಗೆ ಡಿಕೆ ಶಿವಕುಮಾರ್ ಗೈರು!

## ■ ನಾಡ ಹಬ್ಬ ಐತಿಹಾಸಿಕ ದಸರಾ ಉದ್ಘಾಟನೆ ■ ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾದ ಡಿಸಿಎಂ ನಡೆ


• **ಉದಯವಾಹಿನಿ, ಮೈಸೂರು**

ಚಾಮುಂಡಿ ಬೆಟ್ಟದ ಕುರಿತಾಗಿ ನೀಡಿದ್ದ ಹೇಳಿಕೆ ಹಾಗೂ ಬಾನು ಮುಷ್ತಾಕ್ ಅವರನ್ನು ಉದ್ಘಾಟನೆಗೆ ಕರೆದಿರುವ ವಿವಾದದ ನಡುವೆ ಡಿಸಿಎಂ ಡಿಕೆ ಶಿವಕುಮಾರ್ ದಸರಾ ಉದ್ಘಾಟನೆಗೆ ಗೈರಾಗಿದ್ದು, ರಾಜ್ಯ ರಾಜಕೀಯ ವಲಯದಲ್ಲಿ ಭಾರೀ ಕುತೂಹಲ ಕೆರಳಿಸಿದೆ. ಡಿಕೆಶಿ ಗೈರು ಉದ್ದೇಶಪೂರ್ವಕವೇ ಅಥವಾ ಇತರ ಕಾರಣದಿಂದಲೇ ಎಂಬ ವಿಚಾರವಾಗಿ ಚರ್ಚೆಗಳು ಶುರುವಾಗಿದೆ.

ಡಿಸಿಎಂ ಡಿಕೆ ಶಿವಕುಮಾರ್ ಅವರು ದೆಹಲಿಗೆ ತೆರಳಿದ್ದಾರೆ. ಇಲಾಖಾ ವಿಚಾರವಾಗಿ ದೆಹಲಿ ವಿಮಾನ ಏರಿದ್ದಾರೆ. ಆದರೆ, ಇದೇ ಸಂದರ್ಭದಲ್ಲಿ ನಾಡ ಹಬ್ಬ ಐತಿಹಾಸಿಕ ದಸರಾ ಉದ್ಘಾಟನೆಗೆ ಡಿಕೆಶಿ ಗೈರಾಗಿದ್ದು ಸಾಕಷ್ಟು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ.

**ಚಾಮುಂಡಿ ವಿವಾದದಲ್ಲಿ ಡಿಕೆಶಿ**

ದಸರಾ ಉದ್ಘಾಟನೆ ಕಾರ್ಯಕ್ರಮದ ವಿಚಾರವಾಗಿ ಡಿಸಿಎಂ ಡಿಕೆ ಶಿವಕುಮಾರ್ ಚಾಮುಂಡಿ ಬೆಟ್ಟ ಎಲ್ಲಾರಿಗೂ ಸೇರಿದ್ದು ಎಂಬ ಹೇಳಿಕೆಯನ್ನು ನೀಡಿದ್ದರು. ಡಿಕೆಶಿ ಈ ಹೇಳಿಕೆ ಸಾಕಷ್ಟು ವಿರೋಧಕ್ಕೆ ಕಾರಣವಾಗಿತ್ತು. ಬಿಜೆಪಿ ನಾಯಕರು ಡಿಕೆಶಿ ವಿರುದ್ಧ


ಉದಯವಾಹಿನಿ ಚಿತ್ರ

ವಾಗ್ದಾಳಿ ನಡೆಸಿದ್ದರು.

**ಚಾಮುಂಡಿ ಚಲೋ ಹೋರಾಟ**

ಚಾಮುಂಡಿ ಬೆಟ್ಟದ ಕುರಿತಾಗಿ ಡಿಕೆ ಶಿವಕುಮಾರ್ ನೀಡಿದ್ದ ಹೇಳಿಕೆ ಬಿಜೆಪಿಗೆ ರಾಜಕೀಯ ಅಸ್ತ್ರವಾಗಿತ್ತು. ಇದನ್ನೇ ಮುಂದಿಟ್ಟುಕೊಂಡು ಬಿಜೆಪಿ ಚಾಮುಂಡಿ ಚಲೋ ಹಮ್ಮಿಕೊಂಡಿತ್ತು.

ಆದರೆ ಚಾಮುಂಡಿ ಬೆಟ್ಟಕ್ಕೆ ತೆರಳಲು ಜಿಲ್ಲಾಡಳಿತ ಅವಕಾಶ ಕೊಟ್ಟಿರಲಿಲ್ಲ. ಈ ಎಲ್ಲಾ ಬೆಳವಣಿಗೆ ನಡುವೆ ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರಿಗೆ ಆಹ್ವಾನ ನೀಡಿದ್ದನ್ನು ವಿರೋಧಿಸಿ ಮಾಜಿ ಸಂಸದ ಪ್ರತಾಪ ಸಿಂಹ ಹೈಕೋರ್ಟ್ ಮೆಟ್ಟಿಲೇರಿದ್ದರು.

ಆದರೆ ಹೈಕೋರ್ಟ್ ಅರ್ಜಿ ವಜಾ ಮಾಡಿತ್ತು. ಬಳಿಕ ಸುಪ್ರೀಂ ಕೋರ್ಟ್ ನಲ್ಲೂ ಸಲ್ಲಿಕೆಯಾಗಿದ್ದ ಅರ್ಜಿ ವಜಾಗೊಂಡಿತ್ತು. ಈ ನಡುವೆ ಸೋಮವಾರ ಮೈಸೂರು ದಸರಾ ನಾಡ ಹಬ್ಬ ವಿದ್ಯುಕ್ತವಾಗಿ ಉದ್ಘಾಟನೆಗೊಂಡಿದೆ. ಸಾಹಿತಿ ಬಾನು ಮುಷ್ತಾಕ್ ದಸರಾ ಉದ್ಘಾಟನೆ ಮಾಡಿದ್ದಾರೆ. ಸಿಎಂ ಸಿದ್ದರಾಮಯ್ಯ, ಉಸ್ತುವಾರಿ ಸಚಿವ ಎಚ್ಸಿ ಮಹದೇವಪ್ಪ ಸೇರಿದಂತೆ ಹಲವರು ಭಾಗಿಯಾಗಿದ್ದರು. ಆದರೆ ಕುತೂಹಲ ಎಂಬಂತೆ ಡಿಕೆ ಶಿವಕುಮಾರ್ ಈ ಉದ್ಘಾಟನಾ ಕಾರ್ಯಕ್ರಮಕ್ಕೆ ಭಾಗಿಯಾಗಿಲ್ಲ. ಸಹಜವಾಗಿ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳಿಗೆ ಡಿಸಿಎಂ ಡಿಕೆ ಶಿವಕುಮಾರ್ ಹಾಜರಾಗುತ್ತಾರೆ. ಆದರೆ ದಸರಾಗೆ ಇದೀಗ ಗೈರಾಗಿದ್ದು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಇದಕ್ಕೆ ಡಿಕೆಶಿ ಸ್ಪಷ್ಟನೆ ಏನು ಎಂಬುದು ಕಾದುನೋಡಬೇಕಾಗಿದೆ.

**ದಸರಾ ಎಲ್ಲಾದಕ್ಕೂ ಮೀರಿದ್ದು**

**ಟಿಪ್ಪು ಸುಲ್ತಾನ್ ದಸರಾ ಮಾಡುವಾಗ ರಾಜರಿಗೆ ಗೌರವ ಧನ ಕೊಟ್ಟಿದ್ದರು. ಟಿಪ್ಪು, ಹೈದಾರಲಿ ಕೂಡ ದಸರಾ ಮಾಡಿದ್ದರು. ಮಿರ್ಜಾ ಇಸ್ಮಾಯಿಲ್ ರನ್ನು ಮಹಾರಾಜರು ಅಂಬಾರಿಯಲ್ಲೇ ಕೂರಿಸಿಕೊಂಡು ಹೋಗಿದ್ದರು. ದಸರಾ ಕೋಮು ಸೌಹಾರ್ದತೆಯ ಸಂಕೇತ. ದಸರಾ ಜಾತಿ, ಧರ್ಮ, ರಾಜಕೀಯವನ್ನು ಮೀರಿದ್ದು. ಇದು ಶ್ರೇಷ್ಠ ನಾಡಹಬ್ಬ. ಕರ್ನಾಟಕದ ಸಾಂಸ್ಕೃತಿಕ ಹೆಮ್ಮೆ ಈ ದಸರಾ. ಸಂವಿಧಾನಕ್ಕಿಂತ ಯಾರು ದೊಡ್ಡವರಲ್ಲ. ಬಾನು ಮುಷ್ತಾಕ್ ಅವರು ಧರ್ಮ ಮೀರಿದ ನಡವಳಿಕೆ ಹೊಂದಿದ್ದಾರೆ. ನಮ್ಮ ನಿಲುವು ಸ್ಪಷ್ಟತೆ ಇದ್ದಾಗ ಬೇರೆ ಯಾರಿಗೋ ಉತ್ತರ ಕೊಡುವ ಅಗತ್ಯವಿಲ್ಲ. ಇದು ನಾಡಿನ ಸಮಸ್ತ ಜನರ ಹಬ್ಬ ಇದು. ಧಾರ್ಮಿಕ ಸೌಹಾರ್ದತೆಯ ಸಂಕೇತ ದಸರಾ ಎಂದು ಸಚಿವ ಮಹದೇವಪ್ಪನವರು ಹೇಳಿದರು.**

---

## ಬಾನು ಮುಷ್ತಾಕ್ ಮುಸ್ಲಿಂರಾದ್ರೂ ಮನುಷ್ಯರಲ್ಲವೇ: ಸಿದ್ದರಾಮಯ್ಯ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮೈಸೂರು**

ಗುಡಿ-ಚರ್ಚು-ಮಸೀದಿಗಳ ಬಿಟ್ಟು ಹೊರ ಬನ್ನಿ ನಮ್ಮದು ಸರ್ವ ಜನಾಂಗದ ಶಾಂತಿಯ ತೋಟ ಎಂದು ಕುವೆಂಪು ಮಾತನ್ನು ಉಲ್ಲೇಖಿಸಿ ಸಿಎಂ ಸಿದ್ದರಾಮಯ್ಯನವರು ದಸರಾ ಉದ್ಘಾಟನೆ ನಂತರ ತಮ್ಮ ಭಾಷಣದಲ್ಲಿ ಬಿಜೆಪಿ ನಾಯಕರ ವಿರುದ್ಧ ಮಾತಿನ ಚಾಟಿ ಬೀಸಿದರು. ಮೈಸೂರಿನಲ್ಲಿ ನಾಡಹಬ್ಬ ದಸರಾ ಉದ್ಘಾಟನೆ ಮತ್ತು ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ ಬಳಿಕ ನಾಡಹಬ್ಬ ಐತಿಹಾಸಿಕ ದಸರಾ ಉದ್ಘಾಟನೆ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದರು.

**ಭಾಷಣಕ್ಕೂ ಮೊದಲೇ ಸಿಟ್ಟಾದ ಸಿಎಂ:** ಸಿಎಂ ಸಿದ್ದರಾಮಯ್ಯ ಭಾಷಣದ ಆರಂಭದಲ್ಲೇ ಕಾರ್ಯಕ್ರಮದಿಂದ ಎದ್ದು ಹೋಗುತ್ತಿದ್ದ ಜನರ ಮೇಲೆ ಸಿಎಂ ಸಿದ್ದರಾಮಯ್ಯ ಸಿಟ್ಟಾದರು. ಮನೆಯಲ್ಲಿ ಇರಬೇಕಿತ್ತು. ಯಾಕೆ ಬರ್ತೀರಾ ಇಲ್ಲಿಗೆ. ಸ್ವಲ್ಪ ಹೊತ್ತು ಕುಳಿತು ಕೊಳ್ಳಲು ಆಗಲ್ವಾ ಕುಳಿತು ಕೊಳ್ಳಲು ಆಗದವರು ಯಾಕೆ ಕಾರ್ಯಕ್ರಮಕ್ಕೆ ಬರ್ತೀರಾ ಎಂದು ಸಿಎಂ ರೇಗಿದರು.

**ಹಬ್ಬದ ವಿಚಾರದಲ್ಲಿ ರಾಜಕಾರಣ ಮಾಡ್ಬೇಡಿ:** ದಸರಾ ಮತ್ತು ನಮ್ಮ ಸಾಂಸ್ಕೃತಿಕ ಹಿರಿಮೆಯ ಪರಿಚಯ ಇಲ್ಲದವರು ಬಾನು ಮುಷ್ತಾಕ್ ಅವರಿಗೆ ವಿರೋಧಿಸಿದ್ದರು. ಇತಿಹಾಸ ತಿರುಚಿ, ಸ್ವಾರ್ಥ ರಾಜಕೀಯ ಮಾಡುವುದು ಅಕ್ಷಮ್ಯ ಅಪರಾಧ. ರಾಜಕಾರಣ ಮಾಡುವುದಿದ್ದರೆ ಚುನಾವಣೆಯಲ್ಲಿ ಮಾಡೋಣ. ನಾಡ ಹಬ್ಬದ ವಿಚಾರದಲ್ಲಿ ಕೆಳ ಮಟ್ಟದ ರಾಜಕಾರಣ ಮಾಡುವುದು ಕ್ಷುಲ್ಲಕ ಎಂದರು. ನಾಡಿನ ಬಹುಸಂಖ್ಯಾತ ಸಮುದಾಯ ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟಿಸಿರುವುದನ್ನು ಸ್ವಾಗತಿಸಿದೆ. ಇದು ಹೆಮ್ಮೆಯ ಸಂಗತಿ. ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸಿರುವುದು ಸೂಕ್ತವಾಗಿದೆ.

ಬಾನು ಮುಷ್ತಾಕ್ ಮುಸ್ಲಿಂ ಮಹಿಳೆ ಎನ್ನುವುದಕ್ಕಿಂತ ಮಾನವೀಯ ಮೌಲ್ಯ ಪಾಲಿಸುವ ಮನುಷ್ಯರು. ನಾವು ಮನುಷ್ಯರು ಪರಸ್ಪರ ಪ್ರೀತಿಯಿಂದ ಬಾಳಬೇಕು. ದ್ವೇಷ ಮನುಷ್ಯತ್ವದ ವಿರೋಧಿ. ಆದ್ದರಿಂದ ದ್ವೇಷವನ್ನು ಆಚರಿಸುವವರು ಮನುಷ್ಯತ್ವದ ವಿರೋಧಿಗಳು ಎಂದರು.

ಸಂವಿಧಾನದ ಮೌಲ್ಯಗಳಾದ ಸಹಿಷ್ಣತೆ-ಸಹಬಾಳ್ವೆ ಪಾಲಿಸುವವರು ಮಾತ್ರ ಅಪ್ಪಟ ಭಾರತೀಯರು. ನಮ್ಮ ಸಂವಿಧಾನ ಜಾತ್ಯತೀತ ಮತ್ತು ಧರ್ಮಾತೀತ. ಇದನ್ನೇ ಹೈಕೋರ್ಟ್- ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ. ಯಾರಿಗೆ ಭಾರತೀಯರು ಎನ್ನುವ ಹೆಮ್ಮೆ ಇರುತ್ತದೋ ಅವರಿಗೆ ಮಾತ್ರ ಸಂವಿಧಾನದ ಬಗ್ಗೆ ಹೆಮ್ಮೆ ಇರುತ್ತದೆ ಎಂದರು.

---

## 20 ಸಾವಿರ ಬಿಪಿಎಲ್ ಕಾರ್ಡ್‌ಗಳು ಅನರ್ಹ

• **ಉದಯವಾಹಿನಿ, ಕೋಲಾರ**

ಜಿಲ್ಲೆಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು 20 ಸಾವಿರ ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ಗುರುತಿಸಿದ್ದು, ಇವುಗಳನ್ನು ಎಪಿಎಲ್‌ಗೆ ಪರಿವರ್ತಿಸುವ ಕಾರ್ಯ ನಡೆಯಲಿದೆ. ಆದಾಯ ತೆರಿಗೆ ಪಾವತಿಸುವವರು ಮತ್ತು ಹೆಚ್ಚಿನ ಆದಾಯ ಹೊಂದಿರುವವರ ಕಾರ್ಡ್‌ಗಳನ್ನು ರದ್ದುಗೊಳಿಸಲು ಕೋಲಾರ ಸೇರಿ ರಾಜ್ಯದಾದ್ಯಂತ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಕ್ರಮಕ್ಕೆ ಗ್ರಾಮೀಣ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದು, ಅರ್ಹರಲ್ಲದವರ ಮಾಹಿತಿಯನ್ನು ಅಧಿಕಾರಿಗಳಿಗೆ ಕೊಡುತ್ತಿದ್ದಾರೆ. ಅರ್ಹತೆಯಿಲ್ಲದ ಬಿಪಿಎಲ್ ಕಾರ್ಡ್‌ಗಳ ಪತ್ತೆ, ಎಪಿಎಲ್‌ಗೆ ಬದಲಾವಣೆ ಮಾಡಲು ಕ್ರಿಯಾ ಯೋಜನೆ ಬಿಪಿಎಲ್ ಕಾರ್ಡ್‌ಗಳ ರದ್ದುಗೊಳಿಸಲು ಮುಂದಾದ ಆಹಾರ ಇಲಾಖೆ ಕ್ರಮಕ್ಕೆ ಗ್ರಾಮೀಣ ಭಾಗದ ಜನರು ಕೆರಳಿ ಕೆಂಡವಾಗಿದ್ದು, ಅಧಿಕಾರಿಗಳ ವಿರುದ್ಧ ತಮ್ಮ ಆಕ್ರೋಶ ತೋರುತ್ತಿದ್ದಾರೆ. ಅನರ್ಹರ ಮಾಹಿತಿಯನ್ನು ಖುದ್ದು ಗ್ರಾಮಸ್ಥರೇ ನೀಡುತ್ತಿದ್ದು, ನಮ್ಮ ಕಾರ್ಡ್ ರದ್ದುಗೊಳಿಸಿದಂತೆ ಇಂತಹ ವ್ಯಕ್ತಿಗಳ ಕಾರ್ಡ್‌ನ್ನು ರದ್ದುಗೊಳಿಸಿ ಎಂದು ಅಧಿಕಾರಿಗಳ ಬೆನ್ನು ಬಿದ್ದಿದ್ದಾರೆ ಎನ್ನಲಾಗುತ್ತಿದೆ.

**ಬಿಪಿಎಲ್ ಕಾರ್ಡ್‌ಗೆ ಹೊಸದಾಗಿ ಅರ್ಜಿ ಸಲ್ಲಿಕೆ**

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ನಿಗದಿಪಡಿಸಿದ ಮಾನದಂಡಗಳನ್ನು ಮೀರಿದಂತಹ 20 ಸಾವಿರ ಬಿಪಿಎಲ್


ಉದಯವಾಹಿನಿ ಚಿತ್ರ

**ಗ್ರಾಮಸ್ಥರಿಂದಲೇ ಅಧಿಕಾರಿಗಳಿಗೆ ಮಾಹಿತಿ**

ಪಡಿತರ ಚೀಟಿಗಳು ಜಿಲ್ಲೆಯಲ್ಲಿ ಪತ್ತೆಯಾಗಿದ್ದು, ಶೀಘ್ರವೇ ಕಾರ್ಡ್ ರದ್ದಾಗುವ ಸಾಧ್ಯತೆಗಳಿವೆ.

ಕಾನೂನು ಬಾಹಿರವಾಗಿ ಪಡೆದುಕೊಂಡಿರುವ ಬಿಪಿಎಲ್ ಕಾರ್ಡ್‌ಗಳನ್ನು ಹಿಂತಿರುಗಿಸುವಂತೆ ಸಾಕಷ್ಟು ಬಾರಿ ಅವಕಾಶ ನೀಡಲಾಗಿತ್ತಾದರೂ, ಹೆಚ್ಚಿನ ಸಂಖ್ಯೆಯ ನಾಗರಿಕರು ಬಿಪಿಎಲ್ ಕಾರ್ಡ್ ಹಿಂತಿರುಗಿಸಲು ಮುಂದಾಗಿರಲಿಲ್ಲ.

ಆ ಹಿನ್ನೆಲೆಯಲ್ಲಿ ಸದ್ದಿಲ್ಲದೆ ಕಾರ್ಯಾಚರಣೆ ಆರಂಭಿಸಿರುವ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಅರ್ಹತೆಯಿಲ್ಲದ ಕಾರ್ಡ್‌ಗಳ ರದ್ದಿಗೆ ಮುಂದಾಗಿದೆ. ಈ ನಡುವೆ ಕೇಂದ್ರ ಸರಕಾರ ಕರ್ನಾಟಕದಲ್ಲಿ 7.76 ಲಕ್ಷ ಶಂಕಾಸ್ಪದ ಪಡಿತರ ಚೀಟಿಗಳಿವೆ ಎಂದು ಗುರುತಿಸಿ, ಅಂತಹ ಪಡಿತರ ಚೀಟಿಗಳನ್ನು ರದ್ದುಪಡಿಸುವಂತೆ ಸೂಚಿಸಿದೆ. ಆ ಹಿನ್ನೆಲೆಯಲ್ಲಿ ಪಡಿತರ ಚೀಟಿಗಳ ಅನರ್ಹ ಕಾರ್ಯಾಚರಣೆಯನ್ನು ಇಲಾಖೆ ಕೈಗೆತ್ತಿಕೊಂಡಿದೆ.

ಸರಕಾರ ಮಾನದಂಡಗಳ ಅನ್ವಯ 1.20 ಲಕ್ಷಕ್ಕಿಂತ ಹೆಚ್ಚಿನ ಆದಾಯ ಇರುವವರು ಬಿಪಿಎಲ್ ಪಡಿತರ ಚೀಟಿ ಹೊಂದಲು ಅನರ್ಹರಾಗಿರುತ್ತಾರೆ.

ಜತೆಗೆ ಕುಟುಂಬದಲ್ಲೊಬ್ಬರು ಆದಾಯ ತೆರಿಗೆ ಪಾವತಿದಾರರು, ಕಂಪನಿಗಳಲ್ಲಿ ನಿರ್ದೇಶಕರು, ನಾಲ್ಕು ಚಕ್ರಗಳ ವಾಹನ ಹೊಂದಿರುವವರು, ವಾರ್ಷಿಕ 25 ಲಕ್ಷಕ್ಕಿಂತಲೂ ಹೆಚ್ಚಿನ ಜಿಎಸ್‌ಟಿ ವಹಿವಾಟು ನಡೆಸುವವರು ಬಿಪಿಎಲ್‌ಗೆ ಅನರ್ಹರಾಗಿರುತ್ತಾರೆ.

**20 ಸಾವಿರ ಕಾರ್ಡ್‌ಗಳು ಅನರ್ಹ!:**

ಜಿಲ್ಲೆಯಲ್ಲಿ 20 ಸಾವಿರಕ್ಕೂ ಹೆಚ್ಚಿನ ಶಂಕಾಸ್ಪದ ಕಾರ್ಡ್‌ಗಳನ್ನು ಗುರುತಿಸಲಾಗಿದ್ದು, ನಾನಾ ಸಂಸ್ಥೆಗಳು ನೀಡಿರುವಂತಹ ವರದಿಯಲ್ಲಿನ ಅಂಶಗಳ ಕುರಿತು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಪರಿಶೀಲನೆ ನಡೆಸಲಾಗುತ್ತಿದೆ. ಅದಾದ ಬಳಿಕ ಅನರ್ಹ ಕಾರ್ಡ್‌ಗಳನ್ನು ಎಪಿಎಲ್‌ಗೆ ವರ್ಗಾವಣೆ ಮಾಡಲು ಅಧಿಕಾರಿಗಳು ಕ್ರಿಯಾ ಯೋಜನೆ ರೂಪಿಸಿದ್ದಾರೆ ಎನ್ನಲಾಗುತ್ತಿದೆ.

**ಆಹಾರ ನಿರೀಕ್ಷಕರಿಗೆ ಗುರಿ!**

ಅನರ್ಹ ಬಿಪಿಎಲ್ ಕಾರ್ಡ್‌ಗಳ ರದ್ದತಿಗೆ ಮುಂದಾಗಿರುವಂತಹ ಆಹಾರ ಇಲಾಖೆಯು, ಜಿಲ್ಲೆಯಲ್ಲಿರುವ ಪ್ರತಿಯೊಬ್ಬ ಆಹಾರ ನಿರೀಕ್ಷಕರಿಗೆ ಮಾಸಿಕ 1,200 ಅನರ್ಹ ಕಾರ್ಡ್ ರದ್ದುಗೊಳಿಸುವ ಗುರಿಯನ್ನು ನೀಡಲಾಗಿದೆ.

---

## ಹಳದಿ-ಹಸಿರು ಸೀರೆಯಲ್ಲಿ ಕಂಗೊಳಿಸಿದ ಬಾನು ಮುಷ್ತಾಕ್

• **ಉದಯವಾಹಿನಿ, ಮೈಸೂರು**

ನಾಡಹಬ್ಬ ಮೈಸೂರು ದಸರಾ ಉದ್ಘಾಟನೆಗೊಂಡಿದೆ. ಕನ್ನಡದ ಸಾಧಕಿ ಮಹಿಳೆ, ಅಂತರಾಷ್ಟ್ರೀಯ ಬೂಕರ್ ಪ್ರಶಸ್ತ ವಿಜೇತ ಸಾಹಿತಿ, ಬಾನು ಮುಷ್ತಾಕ್ ಹಲವು ವಿರೋಧಗಳಿಗೆ, ಟೀಕೆಗಳಿಗೆ ಬಗ್ಗದೆ, ಸಾಂಪ್ರದಾಯಿಕ ರೀತಿಯಲ್ಲೇ ಭಾಗಿಯಾಗಿ ನಾಡಹಬ್ಬಕ್ಕೆ ಚಾಲನೆ ನೀಡಿದ್ದಾರೆ. ಬಾನು ಮುಷ್ತಾಕ್ , ಅರಶಿನ ಬಣ್ಣದ ಸೀರೆ, ಹಸಿರು ಬಣ್ಣದ ರವಿಕೆ ತೊಟ್ಟು, ತಲೆಗೆ ಮಲ್ಲಿಗೆ ಹೂವು ಮುಡಿದು ಅಪ್ಪಟ ಕನ್ನಡತಿಯಾಗಿ ಕಂಗೊಳಿಸಿದರು.

ಹೆಜ್ಜೆಹೆಜ್ಜೆಗೂ ಸಿಎಂ ಸಿದ್ದರಾಮಯ್ಯ ಬಾನು ಮುಷ್ತಾಕ್ ಅವರಿಗೆ ನಿರ್ದೇಶನ ನೀಡಿ ಬೆಂಬಲವಾಗಿ ನಿಂತರು. ಆರಂಭದಲ್ಲಿ ದೇವಾಲಯದಲ್ಲಿ ಚಾಮುಂಡಿ ದೇವಿಯ ಪೂಜೆಯಲ್ಲಿ ಭಾಗಿಯಾದರು. ಕೈ ಮುಗಿದುಕೊಂಡೇ ದೇವಾಲಯ


ಉದಯವಾಹಿನಿ ಚಿತ್ರ

**ಮಂಗಳಾರತಿ ಪಡೆದು, ದಸರಾ ಉದ್ಘಾಟನೆ**

ಪ್ರವೇಶಿಸಿದ ಅವರು, ತಾಯಿ ಪೂಜೆಯ ಬಳಿಕ ಆರತಿ ಪಡೆದರು. ಅರ್ಚಕರು ನೀಡಿದ ಹೂವಿನ ಹಾರ ಪಡೆದರು. ಅಲ್ಲದೆ ಸೀರೆಯ ಉಡುಗೊರೆಯನ್ನು ಪಡೆದರು. ಈ ವೇಳೆ ಬಾನು ಅವರು, ಭಾವುಕರಾದ ಕ್ಷಣವೂ ಕಂಡುಬಂತು. ಗರ್ಭಗುಡಿಯ ದ್ವಾರದ ಹತ್ತಿರದಲ್ಲಿ ನಿಂತು ದೇವಿಯ ದರ್ಶನ ಪಡೆದರು. ಅರ್ಚಕರಿಂದ ಮಂಗಳಾರತಿ ಪಡೆದರು. ದೇವಾಲಯದ ಪೂಜೆ ಬಳಿಕ, ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡಿ, ದೀಪ ಹಚ್ಚಿ ದಸರಾ ಉದ್ಘಾಟನೆ ಮಾಡಿದರು.

ಬೂಕರ್ ಪ್ರಶಸ್ತಿ ಬಂದ ಸಂದರ್ಭದಲ್ಲಿ ನನ್ನ ಗೆಳತಿ ಹರಕೆ ಹೊತ್ತಿದ್ದಳು. ಆಗ ಬರಲು ಸಾಧ್ಯವಾಗಿಲ್ಲ, ಆದರೆ ಕರ್ನಾಟಕ ಸರಕಾರ ನನಗೆ ಆಹ್ವಾನ ಕೊಡುವ ಮೂಲಕ, ಏನೇ ಏರುಪೇರು ಕಂಡರೂ ನನ್ನನ್ನು ತಾಯಿ ಚಾಮುಂಡೇಶ್ವರಿಯೇ ಕರೆಸಿಕೊಂಡಿದ್ದಾರೆ ಎಂದು ಬಾನು ಮುಷ್ತಾಕ್ ಹೇಳಿದ್ದಾರೆ. ದ್ವೇಷ ಎಲ್ಲಾ ಸರಿದು ಉದ್ಘಾಟನೆಗೆ ಬಂದ ಕುರಿತು ಕಾವ್ಯ ವಾಚನವನ್ನೂ ಮಾಡಿ ಗಮನಸೆಳೆದರು. ಮೂಲತಃ ಹಾಸನದವರಾದ ಬಾನು ಮುಷ್ತಾಕ್, ತನಗೂ ಹಿಮದೂ ಧರ್ಮಕ್ಕೂ ಇರುವ ಸಂಬಂಧಗಳ ಬಗ್ಗೆ, ಆತ್ಮ ಕಥನದ ಒಂದು ಭಾಗ ಇರುವ ಪುಸ್ತಕದಲ್ಲಿ ಬರೆದಿದ್ದು, ಅದನ್ನು ದಸರಾ ಸಂದರ್ಭ ಮಂಗಳವಾರ ಬಿಡುಗಡೆ ಮಾಡಲಾಗುತ್ತಿದ್ದು, ಎಲ್ಲಾರೂ ನೋಡುವಂತೆ ಮನವಿ ಮಾಡಿದರು.

---

## ಮಾಲೂರಿನಲ್ಲಿ ಮರು ಮತ ಎಣಿಕೆಯಲ್ಲಿ ಬಿಜೆಪಿ ಗೆದ್ರೆ ರಾಜಕೀಯ ನಿವೃತ್ತಿ

• **ಉದಯವಾಹಿನಿ, ಕೋಲಾರ**

ಹೈಕೋರ್ಟ್ ಆದೇಶದಂತೆ ಮಾಲೂರು ವಿಧಾನಸಭಾ ಕ್ಷೇತ್ರದ ಚುನಾವಣೆಯ ಮರು ಮತ ಎಣಿಕೆಯಲ್ಲಿ ಬಿಜೆಪಿ ಅಭ್ಯರ್ಥಿ ಕೆಎಸ್ ಮಂಜುನಾಥಗೌಡ ಗೆಲುವು ಸಾಧಿಸಿದರೆ ರಾಜಕೀಯ ನಿವೃತ್ತಿ ಸ್ವೀಕರಿಸುತ್ತೇನೆ ಎಂದು ಶಾಸಕ ಕೆವೈ ನಂಜೇಗೌಡ ಸವಾಲು ಹಾಕಿದರು. ತಾಲ್ಲೂಕಿನ ರಾಮಸಂದ್ರ ಗಡಿಭಾಗದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮರು ಮತ ಎಣಿಕೆಯ ಹೈಕೋರ್ಟ್ ಆದೇಶಕ್ಕೆ ನನ್ನದೇನು ಅಭ್ಯಂತರವಿಲ್ಲ. ಆದರೆ, ಮತ ಎಣಿಕೆ ಪ್ರಕ್ರಿಯೆಯನ್ನು ಅಸಿಂಧುಗೊಳಿಸಿರುವುದಕ್ಕೆ ಬೇಸರವಿದ್ದು, ಮತ್ತೊಮ್ಮೆ ಮತ ಎಣಿಕೆ ನಡೆದರೂ ಗೆಲ್ಲುವುದು ನಾನೇ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮಂಜುನಾಥಗೌಡರನ್ನು ನಾನೇ ಹೊಸಕೋಟೆಯಿಂದ ಕರೆತಂದು ಮಾಲೂರು ಕ್ಷೇತ್ರದಿಂದ ಗೆಲ್ಲಿಸಿಕೊಂಡು ಬಂದಿದ್ದೆ.

ಆದರೆ, ನಾನು ಚುನಾವಣೆಯಲ್ಲಿಗೆಲುವು ಸಾಧಿಸಿದ ಬಳಿಕ ಆತನಿಗೆ ಹುಚ್ಚು ಹಿಡಿದಿದ್ದು, ತಿಕ್ಲನ ರೀತಿ ಆಡುತ್ತಾ ಶಾಸಕನಾಗುವ ಭ್ರಮೆಯಲ್ಲಿದ್ದಾನೆ ಎಂದು ಲೇವಡಿ ಮಾಡಿದರು.

ಹೈಕೋರ್ಟ್ ಆದೇಶದ ಬೆನ್ನಲ್ಲೇ ಆತನ ಕಡೆಯ ಕೆಲವರು ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡುವ ಮೂಲಕ ಹಗಲು ಕನಸು ಕಾಣುತ್ತಿದ್ದಾರೆ. ಮರು ಮತ ಎಣಿಕೆಯಾಗಲಿ, ಹೊಸದಾಗಿ ಚುನಾವಣೆ ನಡೆದರೂ ಆತನಿಗೆ ಸೋಲು ಕಟ್ಟಿಟ್ಟ ಬುತ್ತಿಯಾಗಿರುತ್ತದೆ ಎಂದು ಭವಿಷ್ಯ ನುಡಿದರು.

**ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ**

ಮರು ಮತ ಎಣಿಕೆಗೆ ನನ್ನದೇನೂ ಅಭ್ಯಂತರವಿಲ್ಲ. ಈ ಹಿಂದೆಯೂ ಮರು ಮತ ಎಣಿಕೆಗೆ ತಡೆಯಾಜ್ಞೆ ತರುವುದಿಲ್ಲವೆಂದು


ಉದಯವಾಹಿನಿ ಚಿತ್ರ

ಹೇಳಿದ್ದೇನೆ. ಆದರೆ, ಹೈಕೋರ್ಟ್ ನನ್ನ ಶಾಸಕ ಸ್ಥಾನವನ್ನು ಅಸಿಂಧುಗೊಳಿಸಿದೆ. ಹೀಗಾಗಿ ನಾನು ಸುಪ್ರೀಂ ಮೊರೆ ಹೋಗುತ್ತಿದ್ದು, ಇಡೀ ಆದೇಶ ಮೇಲೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

**ನಾನು ಮಾಜಿಯಲ್ಲ ಹಾಲಿ ಶಾಸಕ!**

ಹೈಕೋರ್ಟ್ ತನ್ನ ಆದೇಶಕ್ಕೆ 30 ದಿನಗಳ ತಡೆಯಾಜ್ಞೆ ನೀಡಿದ್ದು, ನಾನು ಈಗಲೂ ಶಾಸಕನೇ ಆಗಿದ್ದೇನೆ. ಅವರಂತೆ ನಾನು ಮಾಜಿ ಶಾಸಕನಲ್ಲ ಎಂದು ತಿರುಗೇಟು ನೀಡಿದ ಅವರು, ಮತ ಎಣಿಕೆಯ ವಿಡಿಯೊ ಕಳ್ಳತನ ನಾನೇಕೆ ಮಾಡಲಿ. ಅದನ್ನು ಸಂಗ್ರಹಿಸಿಡುವುದು ಅಧಿಕಾರಿಗಳ ಜವಾಬ್ದಾರಿಯಾಗಿದ್ದು, ಅಧಿಕಾರಿಗಳೇನು ನನ್ನ ಸಂಬಂಧಿಕರೇ ಎಂದು ಪ್ರಶ್ನಿಸಿದರು.

**ಸಿಎಂ ಕಾರ್ಯಕ್ರಮ ಮುಂದೂಡಲ್ಲ:**

ಮಾಲೂರು ಕ್ಷೇತ್ರದಲ್ಲಿ ನಿಗದಿಯಾಗಿರುವಂತಹ ಮುಖ್ಯಮಂತ್ರಿಗಳ ಕಾರ್ಯಕ್ರಮ ಯಾವುದೇ ಕಾರಣಕ್ಕೂ ಮುಂದೂಡುವುದಿಲ್ಲ. ನಿಗದಿಯಂತೆ ಕಾರ್ಯಕ್ರಮ ನಡೆಯಲಿದ್ದು, ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿಗಳು ಚಾಲನೆ ನೀಡಲಿದ್ದಾರೆ. ಹೈಕೋರ್ಟ್ ಆದೇಶದ ಬಳಿಕ ಮುಖ್ಯಮಂತ್ರಿಗಳು ಸೇರಿದಂತೆ ಹಲವಾರು ನಾಯಕರು ಮಾತನಾಡಿದ್ದಾರೆ ಎಂದು ನಂಜೇಗೌಡ ತಿಳಿಸಿದರು.

ಅಸೋಸಿಯೇಷನ್ ವತಿಯಿಂದಲೂ ಪ್ರತೀ ವರ್ಷ ದಸರಾ ಅಭಿಪ್ರಾಯ ಸಂಗ್ರಹ ಸಭೆಗಳಲ್ಲಿಯೂ ವಿಚಾರವನ್ನು ಗಮನಕ್ಕೆ ತರಲಾಗುತ್ತಿದೆ.

ಆದರೆ ಜಿಲ್ಲಾಡಳಿತ ಈ ಕೋರಿಕೆಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಅಂತಾರಾಜ್ಯ ವಾಹನಗಳಿಗೆ ತೆರಿಗೆ ವಿನಾಯಿತಿ ನೀಡುವುದು ಫಲಪ್ರದವಾಗಬೇಕಾದರೆ ವಿನಾಯಿತಿ ಕುರಿತು ಅಂತಾರಾಜ್ಯಗಳಲ್ಲಿ ಮೂರು ತಿಂಗಳು ಮುಂಚಿತವಾಗಿ ಪ್ರಚಾರ ಆಗಬೇಕು. ಆದರೆ ಈ ಕ್ರಮವಾಗುತ್ತಿಲ್ಲ.

**ಮತಗಳ್ಳತನ ಏಕೆ ತಡೆಯಲಿಲ್ಲ**

**ಮಾಲೂರು ಕ್ಷೇತ್ರದಲ್ಲಿ ಮತಗಳ್ಳತನವಾಗಿದೆ ಎಂಬ ಮಂಜುನಾಥ ಗೌಡರ ಆರೋಪಕ್ಕೆ ಪ್ರತಿಕ್ರಿಯಿಸಿದ ನಂಜೇಗೌಡರು, ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರದಲ್ಲಿತ್ತು. ಅವರಿಗೆ ಯಾರು ಬೇಕೋ ಅಂತಹ ಅಧಿಕಾರಿಗಳನ್ನು ನಿಯೋಜನೆ ಮಾಡಿಕೊಂಡಿದ್ದರು. ಮತಗಳ್ಳತನ ನಡೆದಿದ್ದರೆ ಯಾಕೆ ತಡೆಯಲಿಲ್ಲ ಎಂದು ಪ್ರಶ್ನಿಸಿದರು. ಚುನಾವಣಾ ಫಲಿತಾಂಶದ ದಿನ ತಾನು ಮನೆಯಲ್ಲಿ ಟಿ.ವಿ.ನೋಡುತ್ತಾ ಕುಳಿತಿದ್ದೆ. ಚುನಾವಣಾ ಫಲಿತಾಂಶ ಘೋಷಣೆ ವೇಳೆಗೆ ತಾನು ಮತಗಟ್ಟೆ ಬಳಿಗೆ ಬಂದಿದ್ದೆ. ಫಲಿತಾಂಶಕ್ಕೆ ಆತ ಆಕ್ಷೇಪ ವ್ಯಕ್ತಪಡಿಸಿದಾಗ ಜಿಲ್ಲಾ ಚುನಾವಣಾಧಿಕಾರಿಗಳು ಲಾಟರಿ ಮೂಲಕ ಇವಿಎಂ ಹಾಗೂ ವಿ.ವಿ.ಪ್ಯಾಟ್‌ಗಳನ್ನು ತಾಳೆ ಮಾಡಿ ಫಲಿತಾಂಶ ಸರಿಯಾಗಿ ಬಂದ ಹಿನ್ನೆಲೆಯಲ್ಲಿ ಗೆದ್ದಿರುವುದಾಗಿ ಘೋಷಿಸಿದ್ದರು. ಆದರೀಗ ಏನೇನೋ ಮಾತನಾಡುತ್ತಿದ್ದಾರೆ ಎಂದು ಕಿಡಿಕಾರಿದರು.**

---

## ಖಾತ್ರಿ ಯೋಜನೆ: ಬೇಡಿಕೆಯಷ್ಟು ಉದ್ಯೋಗ ನೀಡಿ; ಸಿಇಒ ಮೋನಾರೋತ್

### ● ತೆರಿಗೆ ವಸೂಲಾತಿ ಸಂಬಂಧ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಜೊತೆ ನಡೆದ ಪ್ರಗತಿ ಪರಿಶೀಲನಾ ಸಭೆ

• **ಉದಯವಾಹಿನಿ, ಚಾಮರಾಜನಗರ**

ಗ್ರಾಮೀಣ ಭಾಗದಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಅರ್ಹರಿಗೆ ಉದ್ಯೋಗ ನೀಡಲು ಎಲ್ಲಾ ಗ್ರಾಮ ಪಂಚಾಯತಿಗಳು ಕ್ರಮ ವಹಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಸಿಇಒ ಮೋನಾ ರೋತ್ ಸೂಚನೆಯನ್ನು ನೀಡಿದರು. ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಈಚೆಗೆ ಕುಡಿಯುವ ನೀರಿನ ಸಮಸ್ಯೆ. ನರೇಗಾ, ಸ್ವಚ್ಛ ಭಾರತ್ ಮಿಷನ್, ಎನ್.ಆರ್.ಎಲ್.ಎಂ. ವಸತಿ, ತೆರಿಗೆ ವಸೂಲಾತಿ ಸಂಬಂಧ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಜೊತೆ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ನರೇಗಾ ಯೋಜನೆಯಡಿ ಉದ್ಯೋಗಕ್ಕೆ ಫಲಾನುಭವಿಗಳು ಬೇಡಿಕೆ ಇರಿಸಿದರೆ ಗ್ರಾಮ ಪಂಚಾಯಿತಿಗಳು ನರೇಗಾ ಮಾರ್ಗಸೂಚಿಯಂತೆ ತುರ್ತು ಉದ್ಯೋಗ ನೀಡಬೇಕು.

ಕೃಷಿ, ತೋಟಗಾರಿಕೆ, ಅರಣ್ಯ ಇಲಾಖೆಯಡಿಯ ಕಾಮಗಾರಿಗಳು ನಿಗದಿತ ಅವಧಿಯಲ್ಲಿ ಪ್ರಗತಿಯನ್ನು ಸಾಧಿಸಬೇಕು. ತೋಟಗಾರಿಕೆ ಇಲಾಖೆಯಡಿ ನರೇಗಾ ಯೋಜನೆಯಡಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದ್ದು, ಫಲಾನುಭವಿಗಳಿಗೆ ಸೌಲಭ್ಯ ಒದಗಿಸುವಂತೆ ಸಂಬಂಧಪಟ್ಟ ಆಯಾ ಇಲಾಖೆಯು ಮುಖ್ಯಸ್ಥರು ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಾಮಾಜಿಕ ಅರಣ್ಯ ಇಲಾಖೆಯು ಉದ್ಯೋಗ ಖಾತರಿ ಯೋಜನೆಯಡಿ ರಸ್ತೆ ಬದಿ ಹಾಗೂ ಸರ್ಕಾರಿ ಸ್ಥಳಗಳಲ್ಲಿ ಸಸಿ


ಉದಯವಾಹಿನಿ ಚಿತ್ರ

ನೆಡುವ ಕಾಮಗಾರಿ ಕೈಗೊಳ್ಳಲು ಸೂಕ್ತ ಸಮಯವಾಗಿದ್ದು ತುರ್ತು ಕ್ರಮವಹಿಸಬೇಕು. ಕೃಷಿ ಇಲಾಖೆ ಹಾಗೂ ರೇಷ್ಮೆ ಇಲಾಖೆ ಸಹ ನರೇಗಾ ಅಡಿ ವೈಯಕ್ತಿಕ ಸೌಲಭ್ಯ ಒದಗಿಸಬೇಕು. ಹಿಪ್ಪುನೇರಳೆ ಬೆಳೆಯುವ ಯೋಜನೆ ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದರು. ಗ್ರಾಮೀಣ ಪ್ರದೇಶಗಳಲ್ಲಿ ಬೂದು ನೀರು ನಿರ್ವಹಣೆಯಡಿ 11 ಗ್ರಾಮ ಪಂಚಾಯತಿಗಳಲ್ಲಿ 1,189 ಕಾಮಗಾರಿ ಅನುಷ್ಠಾನಗೊಳಿಸುತ್ತಿದ್ದು, ಆದ್ಯತೆ ಮೇರೆಗೆ ಕಾಮಗಾರಿ ಪೂರ್ಣಗೊಳಿಸಬೇಕು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಸಮನ್ವಯ ಸಾಧಿಸಿ ಅಂಗನವಾಡಿ ಕಟ್ಟಡಗಳನ್ನು ನಿರ್ಮಾಣ ಮಾಡಬೇಕು. ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ತುರ್ತು ಕಾಮಗಾರಿ ಪ್ರಾರಂಭಿಸಬೇಕು.

ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು ಎಂದು ಸಿಇಒ ನಿರ್ದೇಶನ ನೀಡಿದರು. ದುರ್ಬಲ ವರ್ಗಗಳ ಕುಟುಂಬಗಳ ಸುಸ್ಥಿರ ಅಭಿವೃದ್ಧಿಗೆ ನೆರವಾಗಲು ಜಾನುವಾರು ಕೊಟ್ಟಿಗೆ, ತೋಟಗಾರಿಕೆ ಹಾಗೂ ರೇಷ್ಮೆ ಪ್ರದೇಶ ವಿಸ್ತರಣೆ, ಶಾಲಾ ಶೌಚಾಲಯ, ಕಾಂಪೌಂಡ್, ಆಟದ ಮೈದಾನ ನಿರ್ಮಾಣ, ಮಹಿಳೆಯರ ಬಲವರ್ಧನೆಗೆ ಪೂರಕವಾಗಿ ಸಂಜೀವಿನಿ ಶೆಡ್‌ಗಳನ್ನು ತ್ವರಿತವಾಗಿ ನಿರ್ಮಿಸಬೇಕು. ಗ್ರಾಮ ಪಂಚಾಯತಿ ವ್ಯಾಪ್ತಿಯ ಕೂಸಿನ ಮನೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು. ಆರೈಕೆದಾರರಿಗೆ ಸರಿಯಾಗಿ ವೇತನ ಪಾವತಿಸಬೇಕು. ಸಾಮಾಜಿಕ ಪರಿಶೋಧನೆಯಡಿ ಅಡಾಕ್ ಸಮಿತಿ ಸಭೆಗಳನ್ನು ನಡೆಸಿ ಪ್ರಕರಣ ಇತ್ಯರ್ಥಗೊಳಿಸಬೇಕು.

ಒಂಬುಡ್ಸ್‌ಮನ್ ಪ್ರಕರಣಗಳಲ್ಲಿ ಶೀಘ್ರ ಕ್ರಮ ವಹಿಸಬೇಕು. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ಮುನ್ನೆಚ್ಚರಿಕೆ ವಹಿಸಬೇಕು. ನೀರಿನ ಸಮಸ್ಯೆ ಕಂಡುಬಂದಿರುವ ಗ್ರಾಮಗಳಲ್ಲಿ ಸಮಸ್ಯೆ ಪರಿಹರಿಸಬೇಕು, ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಫಲಾನುಭವಿಗಳ ಆಯ್ಕೆಗೆ ಗ್ರಾಮ ಸಭೆ ನಡೆಸಿ ಸೆಪ್ಟೆಂಬರ್ ಅಂತ್ಯದೊಳಗೆ ಅನುಮೋದನೆ ಪಡೆದುಕೊಳ್ಳಬೇಕು. ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಶೃತಿ, ಮುಖ್ಯ ಯೋಜನಾಧಿಕಾರಿ ಹೊನ್ನರಾಜು, ಮುಖ್ಯ ಲೆಕ್ಕಾಧಿಕಾರಿ ಬಸವರಾಜು, ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್ ಸಭೆಯಲ್ಲಿ ಇದ್ದರು.

**ತೆರಿಗೆ ಸಂಗ್ರಹಕ್ಕೆ ನೋಡೆಲ್**

**ಅಧಿಕಾರಿಗಳ ನೇಮಕ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ವೈಯಕ್ತಿಕ ಶೌಚಾಲಯ ನಿರ್ಮಾಣ ಘನತ್ಯಾಜ್ಯ ನಿರ್ವಹಣೆ ಘಟಕ ಮಲತ್ಯಾಜ್ಯ ಸಂಸ್ಕರಣಾ ಘಟಕ ಗೋಬರ್‌ಧನ್ ಘಟಕ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕ ಸಮಗ್ರ ಘನತ್ಯಾಜ್ಯ ಸಂಪನ್ಮೂಲ ಘಟಕಗಳ ಕಾಮಗಾರಿ ಪೂರ್ಣಗೊಳಿಸಬೇಕು. ಪ್ರತಿ ತಿಂಗಳು ತೆರಿಗೆ ಗುರಿ ನಿಗದಿಪಡಿಸಲಾಗಿದ್ದು ಪ್ರತಿ ಬುಧವಾರ ತೆರಿಗೆ ವಸೂಲಾತಿ ಅಭಿಯಾನ ನಡೆಸಬೇಕು ಅಭಿಯಾನದ ಮೇಲ್ವಿಚಾರಣೆಗೆ ನೋಡೆಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಅಧಿಕಾರಿಗಳು ಹೆಚ್ಚಿನ ತೆರಿಗೆ ವಸೂಲಾತಿಗೆ ಕ್ರಮ ಕೈಗೊಳ್ಳಬೇಕು ಕ್ಷಯಮುಕ್ತ ಗ್ರಾಮ ಪಂಚಾಯಿತಿ ಘೋಷಣೆಗೆ ಪಿಡಿಒಗಳು ಶ್ರಮವಹಿಸಬೇಕು ಎಂದು ಸಿಇಒ ಮೋನಾ ರೋತ್ ಹೇಳಿದರು.**

---

## ಮಿನಿ ನ್ಯೂಸ್

### ಸಹಕಾರ ಸಂಘದಿಂದ ರೈತರು, ವ್ಯಾಪಾರಸ್ಥರಿಗೆ ಅನುಕೂಲ

• **ಉದಯವಾಹಿನಿ, ಗುಂಡ್ಲುಪೇಟೆ**

ಗುಂಡ್ಲುಪೇಟೆ ಟೌನ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಪ್ರಸಕ್ತ ಸಾಲಿನಲ್ಲಿ 18 ಲಕ್ಷ ಆದಾಯ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಶಿವಣ್ಣ ತಿಳಿಸಿದರು. ಪಟ್ಟಣದ ಬಸವೇಶ್ವರ ಕಮ್ಯೂನಿಟಿ ಹಾಲ್‌ನಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಗುಂಡ್ಲುಪೇಟೆ ಟೌನ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಎಚ್.ಎಸ್.ಮಹದೇವಪ್ರಸಾದ್ ಅವರ ಸಹಕಾರದಲ್ಲಿ ಹೊಸೂರಿನಿಂದ ಗುಂಡ್ಲುಪೇಟೆ ಪಟ್ಟಣಕ್ಕೆ ಸ್ಥಳಾಂತರ ಮಾಡಲಾಯಿತು. ನಂತರದಲ್ಲಿ 150 ಮಂದಿ ಇದ್ದ ಸಂಘದ ಸದಸ್ಯರ ಸಂಖ್ಯೆ ಈಗ ಮೂರು ಸಾವಿರ ಮೀರಿದೆ. ಸಂಘದ ಸದಸ್ಯರು, ಆಡಳಿತ ಮಂಡಳಿಯ ಎಲ್ಲಾ ಸದಸ್ಯರು, ನೌಕರರ ವರ್ಗದವರು ಸಮನ್ವಯದಿಂದ ಕೆಲಸ ಮಾಡುತ್ತಿರುವ ಕಾರಣ ಸಂಘವು ಉತ್ತಮ ಆರ್ಥಿಕ ವಹಿವಾಟು ನಡೆಸುವ ಮೂಲಕ ರೈತರು ಮತ್ತು ವ್ಯಾಪಾರಸ್ಥರಿಗೆ ಅನುಕೂಲ ಮಾಡಿದೆ ಎಂದು ತಿಳಿಸಿದರು. ಪ್ರಸ್ತುತ ಕ್ಷೇತ್ರದ ಶಾಸಕರು ಮತ್ತು ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರು ಆಗಿರುವ ಎಚ್.ಎಂ.ಗಣೇಶ್ ಪ್ರಸಾದ್ ಸಂಘದ ಬೆಳವಣಿಗೆಗೆ ಅಗತ್ಯ ಸಹಕಾರ ನೀಡುವ ಭರವಸೆ ನೀಡಿದ್ದಾರೆ.

ಅದರಂತೆ ಸಂಘದ ಹೆಚ್ಚಿನ ಸದಸ್ಯರಿಗೆ ಬೇಡಿಕೆ ಅನುಸಾರ ಸಾಲಸೌಲಭ್ಯ ನೀಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು. ಸಹಕಾರ ಸಂಘವು ಇದೇ ರೀತಿಯಲ್ಲಿ ಪ್ರಗತಿಯತ್ತ ಸಾಗಲು ಸಂಘದಲ್ಲಿ ಸಾಲ ಪಡೆದ ಎಲ್ಲಾರೂ ಸಕಾಲದಲ್ಲಿ ಸಾಲ ಮರುಪಾವತಿ ಮಾಡಬೇಕು. ಇತರೆ ಸದಸ್ಯರು ಸಾಲ ಪಡೆಯಲು ಅನುಕೂಲ ಆಗುವಂತೆ ಮಾಡಬೇಕು ಎಂದು ಮನವಿ ಮಾಡಿದರು. ಎಲ್ಲಾ ಸದಸ್ಯರು ಯಶಸ್ವಿನಿ ಸೌಲಭ್ಯ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು.

### ಶಿಡ್ಲಘಟ್ಟ: ಸರ್ಕಾರಿ ಶಾಲೆಗೆ ನ್ಯಾಯಾಧೀಶ ಭೇಟಿ

• **ಉದಯವಾಹಿನಿ, ಶಿಡ್ಲಘಟ್ಟ**

ತಮ್ಮ ಊರು, ಗ್ರಾಮಗಳಲ್ಲಿನ ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯ ಒದಗಿಸಲು ಹಿರಿಯ ವಿದ್ಯಾರ್ಥಿಗಳು, ಆರ್ಥಿಕವಾಗಿ ಸಶಕ್ತವಾಗಿರುವವರು, ಜನಪ್ರತಿನಿಧಿಗಳು ಮುಂದಾಗಬೇಕೆಂದು ಜೆಎಂಎಫ್‌ಸಿ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶ ಮೊಹಮ್ಮದ್ ರೋಷನ್ ಷಾ ಗ್ರಾಮಸ್ಥರಲ್ಲಿ ಮನವಿ ಮಾಡಿದರು.

ತಾಲ್ಲೂಕಿನ ವೈ.ಹುಣಸೇನಹಳ್ಳಿಯ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ ಶಾಲೆಯ ಗೋಡೆ, ಚಾವಣಿ ಹಾಗೂ ನೆಲಹಾಸು ಹಾಳಾಗಿರುವುದರೊಂದಿಗೆ ಸುಣ್ಣ ಬಣ್ಣ ಕಳೆದುಕೊಂಡ ಗೋಡೆಗಳು ಶಾಲೆಯ ವಾತಾವರಣವನ್ನೇ ಕೆಡಸಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಪೋಷಕರಲ್ಲದೆ ಸ್ಥಳದಲ್ಲಿದ್ದ ಗ್ರಾಮಸ್ಥರೊಂದಿಗೆ ಶಾಲೆಯ ಸ್ಥಿತಿಗತಿ ಬಗ್ಗೆ ಚರ್ಚಿಸಿದರು.

ಶಾಲೆಗೆ ಮೂಲಸೌಕರ್ಯಗಳನ್ನು ಕಲ್ಪಿಸಿ ಅಭಿವೃದ್ಧಿಪಡಿಸಿ ಕಲಿಕೆಗೆ ಪೂರಕ ವಾತಾವರಣ ನಿರ್ಮಿಸುವುದು ಸರ್ಕಾರದ ಜವಾಬ್ದಾರಿ. ಹಾಗಂತ ಎಲ್ಲಾದಕ್ಕೂ ಸರ್ಕಾರದ ಮೇಲೆ ಅವಲಂಬನೆ ಸರಿಯಲ್ಲ. ನಾವು ಏನಾದರೂ ಮಾಡಬಹುದಲ್ಲಾ ಎಂದು ಪ್ರಶ್ನಿಸಿದರು.

ಈ ಶಾಲೆಯಲ್ಲಿ ಓದಿದ ಅನೇಕರು ಸಮಾಜದಲ್ಲಿ ಉನ್ನತ ಸ್ಥಾನ ಮಾನದಲ್ಲಿರುತ್ತೀರಿ. ಸರ್ಕಾರಿ ನೌಕರಿ, ಸ್ವಯಂ ಉದ್ಯೋಗ, ಉದ್ದಿಮೆದಾರರಾಗಿರಬಹುದು ಅಥವಾ ರಾಜಕಾರಣಿ, ಸಮಾಜ ಸೇವಕರೂ ಆಗಿರಬಹುದು. ಎಲ್ಲಾರೂ ಕೈಜೋಡಿಸಿದರೆ ಈ ಶಾಲೆಗೆ ಹೊಸರೂಪ ನೀಡಬಹುದಲ್ಲವೇ ಎಂದರು.

ಸ್ಥಳದಲ್ಲಿದ್ದ ಕೆಲ ಮುಖಂಡರು, ಶಾಸಕರ ಗಮನಕ್ಕೆ ತಂದು ಸರಿಪಡಿಸುತ್ತೇವೆ ಎಂದರು. ಅದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು ಬೇಡ ಎಲ್ಲಾ ಭಾರವನ್ನೂ ಶಾಸಕರ ಮೇಲೆ ಹಾಕುವುದು ಬೇಡ. ಅವರು ಸರ್ಕಾರದಿಂದ ಬರುವ ಸವಲತ್ತುಗಳನ್ನು ಒದಗಿಸಿಕೊಡುತ್ತಾರೆ. ಸ್ಥಳೀಯರು ಒಬ್ಬೊಬ್ಬರು ಒಂದೊಂದು ಜವಾಬ್ದಾರಿ ತೆಗೆದುಕೊಳ್ಳಿ. ಕೈಲಾದಷ್ಟು ನೆರವು ನೀಡಿ ಎಂದರು.

### ಮಂಡ್ಯ ಜಿಲ್ಲೆಗೆ 2,000 ಕೋಟಿ ರೂ. ಅನುದಾನ: ಡಿಕೆ ಶಿವಕುಮಾರ್

• **ಉದಯವಾಹಿನಿ, ಮಂಡ್ಯ**


ರಾಜ್ಯದ ಪ್ರವಾಸೋದ್ಯಮ ನೀತಿಗೆ ಹೊಸ ರೂಪ ನೀಡುವ ಮೂಲಕ ಪ್ರವಾಸೋದ್ಯಮ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಅಲ್ಲದೆ, ಈವರೆಗೂ 1.50 ಲಕ್ಷ ಉದ್ಯೋಗ ಸೃಷ್ಟಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಮಳವಳ್ಳಿ ತಾಲ್ಲೂಕು ತಾಲ್ಲೂಕಿನ ಗಗನಚುಕ್ಕಿ ಜಲಪಾತದ ಬಳಿ ಭಾನುವಾರ ರಾತ್ರಿ ನಡೆದ ಎರಡು ಗಗನಚುಕ್ಕಿ ಜಲಪಾತೋತ್ಸವದ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಪ್ರವಾಸೋದ್ಯಮಕ್ಕೆ ರೈತರು, ವಿದ್ಯಾರ್ಥಿಗಳು, ಯುವಕರು ಬರಬೇಕು. ಐಸಿಹಾಸಿಕ ಜಾಗಗಳನ್ನು ವೀಕ್ಷಣೆ ಮಾಡಬೇಕು. ಅದಕ್ಕಾಗಿ ಪ್ರವಾಸೋದ್ಯಮ, ಶಿಕ್ಷಣ, ಪ್ರಾಥಮಿಕ ಶಿಕ್ಷಣ ಇಲಾಖೆಯೊಂದಿಗೆ ಚರ್ಚೆ ನಡೆಸಿ ಪ್ರವಾಸಿ ತಾಣಗಳ ವೀಕ್ಷಣೆಗೆ ಯೋಜನೆ ರೂಪಿಸಲಾಗುವುದು ಎಂದು ಹೇಳಿದರು. ಕಾವೇರಿ ಆರತಿ ಮಾಡಲು ಕಾರ್ಯಕ್ರಮ ರೂಪಿಸಲಾಗಿದೆ. ಇದರ ಯೋಜನೆ ತಯಾರಾಗುತ್ತಿದೆ. ಆದರೆ, ಇದಕ್ಕೆ ಕೆಲವರು ಅಡಚಣೆ ಮಾಡುತ್ತಿದ್ದಾರೆ. ನ್ಯಾಯಾಲಯಕ್ಕೂ ಹೋಗಿದ್ದಾರೆ. ಆದರೆ, ಪ್ರಕೃತಿ ಮಾತೆಗೆ ಪೂಜೆ, ಆರತಿ ಮಾಡಲು ನಿಲ್ಲಿಸಲು ಯಾರಿಂದಲೂ ಸಾಧ್ಯವಿಲ್ಲ. ಎಚ್.ಡಿ.ಕೋಟೆಯ ಡ್ಯಾಂ, ಪ್ರಾಣಿಗಳು, ಇಡೀ ದೇಶಕ್ಕೆ ಮಾದರಿಯಾಗಿದೆ ಎಂದು ಹೇಳಿದರು.

ಅಂತರಾಳದಿಂದ..
EDITORIAL

# ಎಚ್-1ಬಿ ವೀಸಾ ಶುಲ್ಕ ಏರಿಕೆ ಬೇಡಿ ಪಡೆದ ಭಿಕ್ಷೆ

ಪ್ರಧಾನಿ ಮೋದಿಯವರು ರವಿವಾರ ಸಂಜೆ 5 ಗಂಟೆಗೆ ಅನಿರೀಕ್ಷಿತವಾಗಿ ಟಿ.ವಿ.ಯಲ್ಲಿ ಕಾಣಿಸಿಕೊಂಡು ಭಾಷಣ ಮಾಡಲಿದ್ದಾರೆ ಎನ್ನುವುದು ಗೊತ್ತಾಗುತ್ತಿದ್ದಂತೆಯೇ ದೇಶ ಬೆಚ್ಚಿ ಬಿದ್ದಿತ್ತು. ಈ ಹಿಂದೆ, ನೋಟು ನಿಷೇಧ, ಲಾಕ್‌ಡೌನ್‌ಗಳನ್ನು ಘೋಷಿಸಲು ಪ್ರಧಾನಿಯವರು ಹೀಗೆಯೇ ಅನಿರೀಕ್ಷಿತವಾಗಿ ಟಿ.ವಿ.ಯಲ್ಲಿ ಕಾಣಿಸಿಕೊಂಡಿದ್ದರು. ಬಿಹಾರದಲ್ಲಿ ಚುನಾವಣೆ ನಡೆಯಲಿರುವುದರಿಂದ ಈ ಬಾರಿ ತೀರಾ ಆಘಾತಕಾರಿ ಘೋಷಣೆಗಳನ್ನು ಮಾಡಲಾರರು ಎನ್ನುವ ಸಣ್ಣ ವಿಶ್ವಾಸ ಜನರಲ್ಲಿತ್ತು. ಮೋದಿಯವರ ಬದಲಿಗೆ ಅವರ ಆಪ್ತ ಮಿತ್ರ 'ಡೊಲಾಂಡ್' ಟ್ರಂಪ್ ಅವರು ಸುಂಕ ಏರಿಕೆ, ವೀಸಾ ಶುಲ್ಕ ಏರಿಕೆ ಮೊದಲಾದ ರೂಪದಲ್ಲಿ ಭಾರತೀಯರ ಮೇಲೆ ಕ್ಷಿಪಣಿಗಳನ್ನು ಎಸೆದಿರುವಾಗ, ಅದಕ್ಕಿಂತ ಆಘಾತಕಾರಿಯಾದ ಉಡುಗೊರೆಗಳನ್ನು ನೀಡಲು ಪ್ರಧಾನಿಯ ಬಳಿ ಇರುವುದಾದರೂ ಏನು ಬಹುಶಃ ಕಳೆದ ಎಂಟು ವರ್ಷಗಳ ಕಾಲ ಜಿಎಸ್‌ಟಿ ಹೆಸರಿನಲ್ಲಿ ದೇಶದ ಜನರನ್ನು ಸುಲಿಗೆ ಮಾಡಿದ ಪಾಪವನ್ನು ತೊಳೆದುಕೊಳ್ಳಲು ಮುಂದಾಗಿರಬಹುದೆ ಅದಕ್ಕಾಗಿ ದೇಶದ ಜನರ ಮುಂದೆ ಕ್ಷಮೆಯಾಚನೆ ಮಾಡಬಹುದೆ ಎನ್ನುವ ಸಣ್ಣದೊಂದು ನಿರೀಕ್ಷೆ ಜನರಲ್ಲಿತ್ತು.



ಅಥವಾ ಎಚ್-1 ಬಿ ವೀಸಾ ಶುಲ್ಕವನ್ನು ಅಮೆರಿಕ ಭಾರೀ ಪ್ರಮಾಣದಲ್ಲಿ ಏರಿಕೆ ಮಾಡಿರುವುದರಿಂದ, ಅನಿವಾಸಿ ಭಾರತೀಯರಿಗೆ ಪುನರ್ವಸತಿ ಕಲ್ಪಿಸಲು ಭಾರೀ ಯೋಜನೆಗಳೊಂದಿಗೆ ಬರುತ್ತಿರಬಹುದು ಎಂದು ಕೆಲವರು ಮನಸ್ಸಿನಲ್ಲೇ ಮಂಡಿಗೆ ತಿಂದಿದ್ದರು. ಆದರೆ ಟಿವಿಯಲ್ಲಿ ಕಾಣಿಸಿಕೊಂಡ ಪ್ರಧಾನಿ, ಜಿಎಸ್‌ಟಿ ಸುಧಾರಣೆಯನ್ನೇ ದೇಶದ ಆರ್ಥಿಕತೆಯಲ್ಲಾಗಿರುವ ಕ್ರಾಂತಿಯೆಂಬಂತೆ ಮಾತನಾಡಿ ತಮ್ಮ ಮಾತುಗಳನ್ನು ಮುಗಿಸಿದ್ದಾರೆ. ಕನಿಷ್ಠ ಕುಸಿದು ಕೂತಿರುವ ದೇಶದ ತಲೆಯ ಮೇಲೆ ಇನ್ನೊಂದು ಚಪ್ಪಡಿ ಕಲ್ಲು ಎಳೆದು ಹಾಕಲಿಲ್ಲವಲ್ಲ ಎಂದು ಜನರು ಸರಾಗ ನಿಟ್ಟುಸಿರಿಟ್ಟು ಟಿ.ವಿ. ಬಂದ್ ಮಾಡಿದ್ದಾರೆ.

> **ಕಳೆದ ಹತ್ತು ವರ್ಷಗಳಲ್ಲಿ ಭಾರತ ಸ್ವಾವಲಂಬನೆಯಲ್ಲಿ ಯಾಕೆ ಹಿಂದುಳಿಯಿತು ಎನ್ನುವ ಪ್ರಶ್ನೆಗಳಿಗೆ ಸ್ವತಃ ಮೋದಿಯವರೇ ಉತ್ತರಿಸಬೇಕು. ನೋಟು ನಿಷೇಧ, ಅವೈಜ್ಞಾನಿಕವಾಗಿ ಜಿಎಸ್‌ಟಿ ತೆರಿಗೆ ಹೇರಿಕೆ, ಲಾಕ್‌ಡೌನ್ ಇವೆಲ್ಲವೂ ಈ ದೇಶದ ಸಣ್ಣ ಪುಟ್ಟ ಉದ್ದಿಮೆಗಳನ್ನು ಹೇಗೆ ಹಂತಹಂತವಾಗಿ ಸರ್ವನಾಶ ಮಾಡಿತು ಎನ್ನುವುದನ್ನು ನೋಡುತ್ತಾ ಬಂದಿದ್ದೇವೆ. ಜರ್ಜರಿತ ಆರ್ಥಿಕ ವ್ಯವಸ್ಥೆಯ ಜೊತೆಗೆ, ಕಳೆದ ಒಂದು ದಶಕಗಳಲ್ಲಿ ಹೆಚ್ಚಿದ ದೊಂಬಿ, ಗಲಭೆಗಳು ಹಲವು ಉದ್ಯಮಿಗಳನ್ನು ದೇಶ ತೊರೆಯುವಂತೆ ಮಾಡಿತು.**

ಈಗಾಗಲೇ ತಂದಿರುವ ಜಿಎಸ್‌ಟಿ ಸುಧಾರಣೆಯನ್ನು ಅವರು 'ಬಚತ್ ಉತ್ಸವ್' ಎಂದು ಬಣ್ಣಿಸಿದ್ದಾರೆ. ಹಾಗೆಯೇ ಸ್ವದೇಶಿ ಉತ್ಪನ್ನಗಳನ್ನು ಉತ್ತೇಜಿಸಲು ದೇಶದ ಜನತೆಗೆ ಕರೆ ನೀಡಿದ್ದಾರೆ. ಇದೀಗ ಒಂದು ಪ್ರಶ್ನೆ ದೇಶದ ಜನರನ್ನು ಹುಳದಂತೆ ಕೊರೆಯುತ್ತಿದೆ. ಕಳೆದ ಎಂಟು ವರ್ಷಗಳಲ್ಲಿ ಈ ಅವೈಜ್ಞಾನಿಕ ಜಿಎಸ್‌ಟಿ ತೆರಿಗೆಯನ್ನು ದೇಶದ ಮೇಲೆ ಹೇರಿದವರು ಸ್ವತಃ ಪ್ರಧಾನಿ ಮೋದಿಯವರೇ ಅಲ್ಲವೆ ಈ ತೆರಿಗೆಯ ವಿರುದ್ಧ ವಿರೋಧ ಪಕ್ಷಗಳ ನಾಯಕರು, ಆರ್ಥಿಕ ತಜ್ಞರು ಆಕ್ರೋಶ ವ್ಯಕ್ತಪಡಿಸುತ್ತಾ ಬಂದಿದ್ದರೂ ಅದರ ಬಗ್ಗೆ ಅವರು ತಲೆಕೆಡಿಸಿಕೊಂಡಿರಲಿಲ್ಲ. ಈ ಎಂಟು ವರ್ಷಗಳ ಕಾಲ ದೇಶದ ಜನರ ಉಳಿತಾಯವನ್ನು 'ಕಿತ್ತುಕೊಂಡದ್ದು ಯಾಕೆ' ಹಾಗೆಯೇ ಸ್ವದೇಶಿ ಉತ್ಪನ್ನಗಳಿಗೆ ಆದ್ಯತೆ ನೀಡಬಾರದು ಎನ್ನುವ ಕಾರಣಕ್ಕಾಗಿ ಜಿಎಸ್‌ಟಿ ತೆರಿಗೆಯನ್ನು ಈವರೆಗೆ ಹೇರಲಾಗಿತ್ತೆ ಅಮೆರಿಕ ಭಾರೀ ಸುಂಕವನ್ನು ಹೇರಿದ ಬಳಿಕ ಹಾಗೂ ಎಚ್-1ಬಿ ವೀಸಾ ಶುಲ್ಕವನ್ನು ಒಂದು ಲಕ್ಷ ಡಾಲರ್‌ಗೆ ಏರಿಕೆ ಮಾಡಿದ ಬಳಿಕ ಪ್ರಧಾನಿ ಮೋದಿಯವರು ಏಕಾಏಕಿ 'ಸ್ವದೇಶಿ ಉತ್ಪನ್ನ'ಗಳ ಬಗ್ಗೆ ಕಾಳಜಿ ವ್ಯಕ್ತಪಡಿಸುತ್ತಿದ್ದಾರೆ. ಇಂತಹದೊಂದು ದಯನೀಯ ಸ್ಥಿತಿಗೆ ದೇಶವನ್ನು ತಳ್ಳಿದವರು ಸ್ವತಃ ಪ್ರಧಾನಿ ಮೋದಿಯವರೇ ಆಗಿದ್ದಾರೆ. ತನ್ನ 'ತಪ್ಪನ್ನು ತಿದ್ದಿಕೊಂಡಿದ್ದೇನೆ' ಎಂದು ಘೋಷಿಸಬೇಕಾಗಿದ್ದ ಮೋದಿಯವರು, ತಪ್ಪನ್ನು ತಿದ್ದಿಕೊಂಡಿರುವುದನ್ನೇ ಜನರಿಗೆ ನೀಡಿರುವ ಉಡುಗೊರೆಯೆಂದು ಬಿಂಬಿಸಲು ಹೊರಟಿದ್ದಾರೆ.

ಎಚ್1 ಬಿ ವೀಸಾ ಶುಲ್ಕವನ್ನು ಟ್ರಂಪ್ ಒಂದು ಲಕ್ಷ ಡಾಲರ್‌ಗೆ ಏರಿಕೆ ಮಾಡಿದಾಗ ಅದು ಮೋದಿಯ ವರ್ಚಸ್ಸಿನ ಮೇಲೆ ಇನ್ನಷ್ಟು ಗೀರುಗಳನ್ನು ಎಳೆದಿತ್ತು. ಈ ಹಿಂದೆ ಅಮೆರಿಕ ಅನಿವಾಸಿಗಳ ಮುಂದೆ ಭಾಷಣ ಮಾಡುತ್ತಾ 'ಅಹ್ಮದಾಬಾದ್, ಬೆಂಗಳೂರಿನಲ್ಲಿ ಅಮೆರಿಕದ ಹೊಸ ಕಾನ್ಸುಲೇಟ್ ತೆರೆಯಲಿದ್ದೇವೆ' ಎಂದು ಘೋಷಿಸಿದಾಗ ಅನಿವಾಸಿ ಭಾರತೀಯರು 'ಮೋದಿ ಮೋದಿ' ಎಂದು ಚೀರಾಡಿದ್ದರು. ಹಾಗೆಯೇ ಎಚ್1 ಬಿ ವೀಸಾ ನವೀಕರಣಕ್ಕೆ ಅಮೆರಿಕದಿಂದ ಹೊರಗೆ ಹೋಗಬೇಕಾಗಿಲ್ಲ, ಅದಕ್ಕೂ ಕ್ರಮ ತೆಗೆದುಕೊಂಡಿದ್ದೇವೆ ಎಂದು ಭಾಷಣದಲ್ಲಿ ಹೇಳಿದಾಗ ಅಮೆರಿಕದ ಅನಿವಾಸಿ ಭಾರತೀಯರು ಎದ್ದು ನಿಂತು ಹಲವು ನಿಮಿಷ ಚಪ್ಪಾಳೆ ತಟ್ಟಿದ್ದರು. ಅಮೆರಿಕದ ನೆಲದಲ್ಲಿ ನಿಂತು 'ಅಬ್ ಕಿ ಬಾರ್ ಟ್ರಂಪ್ ಸರಕಾರ್' ಎಂದು ಮೋದಿ ಘೋಷಣೆ ಕೂಗಿದಾಗ ಇದೇ ಅನಿವಾಸಿಗಳು ಚಪ್ಪಾಳೆ ತಟ್ಟಿ ಸ್ವಾಗತಿಸಿದ್ದರು. ಕಳೆದ ಒಂದು ದಶಕದಿಂದ ಭಾರತ ಆರ್ಥಿಕವಾಗಿ ಜರ್ಜರಿತವಾಗಿದ್ದರೂ ಕೋಮುವಾದಿ ಅಜೆಂಡಾಗಳಿಗೆ ಹಣ ಸುರಿಯುತ್ತಾ ಬಂದವರೂ ಈ ಅನಿವಾಸಿಗಳೇ ಆಗಿದ್ದಾರೆ. ಇದೀಗ ಎಚ್-1ಬಿ ವೀಸಾ ಶುಲ್ಕ ದುಪ್ಪಟ್ಟು ಆಗಿರುವುದನ್ನು ಹೇಗೆ ಸ್ವಾಗತಿಸಬೇಕು, ಯಾರನ್ನು ಇದಕ್ಕಾಗಿ ದೂರಬೇಕು ಎನ್ನುವುದನ್ನು ತಿಳಿಯದೆ ಅಮೆರಿಕದ ಈ ಅನಿವಾಸಿ 'ತೆಂಗಿನ ಕಾಯಿ'ಗಳು ಕಕ್ಕಾಬಿಕ್ಕಿಯಾಗಿವೆ. ಒಂದು ರೀತಿಯಲ್ಲಿ ಅವರೇ ಬೇಡಿ ಪಡೆದ ಭಿಕ್ಷೆ ಇದು. ತಕ್ಷಣ ತನ್ನ ಅನಿವಾಸಿ ಗೆಳೆಯರ ನೆರವಿಗೆ ಧಾವಿಸಬೇಕಾಗಿದ್ದ ಪ್ರಧಾನಿ ಮೋದಿಯವರು 'ಇತರ ದೇಶಗಳ ಮೇಲಿನ ಅವಲಂಬನೆಯೇ ಭಾರತದ ಅತಿ ದೊಡ್ಡ ಶತ್ರು' ಎಂದು ಪ್ರತಿಕ್ರಿಯಿಸಿ, ಅನಿವಾಸಿ ಭಾರತೀಯರನ್ನೇ ಮೋದಿಯವರು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ್ದಾರೆ.

# ರಾಮಾಯಣ



## ಶರಭಂಗಮುನಿಯು ಬ್ರಹ್ಮಲೋಕವನ್ನು ಸೇರಿದ ವೃತ್ತಾಂತ

• ಹಿಂದಿನ ಸಂಚಿಕೆಯಿಂದ 117ನೆಯ ಅಧ್ಯಾಯ

ನಮ್ಮ ಮುಂದೆ ಇರುವ ಪಕ್ಷಿಗಳು ಯುದ್ಧಕ್ಕೆ ಬರುವ ಖರನಿಗೆ ನಮ್ಮಿಂದ ಭಯವುಂಟೆಂದು ಸಾರುತ್ತಿವೆಯೋ ಎಂಬಂತೆ ಸ್ವರಗೈಯುತ್ತಿದೆ. ರಾಕ್ಷಸರಿಗೆ ನಮ್ಮಿಂದ ಹಾನಿಯುಂಟಾಗುವುದರಲ್ಲಿ ಸಂದೇಹವಿಲ್ಲ. ಏಕೆಂದರೆ, ನನ್ನ ಬಲತೋಳು ಅಡಿಗಡಿಗೆ ಹಾರುತ್ತಿದೆ.

ನಿನ್ನ ಮುಖವು ಕಾಂತಿಯುಕ್ತವಾಗಿ ಪ್ರಸನ್ನವಾಗಿದೆ. ಬೊಬ್ಬಿಡುವ ರಾಕ್ಷಸರ ಧ್ವನಿಯೂ ಭೇರಿ ತಾಳಾದಿಗಳ ಧ್ವನಿಯೂ ಮಹಾಭಯಂಕರವಾಗಿ ಕೇಳಿಸುತ್ತಿವೆ. ಲೋಕದಲ್ಲಿ, ಒಬ್ಬನಿಂದ ಉಪದ್ರವವು ಬರುವುದೆಂದು ತಿಳಿದರೆ ಆ ಉಪದ್ರವವು ಪ್ರಾಪ್ತವಾಗುವುದಕ್ಕೆ ಮೊದಲೇ ಪ್ರತೀಕಾರವನ್ನು ಹುಡುಕುವುದು ಬುದ್ಧಿವಂತರ ಕಾರ್ಯ. ಆದ್ದರಿಂದ ನೀನು ಬಿಲ್ಲಂಬುಗಳನ್ನು ತೆಗೆದುಕೊಂಡು ಸೀತಾದೇವಿಯನ್ನು ಕರೆದುಕೊಂಡು ಪರ್ವತದ ಗುಹೆಗೆ ಹೋಗು. ನಾನು ರಾಕ್ಷಸರೊಡನೆ ಯುದ್ಧವನ್ನು ಮಾಡುತ್ತೇನೆ. ನೀನು ಬಲವಂತನು, ಪರಾಕ್ರಮಿ. ಈ ರಾಕ್ಷಸರನ್ನು ಸಂಹಾರಮಾಡಲಾಪುವೆ, ಸಂಶಯವಿಲ್ಲ. ಆದರೆ ನನಗೆ ಈ ರಾಕ್ಷಸಬಲವನ್ನು ಸಂಹರಿಸುವುದಕ್ಕೆ ಇಚ್ಛೆಯುಂಟಾಗಿದೆ. ಆದ್ದರಿಂದ ನೀನು ಸೀತೆಯನ್ನು ಕರೆದುಕೊಂಡು ಹೋಗು, ತಡಮಾಡಬೇಡ ಎಂದು ಹೇಳಿದನು.

ಲಕ್ಷ್ಮಣನು ಮಹಾಪ್ರಸಾದವೆಂದು ಅಂಗಿಕರಿಸಿ ಬಿಲ್ಲುಬಾಣಗಳನ್ನು ತೆಗೆದುಕೊಂಡು ಸೀತಾದೇವಿಯನ್ನು ಕರೆದುಕೊಂಡು ಅತಿಗಂಭೀರವಾಗಿದ್ದ ಒಂದು ಗುಹೆಯನ್ನು ಸೇರಿದನು. ಆಮೇಲೆ ಶ್ರೀರಾಮನು ಕವಚವನ್ನು ತೊಟ್ಟುಕೊಂಡು ದೇದೀಪ್ಯಮಾನನಾಗಿ ಅಂಧಕಾರದಲ್ಲಿ ಪ್ರಜ್ವಲಿಸುತ್ತಿರುವ ಯಜ್ಞಪುರುಷನಂತೆ ಒಪ್ಪುತ್ತ ಬಿಲ್ಲಿಗೆ ಹೆದೆಯನ್ನೇರಿಸಿ ಝುಂಕಾರ ಧ್ವನಿಯಿಂದ ನಾನಾದಿಕ್ಕುಗಳನ್ನು ತುಂಬುತ್ತ ದೃಢವಾಗಿ ನಿಂತು ಸಮರಸಂನದ್ಧನಾದನು.

ಆ ಸಮಯದಲ್ಲಿ ಗಂಧರ್ವ ಯಕ್ಷ ಸಿದ್ಧ ವಿದ್ಯಾಧರ ಕಿನ್ನರ ಕಿಂಪುರುಷಾದಿ ದೇವತೆಗಳೂ ಮಹಾತ್ಮರಾದ ಬ್ರಹ್ಮರ್ಷಿಗಳೂ ಶ್ರೀರಾಮನ ಯುದ್ಧಕೌಶಲವನ್ನು ನೋಡಬೇಕೆಂದು ಬಂದು ಅನ್ಯೋನ್ಯಸಂಭಾಷಣೆಯನ್ನು ಮಾಡುತ್ತಲಿದ್ದರು : ಗೋವುಗಳಿಗೂ ಬ್ರಾಹ್ಮಣರಿಗೂ ಸುಖವಾಗಲಿ. ಸಮಸ್ತ ಜನಗಳಿಗೂ ಭಯವಿಲ್ಲದಂತಾಗಲಿ! ಯುದ್ಧರಂಗದಲ್ಲಿ ನಾರಾಯಣನು ತನ್ನ ಚಕ್ರದಿಂದ ಸಮಸ್ತ ರಾಕ್ಷಸರನ್ನೂ ಜಯಿಸಿದಂತೆ ಶ್ರೀರಾಮನು ಈ ರಾಕ್ಷಸರನ್ನು ಸಂಹರಿಸಲಿ 1 ಮಹಾ ಪರಾಕ್ರಮಿಗಳಾಗಿ ಕ್ರೂರಕರ್ಮಿಗಳಾದ ಈ ರಾಕ್ಷಸರು ಹದಿನಾಲ್ಕು ಸಾವಿರ ಮಂದಿ ಇದ್ದಾರೆ. ಮಹಾತ್ಮನಾದ ಶ್ರೀರಾಮನು ಒಬ್ಬನು ಮಾತ್ರ. ಈ ಇತ್ತಂಡದವರಿಗೆ ಯುದ್ಧವಾಗುವ ಪ್ರಕಾರವು ಹೇಗೆ ಎಂದು ನುಡಿಯುತ್ತಿದ್ದರು. ಹೀಗೆ ರಾಜರ್ಷಿಗಳೂ ಬ್ರಹ್ಮರ್ಷಿಗಳೂ ಸಿದ್ಧರೂ ಸಮಸ್ತ ದೇವತೆಗಳೂ ವಿಮಾನಾರೂಢರಾಗಿ ಅತ್ಯಾಶ್ಚರ್ಯಕರವಾದ ಆಯುಧಪ್ರಸಂಗವನ್ನು ಅಂತರಿಕ್ಷ ಮಾರ್ಗದಲ್ಲಿ ನೋಡುವುದಕ್ಕಾಗಿ ಸೇರಿದರು.

ಮುಂದುವರಿಯುವುದು...

# ನವರಾತ್ರಿಯ ಬಣ್ಣಗಳು

• ಉದಯವಾಹಿನಿ, ವಿಶೇಷ

ವಿಶ್ವಾಸ್.ಡಿ.ಗೌಡ





**ದಿನ 1**

ಕಿತ್ತಳೆ ಬಣ್ಣಗಳ ಗುಂಪಿನಲ್ಲಿ ಅತ್ಯಂತ ರೋಮಾಂಚಕ ಬಣ್ಣಗಳಲ್ಲಿ ಒಂದಾಗಿದೆ. ಆದ್ದರಿಂದ, ನೀವು ನವರಾತ್ರಿಯ 1 ನೇ ದಿನದಂದು ಕಿತ್ತಳೆ ಬಣ್ಣವನ್ನು ಧರಿಸಿದರೆ, ಖಂಡಿತವಾಗಿಯೂ ನೀವು ಸಂತೋಷ, ಸೃಜನಶೀಲತೆ ಮತ್ತು ಸಾಕಷ್ಟು ಸಕಾರಾತ್ಮಕ ಶಕ್ತಿಯಿಂದ ಆಶೀರ್ವದಿಸಲ್ಪಡುತ್ತೀರಿ ಎಂದರ್ಥ. ಯಾವುದೇ ನಕಾರಾತ್ಮಕ ಭಾವನೆಗಳಿಲ್ಲದೆ ಶಾಂತ ಮನಸ್ಸಿನಲ್ಲಿ ವ್ಯಕ್ತಿಯು ಸಮಸ್ಯೆಗಳನ್ನು ಎದುರಿಸಲು ಸಹಾಯ ಮಾಡುತ್ತದೆ.

**ದಿನ 2**

ಬಿಳಿ ಬಣ್ಣವು ಶಾಂತಿ ಮತ್ತು ಸಾಮರಸ್ಯವನ್ನು ಸಂಕೇತಿಸುತ್ತದೆಯಾದ್ದರಿಂದ, ಇದು ಒಬ್ಬರ ಜೀವನದಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದೆ. ಬಿಳಿ ಬಣ್ಣವು ನವರಾತ್ರಿಯ 2 ನೇ ದಿನದ ಅಗತ್ಯವಿದೆ. ಈ ಬಣ್ಣವನ್ನು ಧರಿಸುವುದರಿಂದ, ಭಕ್ತರು ತಮ್ಮ ಜೀವನದಲ್ಲಿ ಭದ್ರತೆ, ಸಂತೋಷ ಮತ್ತು ಚಿಂತನೆಯ ಶುದ್ಧತೆಯ ಭಾವನೆಯೊಂದಿಗೆ ಆಶೀರ್ವದಿಸಲ್ಪಡುತ್ತಾರೆ.

**ದಿನ 3**

ಕೆಂಪು ಬಣ್ಣವು ಶಕ್ತಿಯುತ ಬಣ್ಣವಾಗಿದ್ದು ಅದು ಪ್ರೀತಿ, ಉತ್ಸಾಹ ಮತ್ತು ಧೈರ್ಯದ ಭಾವನೆಯನ್ನು ಸೂಚಿಸುತ್ತದೆ. ನವರಾತ್ರಿಯ 3 ನೇ ದಿನದಂದು, ಕೆಂಪು ಬಣ್ಣವನ್ನು ಧರಿಸಿದರೆ, ಅದು ಹಿಂದೂ ಭಕ್ತರಿಗೆ ಇಡೀ ವರ್ಷ ಚೈತನ್ಯ, ನಿಷ್ಠೆ ಮತ್ತು ಸೌಂದರ್ಯದಿಂದ ಆಶೀರ್ವದಿಸಲು ಸಹಾಯ ಮಾಡುತ್ತದೆ.

**ದಿನ 4**

ನವರಾತ್ರಿಯ 4 ನೇ ದಿನದಂದು, ಹಬ್ಬದ ಸಮಯದಲ್ಲಿ ಮತ್ತು ನಿಮ್ಮ ಜೀವನದಲ್ಲಿ ಸೊಬಗು ಮತ್ತು ರಾಯಧನವನ್ನು ತರಲು ಕಡು ನೀಲಿ ಉಡುಪುಗಳನ್ನು ಧರಿಸಿ. ಕಡು ನೀಲಿ ಬಣ್ಣವು ಸರಿಸಾಟಿಯಿಲ್ಲದ ವರ್ಚಸ್ಸನ್ನು ಸೂಚಿಸುತ್ತದೆ ಮತ್ತು ಜೀವನದಲ್ಲಿ ನೀವು ಯಾವುದೇ ಗುರಿಯನ್ನು ಸಾಧಿಸುವ ಉತ್ಸಾಹವನ್ನು ಸೂಚಿಸುತ್ತದೆ.

**ದಿನ 5**

ನವರಾತ್ರಿಯ 5 ನೇ ದಿನದಂದು ಹಳದಿ ಬಣ್ಣದ ಛಾಯೆಯನ್ನು ಧರಿಸಿ ಒಬ್ಬರ ಜೀವನ ಸಂತೋಷ, ಸಕಾರಾತ್ಮಕತೆಯ ಜೊತೆಜೊತೆಗೆ ಶ್ರೀಮಂತರಾಗಲು. ಈ ಬಣ್ಣವು ಉಷ್ಣತೆ ಮತ್ತು ಸಂತೋಷವನ್ನು ಸೂಚಿಸುತ್ತದೆಯಾದ್ದರಿಂದ, ಇದು ಖಂಡಿತವಾಗಿಯೂ ವ್ಯಕ್ತಿಯು ವಿಶೇಷ ದಿನದಲ್ಲಿ ಮತ್ತು ಇಡೀ ವರ್ಷ ಶಾಂತ ಮತ್ತು ಹರ್ಷಚಿತ್ತದಿಂದ ಇರುವಂತೆ ಮಾಡುತ್ತದೆ.

**ದಿನ 6**

ಹಸಿರು ಬಣ್ಣ ಎಂದರೆ ಫಲವತ್ತತೆ, ಸಕಾರಾತ್ಮಕ ಬೆಳವಣಿಗೆ, ಶಾಂತತೆ ಮತ್ತು ಶಾಂತಿ. ಆದ್ದರಿಂದ, ನೀವು ನವರಾತ್ರಿಯ 6 ನೇ ದಿನದಂದು ಹಸಿರು ಬಣ್ಣದ ಉಡುಪುಗಳನ್ನು ಧರಿಸಬೇಕು. ಇದು ಭಕ್ತನ ಜೀವನದಲ್ಲಿ ಹೊಸ ಮಂಗಳಕರ ಆರಂಭವನ್ನು ಸೂಚಿಸುತ್ತದೆ. ದೇವಿಯು ನಿಮ್ಮ ಜೀವನದಲ್ಲಿ ಪ್ರಶಾಂತತೆಯನ್ನು ತರಲಿ.

**ದಿನ 7**

ಬೂದು ಬಣ್ಣ ಎಂದರೆ ಮನಸ್ಸು ಮತ್ತು ಭಾವನೆಗಳ ಸಮತೋಲನ. ಇದು ಮಣ್ಣಿನ ಬಣ್ಣವಾಗಿರುವುದರಿಂದ, ಇದು ನಮ್ರತೆ ಮತ್ತು ಭೂಮಿಯ ಪಾತ್ರ ಮತ್ತು ಜೀವನಶೈಲಿಯನ್ನು ಸೂಚಿಸುತ್ತದೆ. ನವರಾತ್ರಿಯ 7 ನೇ ದಿನದಂದು ನೀವು ಬೂದು ಬಣ್ಣ ಧರಿಸಬೇಕಾಗುತ್ತದೆ. ಬಣ್ಣವು ಉತ್ತಮ ಬದಲಾವಣೆ ಮತ್ತು ರೂಪಾಂತರ ಸೂಚಿಸುತ್ತದೆ.

**ದಿನ 8**

ನೇರಳೆ ಬಣ್ಣವು ಶಾಂತಿ ಮತ್ತು ಉದಾತ್ತತೆಯನ್ನು ಸೂಚಿಸುತ್ತದೆ. ನವರಾತ್ರಿಯ 8 ನೇ ದಿನದಂದು, ನೇರಳೆ ಛಾಯೆಯನ್ನು ಧರಿಸಿ ಮತ್ತು ಸಮೃದ್ಧಿ ಮತ್ತು ಐಶ್ವರ್ಯವನ್ನು ದಯಪಾಲಿಸಿ. ಇದು ಉತ್ತಮವಾದ ಬಣ್ಣವಾಗಿದ್ದು, ದುರ್ಗಾದೇವಿಯನ್ನು ಪರಿಪೂರ್ಣ ರೀತಿಯಲ್ಲಿ ಮೆಚ್ಚಿಸಲು ಸಹಾಯ ಮಾಡುತ್ತದೆ.

**ದಿನ 9**

ನವಿಲು ಹಸಿರು ಬಣ್ಣವು ಪ್ರತ್ಯೇಕತೆ ಮತ್ತು ಬುದ್ಧಿವಂತಿಕೆಯನ್ನು ಸೂಚಿಸುತ್ತದೆ. ನವರಾತ್ರಿಯ 9 ನೇ ದಿನದಂದು ಶಾಂತಿ, ಅನನ್ಯತೆ ಮತ್ತು ಸಹ ಜೀವಿಗಳ ಬಗ್ಗೆ ಸಹಾನುಭೂತಿಯ ಗುಣಗಳನ್ನು ಹೊಂದಲು ನವಿಲು ಹಸಿರು ಬಣ್ಣವನ್ನು ಧರಿಸಿ. ಇದು ಹಸಿರು ಮತ್ತು ನೀಲಿ ಮಿಶ್ರಿತ ಬಣ್ಣವಾಗಿರುವುದರಿಂದ, ಎರಡೂ ಬಣ್ಣಗಳ ಪ್ರಯೋಜನವನ್ನು ಪಡೆಯಲು ಭಕ್ತನಿಗೆ ಸಹಾಯ ಮಾಡುತ್ತದೆ.

**ದಿನ 10**

ಗುಲಾಬಿ ಬಣ್ಣವು ಪ್ರೀತಿ, ಸಾಮರಸ್ಯ ಮತ್ತು ಒಳ್ಳೆಯತನವನ್ನು ಸೂಚಿಸುತ್ತದೆ. ನವರಾತ್ರಿಯ 10 ನೇ ದಿನದಂದು ಗುಲಾಬಿಯನ್ನು ಧರಿಸಿ ಮತ್ತು ಅದು ಮಾನವೀಯತೆ, ಮೋಡಿ ಮತ್ತು ಎಲ್ಲಾರಿಂದ ಪ್ರೀತಿಸಲ್ಪಡುವ ವ್ಯಕ್ತಿಯ ಕಡೆಗೆ ಪ್ರೀತಿಯ ಒಳ್ಳೆಯತನವನ್ನು ಆಹ್ವಾನಿಸುತ್ತದೆ.



# ಮಲಬದ್ಧತೆ ನಿವಾರಣೆಗೆ ದಿನಕ್ಕೆರಡು ಕಿವಿ ಹಣ್ಣು ಸೇವಿಸಿ!

• **ಉದಯವಾಹಿನಿ, ಬೆಂಗಳೂರು,**

ಮೊಟ್ಟೆಯಂತೆ ಕಾಣುವ ಕಿವಿ ಹಣ್ಣು ವಾಸ್ತವದಲ್ಲಿ ವಿಟಮಿನ್ ಸಿ ಪೋಷಕಾಂಶದ ಭಂಡಾರವೇ ಆಗಿದೆ. ಅಷ್ಟೇ ಅಲ್ಲದೆ ಈ ಹಣ್ಣಿನಲ್ಲಿ ಅಗಾ ಪ್ರಮಾಣದಲ್ಲಿ ನಾರಿನಾಂಶ ಕಂಡುಬರುವು ದರಿಂದ, ಇದನ್ನು ನಿತ್ಯವೂ ಸೇವನೆ ಮಾಡುತ್ತಾ ಬಂದರೆ ಮಲಬದ್ಧತೆ ಸಮಸ್ಯೆಯೂ ಕ್ರಮೇಣವಾಗಿ ದೂರವಿಡಬಹುದು ಎಂದು ಇತ್ತೀಚೆಗೆ ಪೌಷ್ಟಿಕತಜ್ಞೆ ಡೊಮಿನಿಕ್ ಲುಡ್ವಿಗ್ ಅವರು ತಮ್ಮ ಇನ್ ಸ್ಟಾಗ್ರಾಂನಲ್ಲಿ ಪೇಜ್‌ನಲ್ಲಿ ಮಾಹಿತಿಯನ್ನು ಹಂಚಿಕೊಂಡಿದ್ದಾರೆ

ಕೆಲವೊಂದು ಆರೋಗ್ಯ ಸಮಸ್ಯೆಗಳನ್ನು ಎಲ್ಲಿಯೂ ಕೂಡ ಓಪನ್ ಆಗಿ ಹೇಳಿಕೊಳ್ಳಲು ಸಾಧ್ಯವಾಗುವುದಿಲ್ಲ! ವೈದ್ಯರ ಬಳಿ ಹೇಳಿಕೊಳ್ಳಲು ಕೂಡ ಹಿಂಜರಿಯುತ್ತಾರೆ ಅಂತಹ ಸಮಸ್ಯೆಗಳಲ್ಲಿ ಮಲಬದ್ಧತೆ ಕೂಡ ಒಂದು ಹೌದು ಬೆಳಗ್ಗೆ ಎದ್ದಾಗ ಮಲವಿಸರ್ಜನೆ ಸರಿಯಾಗಿ ಆದರೆ ಹೊಟ್ಟೆಯ ಆರೋಗ್ಯದ ಜೊತೆಗೆ ಇತರ ಆರೋಗ್ಯ ಸಮಸ್ಯೆಗಳು ಕೂಡ ನಮ್ಮಿಂದ ದೂರವಿರುತ್ತದೆ. ಒಂದು ವೇಳೆ ಮಲವಿಸರ್ಜನೆ ಸರಿಯಾಗಿ ಆಗದೇ ಇದ್ದರೆ ಅದುವೇ ಅನೇಕ ಇತರ ಕಾಯಿಲೆಗಳಿಗೆ ದಾರಿಯಾಗುತ್ತದೆ. .

ಇಂದಿನ ದಿನಗಳಲ್ಲಿ ಮಲಬದ್ಧತೆ ಸಮಸ್ಯೆಯು ಹೆಚ್ಚಿನ ಜನರನ್ನು ಕಾಡುತ್ತಿದೆ. ಇದಕ್ಕೆ ಕಾರಣಗಳನ್ನು ನೋಡುವುದಾದರೆ ಅತಿಯಾದ ಒತ್ತಡ, ಜಡ ಜೀವನಶೈಲಿ, ಸಂಸ್ಕರಿಸಿದ ಆಹಾರಗಳ ಸೇವನೆ, ಒತ್ತಡವೇ ಪ್ರಮುಖ ಕಾರಣ ಎನ್ನುತ್ತಾರೆ ವೈದ್ಯರು. ಅದರಲ್ಲೂ ನಗರಗಳಲ್ಲಿ ವಾಸಿಸುವ ಜನರಲ್ಲಿ ದೈಹಿಕ ಚಟುವಟಿಕೆ ಕಡಿಮೆಯಾಗಿದೆ. ಗಂಟೆಗಟ್ಟಲೆ ಲ್ಯಾಪ್ ಟಾಪ್, ಮೊಬೈಲ್ , ಕಂಪ್ಯೂಟರ್ ಮುಂದೆ ಕುಳಿತಿರುತ್ತಾರೆ. ಒಂದೇ ಸ್ಥಳದಲ್ಲಿ ಕುಳಿತಾಗ ದೈಹಿಕ ಚಟುವಟಿಕೆ ಇರುವುದಿಲ್ಲ, ಇಂತಹ ಸಮಯದಲ್ಲಿ ಈ ಸಮಸ್ಯೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ ಎನ್ನುವುದು ತಜ್ಞರ ಅಭಿಪ್ರಾಯ ಇಂದಿನ ಲೇಖನದಲ್ಲಿ ಈ ಗಾಗಲೇ ಮಲಬದ್ಧತೆಯಿಂದ ಬಳಲುತ್ತಿರುವವರು, ದಿನಾ ಕಿವಿ ಹಣ್ಣು ಸೇವನೆ ಮಾಡುವುದರಿಂದ ಹೇಗೆಲ್ಲಾ ಪರಿಹಾರ ಕಂಡುಕೊಳ್ಳಬಹುದು ಎಂದು ಪೌಷ್ಟಿಕತಜ್ಞ ಡೊಮಿನಿಕ್ ಲುಡ್ವಿಗ್ ಅವರು ತಮ್ಮ ಇನ್ ಸ್ಟಾಗ್ರಾಂನಲ್ಲಿ ಮಾಹಿತಿಯನ್ನು ಹಂಚಿಕೊಂಡಿದ್ದಾರೆ,




**ಕಿವಿ ಹಣ್ಣಿನ ಪೋಷಕಾಂಶ ಲಾಭಗಳು:** ಹುಳಿ ಮಿಶ್ರಿತ ಸಿಹಿ ರುಚಿಯನ್ನು ಹೊಂದಿರುವ ಈ ಹಣ್ಣಿನಲ್ಲಿ ಆಗಾಧ ಪ್ರಮಾಣದ ವಿಟಮಿನ್ ಸಿ ಕಾರಣ. ಇನ್ನು ಉಳಿದಂತೆ ಈ ಹಣ್ಣಿನಲ್ಲಿ ಕಂಡು ಬರುವ ಪ್ರಮುಖ ಪೋಷಕಾಂಶಗಳಾದ ವಿಟ ಮಿನ್ ಕೆ, ಫೋಲೇಟ್, ಪೊಟ್ಯಾಶಿಯಮ್ ಅಂಶಗಳೂ ಸಮೃದ್ಧವಾಗಿವೆ. ಅಲ್ಲದೇ ಇದರಲ್ಲಿ ಆಂಟಿ ಆಕ್ಸಿಡೆಂಟುಗಳು ಮತ್ತು ಕರಗುವ ಹಾಗೂ ಕರಗದ ನಾರಿನಂಶವೂ ಸಮೃದ್ಧವಾಗಿದೆ. ಹೀಗಾಗಿ ಇಂತಹ ಪೋಷಕಾಂಶಗಳನ್ನು ಹೊಂದಿರುವ ಈ ಹಣ್ಣನ್ನು ಮಿತವಾಗಿ ಸೇವನೆ ಮಾಡಿದರೆ, ಮಲಬದ್ಧತೆ ಸಮಸ್ಯೆ ನೈಸರ್ಗಿಕ ವಾಗಿ ನಿವಾರಣೆಯಾಗುತ್ತದೆ. ಪ್ರಮುಖವಾಗಿ ಈ ಹಣ್ಣಿನಲ್ಲಿ ಕಂಡು ಬರುವ ನಾರಿನಾಂಶವು ಮಲವನ್ನು ಮೆತ್ತಗಾಗಿ ಸುವುದು, ಜೀರ್ಣ ಕ್ರಿಯೆ ಸುಧಾರಣೆ ಮಾಡುವುದು ಮತ್ತು ಕರುಳಿನ ಕ್ರಿಯೆಯನ್ನು ಸರಾಗವಾಗಿಸುವುದು ಎಂದು ಅಧ್ಯಯನಗಳು ಹೇಳಿವೆ.


# ನವರಾತ್ರಿ ನವದುರ್ಗಾ ದೇವಿಯರ ಆರಾಧನೆ

• ಉದಯವಾಹಿನಿ, ವಿಶೇಷ

**ಮಾರ್ಕಂಡೇಯ ಋಷಿಗಳು ಬರೆದಿರುವ ದುರ್ಗಾಸಪ್ತಶತಿ ಎಂಬ ಗ್ರಂಥವು ತಂತ್ರ ಮತ್ತು ಮಂತ್ರ ಈ ಎರಡೂ ಮಾರ್ಗಗಳಲ್ಲಿ ಪ್ರಸಿದ್ಧವಾಗಿದ್ದು ಭಾರತದಲ್ಲಿ ಇಂದು ಲಕ್ಷಾಂತರ ಜನರು ಸಪ್ತಶತಿಯ ಪಠಣ ಮಾಡುತ್ತಿರುವುದು ಕಂಡುಬರುತ್ತದೆ. ಭಗವಾನ ಹಿರಣ್ಯಗರ್ಭಮುನಿಗಳು ಮಂತ್ರಯೋಗ ಸಮೀಕ್ಷೆಯಲ್ಲಿ ಹೇಳಿರುವ ಶ್ರೀ ದುರ್ಗಾಸಪ್ತಶತಿಯಲ್ಲಿನ ದೇವಿಯ ಹೆಸರುಗಳ ಶಾಸ್ತ್ರೀಯ ಅರ್ಥ ಮತ್ತು ಇಂದಿನ ಭೌತಿಕ ವಿಜ್ಞಾನವು ಮಾಡಿರುವ ಪ್ರಗತಿಯ ಬಗ್ಗೆ ಇಲ್ಲಿ ನಾವು ವಿಚಾರ ಮಾಡೋಣ.**



**ಶೈಲಪುತ್ರಿ :** 'ಶೈಲಮ್' ಅಂದರೆ ಯಾವ ಪರ್ವತದಲ್ಲಿ ಮಾಣಿಕ್ಯ, ರತ್ನ ಮತ್ತಿತರ ಅತ್ಯಮೂಲ್ಯ ವಸ್ತುಗಳ ಸಂಗ್ರಹವಿದೆಯೋ, ಅಂತಹ ಪರ್ವತ.
ಈ ಅತ್ಯಮೂಲ್ಯ ವಸ್ತುಗಳ ಸಂಗ್ರಹವನ್ನು ನೋಡಿಯೂ ಭೌತಿಕ ಸುಖದೆಡೆಗೆ ಆಕರ್ಷಿತಗೊಳ್ಳದೆ, ಭೌತಿಕತೆಯ ತ್ಯಾಗವನ್ನು ಮಾಡುವ ಆತ್ಮಜ್ಞಾನವನ್ನು ಪಡೆಯಲು ಪ್ರವೃತ್ತವಾಗುವವಳೆಂದರೆ ಶೈಲಪುತ್ರಿ.




**ಬ್ರಹ್ಮಚಾರಿಣಿ :** 'ಬ್ರಹ್ಮಚಾರಯಿತುಂ ಶೀಲಂ ಯಸ್ಯಾಃ ಸಾ ಬ್ರಹ್ಮಚಾರಿಣಿ।' ಅಂದರೆ ಬ್ರಹ್ಮರೂಪವಾಗುವುದು ಯಾರ ಶೀಲವಾಗಿದೆಯೋ ಮತ್ತು ಯಾರ ಆಚಾರಗಳು ಅದರಂತಿವೆಯೋ ಅವಳೇ ಬ್ರಹ್ಮಚಾರಿಣಿ.



**ಚಂದ್ರಘಂಟಾ :** 'ಚಂದ್ರಃ ಘಂಟಾಯಾಂ ಯಸ್ಯಾ ಸಾ ಚಂದ್ರಘಂಟಾ। ಆಹ್ಲಾದಯತಿ ಇತಿ ಚಂದ್ರಃ।' ಅಂದರೆ ಆಹ್ಲಾದಕಾರಕ ಚಂದ್ರನು ಯಾರ ದ್ವಾರದಲ್ಲಿ ಸ್ಥಿರವಾಗಿದ್ದಾನೆಯೋ ಅವಳೇ ಚಂದ್ರಘಂಟಾ. ಆಹ್ಲಾದವೆಂದರೆ ಮಮತೆ, ಕ್ಷಮಾಶೀಲತೆ ಮತ್ತು ವಾತ್ಸಲ್ಯ ಈ ಮೂರೂ ಗುಣಗಳ ಸಮ್ಮಿಲಿತ ಸ್ಥಿತಿ.



**ಕೂಷ್ಮಾಂಡಾ :** 'ಕುತ್ಸಿತಃ ಉಷ್ಮಾಃ ಕೂಷ್ಮಾಃ।' ಕುತ್ಸಿತಃ ಅಂದರೆ ಸಹಿಸಲು ಕಠಿಣವಾದುದು. ಉಷ್ಮಾ ಎಂದರೆ ಸೂಕ್ಷ್ಮ ಲಹರಿಗಳ ಧ್ವನಿ. 'ತ್ರಿವಿಧತಾಪಯುಕ್ತಃ ಸಂಸಾರಃ ಸ ಅಂಡೇ ಮಾಂಸಪೇಶ್ಯಾಮ್ ಉದರರೂಪಾಯಾಂ ಯಸಾಃ ಸಾ ಕೂಷ್ಮಾಂಡಾ।' ಇದರ ಅರ್ಥವು ಹೀಗಿದೆ : ತ್ರಿವಿಧತಾಪಗಳೆಂದರೆ ಉತ್ಪತ್ತಿ, ಸ್ಥಿತಿ ಮತ್ತು ಲಯ. 'ಮೃತ್ಯು ಅಂದರೆ ಅನಿಶ್ಚಿತ ಕಾಲಾವಧಿಯ ವರೆಗೆ ವಿಶಿಷ್ಟ ಪದ್ಧತಿಯಿಂದ ನಾಶವಾಗುವುದು'. 'ಸಂಸಾರ'ವೆಂದರೆ 'ಪುನಃಪುನಃ' ಮತ್ತು 'ಅಂಡಃ' ಅಂದರೆ 'ವಿಶಿಷ್ಟ ನಿಯಂತ್ರಣದಿಂದ ಯುಕ್ತವಾಗಿರುವ ಕೋಶ.' ಮಾಂಸ, ಜೀವಕೋಶಗಳು, ಉದರ ಮತ್ತು ರೂಪ ಇವುಗಳಿಂದ ಸಂಪನ್ನವಾದ ಜೀವಗಳು ಈ ಕೋಶದಲ್ಲಿ ತ್ರಿವಿಧತಾಪಗಳ ಪುನರಾವೃತ್ತಿಯ ಅವಸ್ಥೆಯಿಂದ ಪುನಃಪುನಃ ಹೋಗುತ್ತಾರೆ. ಈ ಪ್ರಕ್ರಿಯೆಯಿಂದ ಬಿಡುಗಡೆ ಹೊಂದಲು ಯಾರ ಕೃಪೆಯ ಆವಶ್ಯಕತೆಯಿದೆಯೋ ಅವಳೇ ಕೂಷ್ಮಾಂಡಾ.





**ಸ್ಕಂದಮಾತಾ :** 'ಭಗಃ' ಎಂದರೆ ತೇಜಸ್ಸು. 'ಭಗವತಿ' ಎಂದರೆ 'ವಿಶಿಷ್ಟ ಯೋಗ್ಯತೆಯುಳ್ಳ ಸ್ಪಂದನ ಲಹರಿಗಳಿಂದ ಯುಕ್ತವಾದಂತಹ ತೇಜಸ್ಸು'. ಬ್ರಹ್ಮದೇವ ಮತ್ತು ಭಗವತಿ ದೇವಿಯ ಸಮ್ಮಿಲಿತ ಅವಸ್ಥೆಯಿಂದ ಸನತ್ಕುಮಾರ ಅಥವಾ ಸ್ಕಂದ ಎಂಬ ಹೆಸರಿನ ವಿಶಿಷ್ಟ ರಚನೆಯ ಕಿರಣ ಸಮೂಹವು ಉತ್ಪನ್ನವಾಯಿತು. ಭೂಲೋಕದಿಂದ ಸತ್ಯಲೋಕದ ವರೆಗಿನ ಲೋಕಗಳನ್ನು 'ಸ್ಕಂದರೇಷೆ' ಎನ್ನುತ್ತಾರೆ. ಭೂಲೋಕದಿಂದ ಸತ್ಯಲೋಕದವರೆಗಿನ ವ್ಯಾಹೃತಿಗಳ ಮೇಲೆ ಸ್ಕಂದರೇಷೆಯ ನಿಯಂತ್ರಣವಿದೆ. ವ್ಯಾಹೃತಿ ಅಂದರೆ ಗೂಢ ಸ್ವರ ಅಥವಾ ಮಂತ್ರ. ಸಪ್ತಲೋಕಗಳ ಹೆಸರುಗಳಂತೆ ಅನುಕ್ರಮವಾಗಿ ಭೂಃ, ಭುವಃ, ಸ್ವಃ, ಮಹಃ, ಜನಃ, ತಪಃ ಮತ್ತು ಸತ್ಯ ಇವು ಏಳು ವ್ಯಾಹೃತಿಗಳಾಗಿವೆ. ಈ ಏಳೂ ಲೋಕಗಳ ನಿಯಂತ್ರಕರ ಮಾತೆಯೇ ಸ್ಕಂದಮಾತೆ. ಈ ಏಳೂ ಲೋಕಗಳಿಂದ ಪಾರಾಗಿ ಹೋಗಲು ಯಾರ ಸಹಾಯ ಬೇಕಾಗುತ್ತದೆಯೋ ಅವಳಿಗೆ ಸ್ಕಂದಮಾತಾ ಎನ್ನುತ್ತಾರೆ.



**ಕಾತ್ಯಾಯನಿ :** 'ಕಾತ್ಯಾಯನಸ್ಯ ಅಪತ್ಯಂ ಸ್ತ್ರೀ ಕಾತ್ಯಾಯನಿ।' (ಕಾತ್ಯಾಯನನ ಮಗಳು ಕಾತ್ಯಾಯನಿ) 'ಅಯನ' ಎಂದರೆ 'ಹಲವಾರು ನಕ್ಷತ್ರ ಸಮೂಹಗಳಿಂದ ಯುಕ್ತವಾಗಿರುವ ಭಾಗ'. ಕಾತ್ಯಾಯನ ಋಷಿಗಳು ಇಂತಹ ಒಂದು ಅಯನದ ಪಾಲಕರಾಗಿದ್ದರು. ಒಮ್ಮೆ ಕಾತ್ಯಾಯನರ ಅಯನಗಳಲ್ಲಿನ ದೇವತೆಗಳ ಮೇಲೆ ಅವರದ್ದೇ ಅಯನದಲ್ಲಿನ ಅಯೋಗ್ಯ ಸ್ಪಂದನಲಹರಿಗಳ ಒಂದು ಶಕ್ತಿಯುತ ಸಮೂಹವು ಆಕ್ರಮಣ ಮಾಡಿತು. ಘರ್ಷಣೆಯಿಂದ ಬಹುದೊಡ್ಡ ಉತ್ಪಾತವಾಗುವ ಸಮಯ ಬಂದಿತು. ಆಗ ಕಾತ್ಯಾಯನ ಋಷಿಗಳ ಆಶ್ರಮದಲ್ಲಿ ಸೂಕ್ಷ್ಮಾತಿಸೂಕ್ಷ್ಮ ಶಕ್ತಿಲಹರಿಗಳ ಒಂದು ಅಂಶವು ಒಬ್ಬ ಚಿಕ್ಕ ಬಾಲಕಿಯ ಆಕಾರದಲ್ಲಿ ಪ್ರವೇಶಿಸಿತು. ಈ ಬಾಲಕಿಯನ್ನು ಕಾತ್ಯಾಯನ ಋಷಿಗಳು ತಮ್ಮ ಸಂತಾನವೆಂದು ಪರಿಗಣಿಸಿದರು; ಆದುದರಿಂದ ಅವಳು 'ಕಾತ್ಯಾಯನಿ' ಎಂಬ ಹೆಸರಿನಿಂದ ಪ್ರಸಿದ್ಧಿ ಹೊಂದಿದಳು. ಕಾತ್ಯಾಯನಿಯು ಶಕ್ತಿಯುತ ಅಯೋಗ್ಯ ಸ್ಪಂದನಲಹರಿಗಳನ್ನು ಯೋಗ್ಯ ಸ್ಪಂದನಲಹರಿಗಳನ್ನಾಗಿ ಪರಿವರ್ತಿಸಿ ದೇವತೆಗಳಿಗೆ ಸಹಾಯ ಮಾಡಿದಳು.


ಜಗತ್ಪ್ರಸಿದ್ಧ ಅಮೇರಿಕನ್ ಶಾಸ್ತ್ರಜ್ಞರಾದ ಡಾ.ಕಾರ್ಲ್ ಸೇಗನ್ ಹೇಳುತ್ತಾರೆ, 'ಓರ್ವ ಹೆಸರಾಂತ ರಷ್ಯಾದ ವೈಜ್ಞಾನಿಕರು ಮಾಡಿರುವ ಸಂಶೋಧನೆಯಲ್ಲಿ ಕಂಡು ಬಂದಿರುವುದೇನೆಂದರೆ ಕೆಲವು ಸ್ಪಂದನಗಳು ಅವಕಾಶದಲ್ಲಿ ಅಘನೀಕರಣಗೊಂಡು ಪುನಃ ಯಾವಾಗ ಬೇಕಾದರೂ ಅವುಗಳ ಘನೀಕರಣವಾಗುತ್ತದೆ; ಆದರೆ ಈ ಪ್ರಕ್ರಿಯೆಯು ಯಾವ ವಿಧದಿಂದ ಆಗುತ್ತದೆ ಎಂಬುದನ್ನು ಈಗಲೂ ಖಚಿತವಾಗಿ ಹೇಳಲು ಆಗುವುದಿಲ್ಲ.'



**ಕಾಳರಾತ್ರಿ :** ಹಲವಾರು ಅಯೋಗ್ಯ ಸ್ಪಂದನಲಹರಿಗಳು ಒಟ್ಟುಸೇರಿ ಸಿದ್ಧವಾಗುವ ಶಕ್ತಿಯೆಂದರೆ 'ಕಾಲ' ವ್ಯಕ್ತಿಯ ಅಥವಾ ಪ್ರಾಣಿಗಳ ಅಯೋಗ್ಯ ಸ್ಪಂದನಲಹರಿಗಳು ಆ ವ್ಯಕ್ತಿಯಲ್ಲಿ ಭಯವನ್ನುಂಟು ಮಾಡುತ್ತವೆ. ಆ ಸ್ಪಂದನಲಹರಿಗಳಲ್ಲಿ ವಿಶಿಷ್ಟ ಕ್ಷಮತೆ ಉಂಟಾಯಿತೆಂದರೆ ವಾತಾವರಣದಲ್ಲಿನ ಇದೇ ಜಾತಿಯ ಇತರ ಸ್ಪಂದನಗಳನ್ನು ವ್ಯಕ್ತಿಯ ಶರೀರದೆಡೆ ಆಕರ್ಷಿಸುತ್ತವೆ. ಈ ರೀತಿ ಅಯೋಗ್ಯ ಸ್ಪಂದನಲಹರಿಗಳ ಶಕ್ತಿಯು ಹೆಚ್ಚಾಯಿತೆಂದರೆ ಆಗಬಾರದಂತಹ ಘಟನೆಗಳು ಮತ್ತು ಕೃತಿಗಳು ಆ ವ್ಯಕ್ತಿಯಿಂದ ಆಗುತ್ತವೆ. ಅವುಗಳ ಪ್ರತಿಕ್ರಿಯೆಗಳನ್ನು ನಾವು ಆಪತ್ತು ಅಥವಾ ಸಂಕಟ ಎನ್ನುತ್ತೇವೆ. ಇಂತಹ ಆಪತ್ತನ್ನು ಅಥವಾ ಸಂಕಟವನ್ನು ತರುವ ಅಯೋಗ್ಯ ಸ್ಪಂದನಲಹರಿಗಳ ಸಾಮೂಹಿಕ ಶಕ್ತಿಯ, ಅಂದರೆ ಕಾಲದ ರಾತ್ರಿಯೇ 'ಕಾಳರಾತ್ರಿ'. 'ವಿನಾಶಿಕಾ' ಅಂದರೆ 'ವಿಶೇಷೇಣ ನಾಶಯತಿ ಇತಿ।' ವಿಶೇಷ ಎಂದರೆ 'ವಿಗತಃ ಶೇಷಃ ಯಸ್ಮಾತ್।' (ವಿಶಿಷ್ಟ) ಶೇಷವೂ ಇಲ್ಲದಂತೆ ನಾಶ ಮಾಡುವುದು.



**ಮಹಾಗೌರಿ :** ತಪಸ್ಯೇನೆ ಮಹಾನ್ 'ಗೌರಃ', ಅಂದರೆ 'ತೇಜಸ್ಸ'ನ್ನು ಪ್ರಾಪ್ತಮಾಡಿ ಕೊಂಡವಳೇ ಮಹಾಗೌರಿ'. ಮಂತ್ರಯೋಗಸಮಿಕ್ಷೆಯಲ್ಲಿ 'ಸಮಾಧಿ' ಎಂಬ ಪದದ ವ್ಯುತ್ಪತ್ತಿಯನ್ನು 'ಸಮ್ + ಆ + ಅಧಿ' ಎಂದು ಹೇಳಲಾಗಿದೆ. 'ಸಮ್' ಅಂದರೆ ಸೂಕ್ಷ್ಮಾತಿಸೂಕ್ಷ್ಮ ಶಕ್ತಿತರಂಗಗಳ ಸಮ್ಯಕ್, 'ಆ' ಅಂದರೆ ಅರ್ಥ 'ವರೆಗೆ' ಮತ್ತು 'ಧಿ' ಅಂದರೆ ಅರ್ಥ 'ಮಾನವನ ಶರೀರದಿಂದ ನಿರಂತರವಾಗಿ ಉತ್ಸರ್ಜಿತಗೊಳ್ಳುವ ಸ್ಪಂದನಲಹರಿಗಳು'. ಧೀ ಎಂಬ ಲಹರಿಗಳನ್ನು ಸೂಕ್ಷ್ಮಾತಿಸೂಕ್ಷ್ಮ ಶಕ್ತಿ ಲಹರಿಗಳ ಸಮ್ಯಕ್ ಅವಸ್ಥೆಯ ತನಕ ಕೊಂಡೊಯ್ಯುವ ಪ್ರಕ್ರಿಯೆಯನ್ನು ಸಮಾಧಿ ಎನ್ನುತ್ತಾರೆ. ಈ ರೀತಿ ಪುನಃ ಪುನಃ ಸಮಾಧಿಯನ್ನು ಸಾಧಿಸುವುದಕ್ಕೆ 'ತಪಸ್ಯಾ' ಎನ್ನುತ್ತಾರೆ. ಇಂತಹ ತಪಸ್ಸನ್ನು ವಿಶಿಷ್ಟ ಕಾಲಾವಧಿಯ ತನಕ ಮಾಡುವುದರಿಂದ 'ಗೌರ' ಅಥವಾ 'ತೇಜಸ್ಸು' ಪ್ರಾಪ್ತವಾಗುತ್ತದೆ. ಇಂತಹ ತೇಜಸ್ಸಿನ ಅತ್ಯುಚ್ಚ ತೇಜಸ್ಸನ್ನು ಅಂದರೆ ಮಹಾನ್ ಗೌರವನ್ನು ಯಾವಳು ಪಡೆದುಕೊಂಡಿದ್ದಾಳೆಯೋ ಅವಳು ಮತ್ತು ಯಾರ ಪ್ರಸಾದದಿಂದ ಸಮಾಧಿಯನ್ನು ಸಾಧಿಸಬಹುದೋ ಅವಳೇ 'ಮಹಾಗೌರಿ'.




**ಸಿದ್ಧಿದಾತ್ರಿ :** ಸಾಮಾನ್ಯ ಸ್ಪಂದನಲಹರಿಗಳನ್ನು ಸೂಕ್ಷ್ಮಾತಿಸೂಕ್ಷ್ಮ ಶಕ್ತಿತರಂಗಗಳಲ್ಲಿ ಶಾಶ್ವತವಾಗಿ ಸೇರಿಸುವುದಕ್ಕೆ 'ಮೋಕ್ಷ ಅಥವಾ ಸಿದ್ಧಿ' ಎನ್ನುತ್ತಾರೆ. ಸಿದ್ಧಿಯನ್ನು ನೀಡುವವಳು ಸಿದ್ಧಿದಾತ್ರಿ.'

**(ಆಧಾರ ಗ್ರಂಥ : ಸನಾತನ ಸಂಸ್ಥೆ ನಿರ್ಮಿಸಿದ ಗ್ರಂಥ 'ಶಕ್ತಿ')**

ಸಂಗ್ರಹ
**ವಿನೋದ ಕಾಮತ್,**
**ರಾಜ್ಯ ವಕ್ತಾರರು, ಸನಾತನ ಸಂಸ್ಥೆ**

# ಬಸರಕೋಡ ಗ್ರಾಮದಲ್ಲಿ ಅಸ್ವಚ್ಛತೆ; ಪಾಚಿಗಟ್ಟಿದ ಕುಡಿಯುವ ನೀರು ಪೂರೈಸುವ ಘಟಕ

• ಉದಯವಾಹಿನಿ ಮುದ್ದೇಬಿಹಾಳ


ಉದಯವಾಹಿನಿ ಚಿತ್ರ

ಮಹಾಮಹಿಮ ಶ್ರೀ ಪವಾಡಬಸವೇಶ್ವರ ಪವಿತ್ರ ಸುಕ್ಷೇತ್ರವಾಗಿರುವ ಬಸರಕೋಡ ಗ್ರಾಮವು ಇಂದು ಅಸ್ವಚ್ಛತೆಯಿಂದ ಬಳಲುತ್ತಿದೆ. ಗ್ರಾಮ ಪಂಚಾಯತಿ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದಿಂದಾಗಿ ಚರಂಡಿ ನೀರು ರಸ್ತೆಗಳ ಮಧ್ಯೆ ಹರಿದು, ಗ್ರಾಮಸ್ಥರ ಆರೋಗ್ಯಕ್ಕೂ, ದೇವಾಲಯದ ಭಕ್ತರಿಗೂ ತೊಂದರೆ ಉಂಟುಮಾಡುತ್ತಿದೆ.

ಗ್ರಾಮದ ಬಹುತೇಕ ರಸ್ತೆಗಳಲ್ಲಿ ಚರಂಡಿ ತುಂಬಿ ಹರಿಯುತ್ತಿದ್ದು, ಸ್ವಚ್ಛತೆ ನಮಗೇತಕೆ ಎಂಬಂತ ಪರಿಸ್ಥಿತಿ ನಿರ್ಮಾಣವಾಗಿದೆ. ದೇವಾಲಯಗಳಿಗೆ ಹೋಗುವ ಭಕ್ತರು ಕೊಳಚೆ ನೀರಿನಲ್ಲಿ ಕಾಲಿಟ್ಟು ಹೋಗಬೇಕಾದ ದುರಂತ ಎದುರಿಸುತ್ತಿದ್ದಾರೆ.

**ದೋಬಿಘಾಟ್ ಚರಂಡಿ ಗಲೀಜಿನ ನೆಲೆ:** ಹೂರಗಿನಮಠಕ್ಕೆ ಹೋಗುವ ದಾರಿಯಲ್ಲಿ ಗ್ರಾಮ ಪಂಚಾಯತಿ ನಿರ್ಮಿಸಿರುವ ದೋಬಿಘಾಟ್‌ನ ಪರಿಸ್ಥಿತಿ ಕಣ್ಣಾರೆ ನೋಡಿದರೆ ಮಾತ್ರ ತಿಳಿಯುತ್ತದೆ. ದಿನದ 24 ಗಂಟೆಯೂ ನೀರು ಹರಿದು ಹಸಿರು ಪಾಚಿಯಿಂದ ತುಂಬಿ ನಿತ್ಯ ಹರಿದ್ವರ್ಣದಂತೆ ಕಂಡುಬರುತ್ತದೆ. ಇದೇ ದಾರಿಯ ಮುಂದೇ ಶುದ್ಧ ಕುಡಿಯುವ ನೀರಿನ ಘಟಕವಿದ್ದು, ಅದರ ಪಕ್ಕದಲ್ಲೂ ಚರಂಡಿ ಗಲೀಜು ನೀರು ಹರಿಯುತ್ತಿದೆ. ಚರಂಡಿಗೆ ಹೊಂದಿಕೊಂಡಿರುವ ತಿಪ್ಪೆಗಳು ಸ್ವಚ್ಛ ಮಾಡದೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ

**ಕಾರ್ಮಿಕರು ಸಿಬ್ಬಂದಿ ಇದ್ದರೂ ಅಸಹಾಯಕ ಗ್ರಾಮ:** ಬಸರಕೋಡ ಗ್ರಾಮ ಪಂಚಾಯತಿಯಲ್ಲಿ 2 ಪೌರ ಕಾರ್ಮಿಕರು ಹಾಗೂ 3 ಜನ ವಾಟರ್‌ಮ್ಯಾನ್‌ಗಳು ಇದ್ದರೂ ಪರಿಸ್ಥಿತಿ ಶೋಚನೀಯವಾಗಿದೆ. ಗ್ರಾಮದಲ್ಲಿ ಪ್ರಮುಖ ಪಕ್ಷಗಳ ಮುಖಂಡರು, ಹೋರಾಟಗಾರರು ಇದ್ದರೂ ಊರಿನ ಅಸಹಾಯಕ ಪರಿಸರವೇನು ಬದಲಾಗುತ್ತಿಲ್ಲ. ಕುಡಿಯುವ ನೀರು ಹಾಗೂ ಸ್ವಚ್ಛತೆ ವಿಷಯದಲ್ಲಿ ತಾಲ್ಲೂಕು ಅಧಿಕಾರಿಗಳು ಎಚ್ಚತ್ತು ಕ್ರಮ ಕೈಗೊಳ್ಳುತ್ತಾರೆಯೇ ಎಂಬುದು ಕಾದು ನೋಡಬೇಕಾಗಿದೆ.

### ಕುಡಿಯುವ ನೀರಿನ ಸಂಪ್ ಘಟಕದ ಹೀನಾಯ ಪರಿಸ್ಥಿತಿ

**ಬಹುಹಳ್ಳಿಗಳಿಗೆ ಸರಬರಾಜಾಗುವ ಕುಡಿಯುವ ನೀರಿನ ಸಂಪ್ ಘಟಕವೇ ಪಾಚಿಗಟ್ಟಿದ, ಅಶುದ್ಧ ಪರಿಸ್ಥಿತಿಯಲ್ಲಿ ಇದೆ. ಸ್ವಚ್ಛತೆ ಇಲ್ಲದೆ ತುಂಬಿ ಹರಿಯುವ ನೀರು ಪುನಃ ಅದರೊಳಗೆ ಸೇರುತ್ತಿದೆ. ನೀರನ್ನು ಪೂರೈಸುವ ಸಿಬ್ಬಂದಿಗೂ, ಪಂಚಾಯತಿ ಅಧಿಕಾರಿಗಳಿಗೂ ಸ್ವಚ್ಛತೆ ಬಗ್ಗೆ ಯಾವುದೇ ಜವಾಬ್ದಾರಿಯಿಲ್ಲದಂತಿದೆ. ಇಂತಹ ಅಶುದ್ಧ ವಾತಾವರಣದಲ್ಲಿ ಜನರಿಗೆ ಪೂರೈಸಲಾಗುತ್ತಿರುವ ನೀರಿನಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾದರೆ, ಅದರ ಹೊಣೆ ಯಾರು ಹೊರುತ್ತಾರೆ ಎಂಬ ಪ್ರಶ್ನೆ ಇಂದು ಗ್ರಾಮಸ್ಥರ ಮುಂದಿದೆ.**



# ತುಂಗಾಭದ್ರಾ ನದಿತಟದಲ್ಲಿ ಹಬ್ಬದ ಸಂಭ್ರಮ

## ಸುರಿವ ಮಳೆ ಮಧ್ಯೆಯೇ ಮುಕ್ಕುಂದಾದಲ್ಲಿ ಅದ್ದೂರಿಯಾಗಿ ನಡೆದ ಅಂಬಾ ಆರತಿ ಕಾರ್ಯಕ್ರಮ

• ಉದಯವಾಹಿನಿ ಸಿಂಧನೂರು

ತಾಲ್ಲೂಕಿನ ಮುಕ್ಕುಂದಾ ಗ್ರಾಮದಲ್ಲಿ ಅಂಬಾ ಮಾತಾಕಿ ಜೈ 'ತಾಯಿ ತುಂಗಭದ್ರಗೆ ಜಯವಾಗಲಿ ಹರಹರ ಮಹಾದೇವ ತುಂಗಾರತಿಗೆ ಜಯವಾಗಲಿ ಅಂಬಾ ಮಾತೆಗೆ ಜಯವಾಗಲಿ ಎನ್ನುವ ಭಕ್ತಿ ಭಾವದ ಘೋಷಣೆಗಳ ಮಧ್ಯೆ ತುಂಗಭದ್ರಗೆ ಅಂಬಾ ಆರತಿ ಕಾರ್ಯಕ್ರಮವು ಇಂದು ತುಂಗಭದ್ರಾ ತಟದಲ್ಲಿರುವ ಮುಕ್ಕುಂದಾ ಗ್ರಾಮದಲ್ಲಿ ಅದ್ದೂರಿಯಾಗಿ ನಡೆಯಿತು.

ಗೋಧೂಳಿ ಹೊತ್ತಿಗೆ, ಜಿಟಿಜಿಟಿ ಮಳೆಹನಿಗಳ ಸಿಂಚನದಲ್ಲಿ ವಾರಣಾಸಿಯ ಪ್ರಖ್ಯಾತ ಅರ್ಚಕರ ತಂಡವು ಮುಕ್ಕುಂದಾ ನದಿ ತೀರದಲ್ಲಿ ಅಂಬಾ ಆರತಿಯ ಪೂಜಾ ಕೈಂಕರ್ಯಗಳನ್ನು ಆರಂಭಿಸುತ್ತಿದ್ದಂತೆ ನೆರೆದಿದ್ದ ಜನಸ್ತೋಮದಿಂದ ಜಯಕಾರದ ಘೋಷಣೆಗಳು ಮೊಳಗಿದವು.

ಮುಕ್ಕುಂದಾ ಸೇರಿದಂತೆ ಸುತ್ತಲಿನ ಹಳ್ಳಿಗಳ ಗ್ರಾಮಸ್ಥರು ತುಂಗಭದ್ರೆಯ ಅಂಗಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆರೆದು ಅಂಬಾ ಆರತಿಯ ಸಂಭ್ರಮವನ್ನು ಕಣ್ತುಂಬಿಕೊಂಡರು.

ನೆರೆದಿದ್ದ ಜನರು ತುಂಗಭದ್ರೆಗೆ ಹಾಗೂ ತಾಯಿ ಅಂಬಾದೇವಿಗೆ ಭಕ್ತಿ-ಭಾವದಿಂದ ನಮನ ಸಲ್ಲಿಸಿದರು.

ಶಾಸಕರ ನೇತೃತ್ವ ಸಿಂಧನೂರ ತಾಲ್ಲೂಕಾಡಳಿತ ಮತ್ತು ಸಿಂಧನೂರ ತಾಲ್ಲೂಕು ದಸರಾ ಉತ್ಸವ ಸಮಿತಿ ಜಂಟಿಯಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದ ನೇತೃತ್ವವನ್ನು ಸಿಂಧನೂರ ಕ್ಷೇತ್ರದ ಶಾಸಕರು ಹಾಗೂ ದಸರಾ ಉತ್ಸವ ಸಮಿತಿಯ ಅಧ್ಯಕ್ಷರಾದ ಹಂಪನಗೌಡ ಬಾದರ್ಲಿ ಅವರು ವಹಿಸಿದ್ದರು.


ಉದಯವಾಹಿನಿ ಚಿತ್ರ

**ಇತಿಹಾಸ ಸಂಭ್ರಮ ವಿಜಯನಗರದ ಅರಸರು ಮುಕ್ಕುಂದಾ ಗ್ರಾಮದಿಂದಲೇ ದಸರಾ ಆಚರಣೆ ಆರಂಭಿಸಿದರು ಎನ್ನುವ ಇತಿಹಾಸವಿದೆ. ಅದರಂತೆ ಸಿಂಧನೂರ ತಾಲ್ಲೂಕಾಡಳಿತವು ಈ ಬಾರಿ ದಸರಾ ಉತ್ಸವ ಹಮ್ಮಿಕೊಂಡು ಅಂಬಾ ಆರತಿ ಕಾರ್ಯಕ್ರಮ ನಡೆಸಿ ಇತಿಹಾಸದ ಸಂಭ್ರಮ ಮರುಕಳಿಸುವ ಕಾರ್ಯವಾಗಿದೆ ಎಂದು ತಿಳಿಸಿದರು.**


**-ಮಾಜಿ ಸಂಸದರಾದ ಕೆ ವಿರುಪಾಕ್ಷಪ್ಪ**

ಶಾಸಕರು ಹಂಪನಗೌಡ ಬಾದರ್ಲಿ ಮಾತನಾಡಿ, ತುಂಗಾಮಾತೆ ಮತ್ತು ಅಂಬಾಮಾತೆಯ ಆಶೀರ್ವಾದವು ಇಡೀ ದೇಶಕ್ಕೆ, ರಾಜ್ಯಕ್ಕೆ ನಮ್ಮ ಕಲ್ಯಾಣ ಕರ್ನಾಟಕ ಭಾಗಕ್ಕೆ ಇರಲಿ ಎಂದು ಕೇಳಿ ಕೊಳ್ಳುತ್ತೇವೆ. ತುಂಗಭದ್ರೆಯು ಸದಾಕಾಲ ಹರಿಯುತ್ತ ಈ ಭಾಗವು ಹಸಿರಿನಿಂದ ಕಂಗೊಳಿಸಲಿ ಎಂದು ಪ್ರಾರ್ಥಿಸುತ್ತೇವೆ ಎಂದು ತಿಳಿಸಿದರು.

**ಸಿಂಧನೂರ ತಾಲ್ಲೂಕಿನಲ್ಲಿ ಹೊಸ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಆರಂಭಿಸುವ ಹಿನ್ನೆಲೆಯಲ್ಲಿ ನಾವು ನಮ್ಮ ಸಿಂಧನೂರ ದಸರಾ ಕಾರ್ಯಕ್ರಮ ಆಯೋಜನೆ ಮಾಡಿದ್ದೇವೆ. 9 ದಿನಗಳ ಕಾಲ ಸಿಂಧನೂರ ನಗರ ಮತ್ತು ಸುತ್ತಲಿನ ವಿವಿಧ ಹಳ್ಳಿಗಳಲ್ಲಿ ಗ್ರಾಮೀಣ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಸ್ಥಳೀಯ ಮತ್ತು ರಾಜ್ಯದ ಬೇರೆ ಬೇರೆ ಭಾಗಗಳ ಕಲಾವಿದರು ಕಲಾರಸದೌತಣ ನೀಡಲಿದ್ದಾರೆ. ಸಾರ್ವಜನಿಕರು ಆಗಮಿಸಿ ಕಾರ್ಯಕ್ರಮ ಯಶಗೊಳಿಸಬೇಕು ಎಂದು ಶಾಸಕರು ಸಿಂಧನೂರ ತಾಲ್ಲೂಕಿನ ಜನರಲ್ಲಿ ಮನವಿ ಮಾಡಿದರು.**

ಸಮಾರಂಭದಲ್ಲಿ ಮುಖಂಡರಾದ ಎಂ.ಪಿ.ನಾಡಗೌಡ್ರ, ಸಹಾಯಕ ಆಯುಕ್ತರಾದ ಬಸವಣೆಪ್ಪ ಕಲಶೆಟ್ಟಿ, ತಹಸೀಲ್ದಾರ ಅರುಣಕುಮಾರ ದೇಸಾಯಿ, ತಾಲ್ಲೂಕು ಪಂಚಾಯತ್ ಇಓ, ಸಿಂಧನೂರ ತಾಲ್ಲೂಕಿನ ಗಣ್ಯ ನಾಗರಿಕರು, ಸಿಂಧನೂರು ತಾಲ್ಲೂಕಿನ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಮುಕ್ಕುಂದಾ ಸೇರಿದಂತೆ ಸುತ್ತಲಿನ ಗ್ರಾಮಸ್ಥರು ಇದ್ದರು. ಅಂಬಾ ಆರತಿ ಕಾರ್ಯಕ್ರಮದ ಬಳಿಕ ನೆರೆದಿದ್ದ ಜನತೆಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

# ಗ್ರಾಮಗಳ ಅಭಿವೃದ್ಧಿಯೇ ನನ್ನ ಗುರಿ: ಶಾಸಕ ಭೀಮಸೇನ ಚಿಮ್ಮನಕಟ್ಟಿ


ಉದಯವಾಹಿನಿ ಚಿತ್ರ

• ಉದಯವಾಹಿನಿ ,ಗುಳೇದಗುಡ್ಡ

ಗ್ರಾಮದ ಜನರು ಒಟ್ಟಾಗಿ ಗ್ರಾಮದಲ್ಲಿ ಯಾವ ಕಾಮಗಾರಿಗಳು ತೀರಾ ಅಗತ್ಯವಾಗಿದೆ ಎಂಬುದನ್ನು ಚರ್ಚಿಸಿ ತಿಳಿಸಿದರೆ ಅದಕ್ಕೆ ಮೊದಲು ಆದ್ಯತೆ ನೀಡಲಾಗುವುದು. ಗ್ರಾಮಗಳ ಅಭಿವೃದ್ಧಿಯಲ್ಲಿ ನಾನು ಯಾವುದೇ ಜಾತಿ, ಧರ್ಮ, ರಾಜಕಾರಣ ಮಾಡುವುದಿಲ್ಲ. ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿ ನನ್ನ ಗುರಿಯಾಗಿದೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು. ಅವರು ಕಟಗೇರಿ ಗ್ರಾಮದಲ್ಲಿ ರೂ.11 ಲಕ್ಷ ವೆಚ್ಚದಲ್ಲಿ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು ದುರಸ್ತಿ, 15 ಲಕ್ಷ ವೆಚ್ಚದ ಸಿಸಿ ರಸ್ತೆ ನಿರ್ಮಾಣ, 12 ಲಕ್ಷ ವಚ್ಚದಲ್ಲಿ ಅಲ್ಪಸಂಖ್ಯಾತ ಕಾಲೊನಿಯಲ್ಲಿ ಸಿಸಿ ರಸ್ತೆ ನಿರ್ಮಾಣ, ರೂ.10 ಲಕ್ಷ ವೆಚ್ಚದಲ್ಲಿ ಎಸ್.ಸಿ.ಕಾಲೊನಿಯಲ್ಲಿ ಸಿಸಿ ರಸ್ತೆ ಕಾಮಗಾರಿ, ರೂ.10 ಲಕ್ಷ ವೆಚ್ಚದಲ್ಲಿ ಕಾಂಚನೇಶ್ವರಿ ದೇವಸ್ಥಾನ ಕಾಮಗಾರಿ, ರೂ.5 ಲಕ್ಷ ವೆಚ್ಚದಲ್ಲಿ ಈಶ್ವರ ಲಿಂಗೇಶ್ವರ ದೇವಸ್ಥಾನ ಕಾಮಗಾರಿ, ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲ್ಯಾಬರೋಟರಿ ಕಟ್ಟಡ ಉದ್ಘಾಟನೆ. 5 ಲಕ್ಷ ವೆಚ್ಚದಲ್ಲಿ ಗ್ರಾಮದ ಯಮನೂಪ್ಪ ದೇವಸ್ಥಾನ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ಕಾಮಗಾರಿ ಗುಣಮಟ್ಟದಿಂದ ಕೂಡಿರಲಿ. ಕಾಮಗಾರಿಗೆ ಗ್ರಾಮಸ್ಥರು ಸಹಕಾರ ನೀಡಬೇಕು.

# ನಮ್ಮನ್ನು ಸಮೀಕ್ಷೆಗೆ ಒಳಪಡಿಸಿ: ಹಕ್ಕಿಪಿಕ್ಕಿ

• ಉದಯವಾಹಿನಿ ಬೆಳಗಾವಿ:


ಉದಯವಾಹಿನಿ ಚಿತ್ರ

ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ನಮ್ಮನ್ನು ಒಳಪಡಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಹಕ್ಕಿಪಿಕ್ಕಿ ಸಮುದಾಯದವರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಇಲ್ಲಿನ ರಾಣಿ ಚನ್ನಮ್ಮನ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಮೆರವಣಿಗೆ ನಡೆಸಿ, ತಮ್ಮ ಬೇಡಿಕೆ ಈಡೇರಿಸುವಂತೆ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಶಿವಮೊಗ್ಗ, ಮೈಸೂರು, ದಾವಣಗೆರೆ, ಬೆಂಗಳೂರಿನಲ್ಲಿದ್ದ ಹಕ್ಕಿಪಿಕ್ಕಿ ಸಮುದಾಯದವರಿಗೆ ಪರಿಶಿಷ್ಟ ಪಂಗಡ ಜಾತಿ ಪ್ರಮಾಣಪತ್ರ ನೀಡಿ, ಮೂಲಸೌಕರ್ಯ ಕಲ್ಪಿಸಲಾಗಿದೆ. ಆದರೆ, ಖಾನಾಪುರ ತಾಲ್ಲೂಕಿನಲ್ಲಿ ಇರುವ 50ರಿಂದ 60 ಕುಟುಂಬಗಳಿಗೆ ಜಾತಿ ಪ್ರಮಾಣಪತ್ರ ಕೊಟ್ಟಿಲ್ಲ' ಎಂದು ಆರೋಪಿಸಿದರು.

'ವಿದ್ಯುತ್ ಮೀಟರ್‌ಗಳ ಆಧಾರದಲ್ಲಿ ಹೆಸ್ಕಾಂ ಸಿಬ್ಬಂದಿ ಸಮೀಕ್ಷೆಗೆ ಪಟ್ಟಿ ಸಿದ್ಧಪಡಿಸಿದ್ದಾರೆ. ಆದರೆ, ಕಾಡಂಚಿನ ಗ್ರಾಮಗಳಲ್ಲಿ ನಾವು ಗುಡಿಸಲಿನಲ್ಲಿ ವಾಸಿಸುತ್ತಿದ್ದು, ಸಮೀಕ್ಷೆಯಿಂದ ಹೊರಗುಳಿದಿದ್ದೇವೆ. ನಮ್ಮನ್ನು ಸಮೀಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು. ರಾಜಶೇಖರ ಹಿಂಡಲಗಿ, ಕಾರ್ತಿಕ ತಳವಾರ, ದಯಾನಂದ ಹಕ್ಕಿಪಿಕ್ಕಿ, ರವಿ ಮಾದಾರ ಇತರರಿದ್ದರು. **ಅವರ ಸಮೀಕ್ಷೆಯನ್ನೂ ಮಾಡುತ್ತೇವೆ:** ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ 'ಹಕ್ಕಿಪಿಕ್ಕಿ ಸಮುದಾಯದವರ ಸಮಸ್ಯೆ ಗಮನಕ್ಕೆ ಬಂದಿದೆ. ಈ ಸಂಬಂಧ ಹಿಂದುಳಿದ ವರ್ಗಗಳ ಆಯೋಗದೊಂದಿಗೆ ಮಾತನಾಡಿದ್ದೇವೆ. ಹಕ್ಕಿಪಿಕ್ಕಿ ಸಮುದಾಯದವರೆನ್ನೆಲ್ಲ ಒಂದೇ ಕಡೆ ಕರೆಯಿಸಿ, ಆಫ್‌ಲೈನ್ ಅಥವಾ ಕ್ಯಾಂಪ್ ಮೋಡ್ ಮೂಲಕ ಸಮೀಕ್ಷೆ ಮಾಡುತ್ತೇವೆ. ಇದಕ್ಕಾಗಿ ಅವರು ದಾಖಲೆಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಬೇಕು' ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಸುದ್ದಿಗಾರರಿಗೆ ತಿಳಿಸಿದರು.

# ತುರುಸಿನ ಮತದಾನ ಚುನಾವಣಾಧಿಕಾರಿ ಫಲಿತಾಂಶ ಘೋಷಣೆ

• ಉದಯವಾಹಿನಿ ಕುಷ್ಟಗಿ

ಪಟ್ಟಣದಲ್ಲಿ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆಗೆ ನಡೆದ ಚುನಾವಣೆಗೆ ಸಂಬಂಧಿಸಿದಂತೆ ತುರುಸಿನ ಮತದಾನ ನಡೆದಿದ್ದು ಚುನಾವಣಾಧಿಕಾರಿ ಫಲಿತಾಂಶವನ್ನು ಅಧಿಕೃತವಾಗಿ ಘೋಷಿಸಿದ್ದಾರೆ.

**ಸಾಮಾನ್ಯ ಕ್ಷೇತ್ರ:** ಶರಣಪ್ಪ ತೆಮ್ಮಿನಾಳ, ಮುಕ್ಕಣ್ಣ ಹುಬ್ಬಳ್ಳಿ, ಮಲ್ಲಪ್ಪ ಕುದರಿ, ಮಲ್ಲಿಕಾರ್ಜುನ ಲಕ್ಕಲಕಟ್ಟಿ, ಬೀರಪ್ಪ ಕುರಿ, ಹೈದರಲಿ ಜಾಲಿಹಾಳ, ರುದ್ರಪ್ಪ ಬೂದಿಹಾಳ, ಅಮರೇಗೌಡ ಸಣ್ಣಗಂಗಪ್ಪನವರ, ಸಿದ್ರಾಮಪ್ಪ ಅಮರಾವತಿ. ದಂಡಪ್ಪ ಹೊಸಮನಿ ಪರಿಶಿಷ್ಟ ಜಾತಿ. ಬಸವರಾಜ ಗುಡಗೇರಿ (ಹಿಂದುಳಿದ ವರ್ಗ-ಅ). ಮಹಿಳಾ ಕ್ಷೇತ್ರದಿಂದ ರುದ್ರಮ್ಮ ಗುತ್ತೂರು ಮತ್ತು ಉಮಾ ನಾಗೂರು ಚುನಾಯಿತರಾಗಿದ್ದಾರೆ.

**ತುರುಸಿನ ಸ್ಪರ್ಧೆ:** 13 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 20 ಜನ ಕಣದಲ್ಲಿದ್ದರು. ಒಟ್ಟು 468 ಅರ್ಹ ಮತದಾರರ ಪೈಕಿ 458 ಜನ ಮತಹಕ್ಕು ಚಲಾಯಿಸಿದ್ದು ವಿಶೇಷವಾಗಿತ್ತು. ಮತಗಟ್ಟೆ ಬಳಿ ಶಿಕ್ಷಕರು ಬರುತ್ತಿದ್ದಂತೆ ತಮ್ಮನ್ನು ಬೆಂಬಲಿಸುವಂತೆ ಗೋಗರೆಯುತ್ತಿದ್ದುದು ಕಂಡುಬಂದಿತು. ಇದೇ ಮೊದಲ ಬಾರಿಗೆ ಶಿಕ್ಷಕರ ಪತ್ತಿನ ಸಹಕಾರ ಸಂಘದ ಚುನಾವಣೆ ತುರುಸಿನಿಂದ ಕೂಡಿತ್ತು. ಶಿಕ್ಷಕರಲ್ಲಿ ಈ ಚುನಾವಣೆ ಎರಡು ಮೂರು ಬಣಗಳನ್ನು ಸೃಷ್ಟಿಸಿದ್ದು ಮತದಾನದ ಹಕ್ಕು ಹೊಂದಿರುವ ಷೇರುದಾರ ಶಿಕ್ಷಕರನ್ನು ಒಲಿಸಿಕೊಳ್ಳುವಲ್ಲಿ ಅಭ್ಯರ್ಥಿಗಳು ತರಹೇವಾರಿ ರೀತಿಯಲ್ಲಿ ಕಸರತ್ತು ನಡೆಸಿದರು.


ಉದಯವಾಹಿನಿ ಚಿತ್ರ

ದೂರದ ಊರುಗಳಿಂದ ಮತದಾರರನ್ನು ಕರೆತರುವುದಕ್ಕೆ ಎರಡೂ ಗುಂಪಿನವರು ವಾಹನ, ಊಟ ಇತರೆ ಉಪಚಾರದ ವ್ಯವಸ್ಥೆಯನ್ನೂ ಕಲ್ಪಿಸಿದ್ದು ಕಂಡುಬಂದಿತು.

ಚುನಾವಣಾಧಿಕಾರಿಯಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕ ಪ್ರಕಾಶ ಸಜ್ಜನ, ಸಹಾಯಕ ಚುನಾವಣಾಧಿಕಾರಿಯಾಗಿ ಪ್ರದೀಪ ಗಂಟಿ ಕರ್ತವ್ಯ ನಿರ್ವಹಿಸಿದರು.

ಮತದಾನ ಪ್ರಕ್ರಿಯೆ ಶಾಂತಿಯುತವಾಗಿ ನಡೆಯಿತು. ಸಬ್ ಇನ್‌ಸ್ಪೆಕ್ಟರ್ ಹನುಮಂತಪ್ಪ ತಳವಾರ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು.

**ಅಲ್ಲದೆ ಪ್ರಚಾರಕ್ಕೆ ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಂಡಿದ್ದು ಎರಡು ಗುಂಪಿನವರು ಸಭ್ಯವಲ್ಲದ ಭಾಷೆಯಲ್ಲಿ ಎದುರಾಳಿಗಳ ವಿರುದ್ಧ ಬರೆದುಕೊಳ್ಳುವ ಮೂಲಕ ಶಿಕ್ಷಕ ಸ್ಥಾನದ ಗೌರವಕ್ಕೆ ತಾವೇ ಚ್ಯುತಿ ತರುವಂತೆ ನಡೆದುಕೊಂಡರು ಎಂದು ಬೇಸರ ವ್ಯಕ್ತಪಡಿಸಿದ ಸಾರ್ವಜನಿಕರು, ಚುನಾವಣೆಯಲ್ಲಿ ನಿರತರಾದವರು ಪಕ್ಕಾ ರಾಜಕಾರಣಿಗಳಂತೆ ವರ್ತಿಸುತ್ತಿದ್ದುದು ಅಸಹ್ಯ ಹುಟ್ಟಿಸುವಂತಿತ್ತು ಎಂದರು.**

# ಕಾರ್ಖಾನೆಗಳ ವಿಸ್ತರಣೆಗೆ ವಿರೋಧ; ಪ್ರತಿಭಟನೆ

• ಉದಯವಾಹಿನಿ ಕೊಪ್ಪಳ

ಮುಂಬರುವ ದಿನಗಳಲ್ಲಿ ಎಂಎಸ್‌ಪಿಎಲ್ ಸೇರಿದಂತೆ ವಿವಿಧ ಕಾರ್ಖಾನೆಗಳು ವಿಸ್ತರಣೆಯಾದರೆ ದೂಳಿನ ಪ್ರಮಾಣ ವ್ಯಾಪಕವಾಗುತ್ತದೆ ಎಂದು ಜಿಲ್ಲಾ ಬಚಾವೊ ಆಂದೋಲನ ಸಮಿತಿಯ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು ಹೇಳಿದರು.

ಆಂದೋಲನ ಸಮಿತಿ ಪರಿಸರ ಹಿತರಕ್ಷಣಾ ವೇದಿಕೆ ಜಂಟಿ ಕ್ರಿಯಾ ವೇದಿಕೆಯಿಂದ ಸೆ. 24ರ ವರೆಗೆ ನಡೆಯಲಿರುವ ಕಾರ್ಖಾನೆಗಳ ವಿಸ್ತರಣೆ ಹಾಗೂ ಹೊಸ ಕಾರ್ಖಾನೆಗಳ ಸ್ಥಾಪನೆ ವಿರೋಧಿಸಿ ಹಮ್ಮಿಕೊಂಡ ಪರಿಸರ ಜಾಗೃತಿ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಎಂಎಸ್‌ಪಿಎಲ್ ವಿಸ್ತರಣೆ ಜೊತೆಗೆ ಸುಮಿ ಎನ್ನುವ ಜಪಾನಿನ ಇನ್ನೊಂದು ಕಂಪನಿ ಕೂಡ ಬರಲಿದೆ.



ಉದಯವಾಹಿನಿ ಚಿತ್ರ

ಈ ಕಾರ್ಖಾನೆಗಳ ದೂಳಿನಿಂದ ಪರಿಸರ ಇನ್ನಷ್ಟು ಹಾಳಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಮುಖಂಡರಾದ ಕರೀಮಪಾಷಾ ಎಂ.ಗಚ್ಚಿನಮನಿ, ಬಸವರಾಜ ಶೀಲವಂತರ, ಕೆ.ಬಿ.ಗೋನಾಳ ಎಸ್.ಎ.ಗಫಾರ್, ಡಿ.ಎಚ್. ಪೂಜಾರ, ಚನ್ನಬಸಪ್ಪ ಅಪ್ಪಣವರ, ಮುದುಕಪ್ಪ ಹೊಸಮನಿ, ಗುಡದಪ್ಪ ಭಂಗಿ, ಯಮನೂರಪ್ಪ ಹಾಲಳ್ಳಿ ಬಸಾಪುರ, ಹಂಚಳಪ್ಪ ಇಟಗಿ ಪಾಲ್ಗೊಂಡಿದ್ದವು.

**ಗವಿಶ್ರೀ ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಹಿತಿ ಮಹಾಂತೇಶ ಮಲ್ಲನಗೌಡರ ಮಾತನಾಡಿ 'ಬೃಹತ್ ಕಾರ್ಖಾನೆಗಳಿಂದ ನಗರ ವ್ಯಾಪ್ತಿಯ ಮನೆಗಳಲ್ಲಿ ಹೊಗೆ ಹಾಗೂ ದೂಳು ಆವರಿಸಿಕೊಂಡಿದೆ. ಮತ್ತಷ್ಟು ಕಾರ್ಖಾನೆಗಳು ಬಂದರೆ ಪರಿಸ್ಥಿತಿ ಮತ್ತಷ್ಟು ದುರ್ಬರವಾಗುತ್ತದೆ ಎಂದರು.**

# ಜಾತಿಗಣತಿ: ಬಾರದ ಒಟಿಪಿ, ಕಿಟ್ ವಿತರಣೆ ವಿಳಂಬ

• ಉದಯವಾಹಿನಿ ರಾಯಚೂರು

ಎಲ್ಲಾ ಜಾತಿಗಳ ಸಾಮಾಜಿಕ ಮತ್ತು ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಕುರಿತ ಸಮೀಕ್ಷೆ ನಡೆಸಿದ ಗಣತಿದಾರರು ಮೊದಲು ದಿನವೇ ಕೆಲವು ಕಡೆ ತಾಂತ್ರಿಕ ಸಮಸ್ಯೆ ಎದುರಿಸಿದರು. ಸಿರವಾರ ತಾಲ್ಲೂಕಿನಲ್ಲಿ ಶೈಕ್ಷಣಿಕ ಸಮೀಕ್ಷೆಯ ಕಿಟ್ ವಿತರಣೆ ವಿಳಂಬವಾದ ಕಾರಣ ಸಮೀಕ್ಷೆ ಒಂದು ದಿನ ಮುಂದೂಡಲಾಗಿದೆ.ಮಾನ್ವಿ, ದೇವದುರ್ಗ, ಲಿಂಗಸುಗೂರು, ಮಸ್ಕಿಯಲ್ಲಿ ಗಣತಿದಾರರು ಆ್ಯಪ್ ಡೌನ್ ಲೋಡ್ ಮಾಡಿಕೊಂಡರೂ ದಾಖಲೆ ಮಾಡಿಕೊಳ್ಳುವಾಗ ಫೋನ್ ಸಂಖ್ಯೆಗೆ ಒಟಿಪಿ ಸಂಖ್ಯೆ ಬರಲಿಲ್ಲ. ಗಣತಿದಾರರಿಗೆ ತಾಂತ್ರಿಕ ಅಡಚಣೆ ಕಂಡು ಬಂದಿತು.

ಸಿಂಧನೂರು ತಾಲ್ಲೂಕಿನ ಜಾಲಿಹಾಳ್ ಬಸಾಪುರ ರೌಡಕುಂದ ಹೊಸಳ್ಳಿ ಪಂಚಾಯಿತಿಯಲ್ಲಿ ಜೆಸ್ಕಾಂ ಮನೆಗಳ ಮೀಟರ್‌ಗಳಿಗೆ ಸ್ಟಿಕರ್ ಹಚ್ಚಿಲ್ಲ. ಹೀಗಾಗಿ ಕುಟುಂಬದವರ ಪಟ್ಟಿಯೇ ಲಭ್ಯವಾಗಲಿಲ್ಲ. ಮಧ್ಯಾಹ್ನ 1 ಗಂಟೆಗೆ ಆ್ಯಪ್ ಡೌನ್‌ಲೋಡ್ ಮಾಡಿದರೂ ಅದು ಕಾರ್ಯನಿರ್ವಹಿಸಲಿಲ್ಲ. ಸಮೀಕ್ಷೆಯ ವೇಳೆ ಮನೆಯ ಕುಟುಂಬದ ಮುಖ್ಯಸ್ಥನ ಮೊಬೈಲ್ ಸಂಖ್ಯೆಗೆ ಒಟಿಪಿ ಕಡ್ಡಾಯವಾಗಿದೆ. ರೈತರು ಬೆಳಿಗ್ಗೆ ಎದ್ದು ಹೊಲಕ್ಕೆ ಹೋಗಿ ಸಂಜೆಗೆ ಮನೆ ಬರುವ ಕಾರಣ ಗಣತಿದಾರರು ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಆಧಾರ್ ಕಾರ್ಡ್‌ಗಳಲ್ಲಿ ನಮೂದಿಸಿದ ನಂಬರ್ ಕೆಲವರ ಬಳಿ ಇಲ್ಲ. ಹೀಗಾಗಿ ಒಟಿಪಿ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. 'ಕುಟುಂಬದ ಮುಖ್ಯಸ್ಥರನ ಬದಲಿಗೆ ಕೂಡು ಕುಟುಂಬದ ಯಾರಾದರೂ ಒಬ್ಬ ಮುಖ್ಯಸ್ಥರ ಮೊಬೈಲ್ ಸಂಖ್ಯೆಗೆ ಒಟಿಪಿಗೆ ಅವಕಾಶ ನೀಡವಂತೆ ರಾಜ್ಯ ಹಿಂದುಳಿದ ಆಯೋಗಕ್ಕೆ ಮನವಿ ಮಾಡಲಾಗುವುದು' ಎಂದು ರಾಯಚೂರು ಉಪ ವಿಭಾಗಾಧಿಕಾರಿ ಹೇಳಿದ್ದಾರೆ.


ಉದಯವಾಹಿನಿ ಚಿತ್ರ

# ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯ ಆರಂಭ

## ರಾಜ್ಯ ಸರ್ಕಾರವು ಪಕ್ಷದ ಪ್ರಣಾಳಿಕೆಯಲ್ಲಿ ಭರವಸೆ ನೀಡಿದಂತೆ, ರಾಜ್ಯಾದ್ಯಂತ ಸಮೀಕ್ಷಾ ಕಾರ್ಯ ಪ್ರಾರಂಭ

• ಉದಯವಾಹಿನಿ ಚಿತ್ರದುರ್ಗ

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2025 ಜಿಲ್ಲೆಯಾದ್ಯಂತ ಆರಂಭವಾಯಿತು.

ನಗರದ ಒನಕೆ ಓಬವ್ವ ಜಿಲ್ಲಾ ಕ್ರೀಡಾಂಗಣದ ಮುಂಭಾಗದ ಬುದ್ಧನಗರದಲ್ಲಿ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ್ ಅವರು ಅಧಿಕಾರಿಗಳು ಹಾಗೂ ಗಣತಿದಾರರೊಂದಿಗೆ ಮನೆ ಭೇಟಿ ನೀಡಿ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಸಚಿವ ಸುಧಾಕರ್, ರಾಜ್ಯದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಲಾಗುವುದು ಎಂದು ರಾಜ್ಯ ಸರ್ಕಾರವು ಪಕ್ಷದ ಪ್ರಣಾಳಿಕೆಯಲ್ಲಿ ಭರವಸೆ ನೀಡಿದಂತೆ, ರಾಜ್ಯಾದ್ಯಂತ ಸಮೀಕ್ಷಾ ಕಾರ್ಯ ಪ್ರಾರಂಭವಾಗಿದೆ ಎಂದು ತಿಳಿಸಿದ ಅವರು, ರಾಜ್ಯದಲ್ಲಿ ಜಾತಿ ಗಣತಿ ಮಾಡುತ್ತಿಲ್ಲ. ಸಾಮಾಜಿಕ ಮತ್ತು ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳ ಕುರಿತು ಮಾಹಿತಿಯನ್ನು ಅಂಕಿ-ಅಂಶಗಳ ಮೂಲಕ ಸಂಗ್ರಹಿಸುವುದು, ಆ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಹ ಸಾಮಾಜಿಕ ನ್ಯಾಯ ಸಿಗಬೇಕು ಎಂಬುದೇ ಸಮೀಕ್ಷೆಯ ಉದ್ದೇಶವಾಗಿದೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2025ಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯಲ್ಲಿ 4,62,280 ಮನೆಗಳನ್ನು ಗುರುತಿಸಲಾಗಿದ್ದು, ಒಟ್ಟು 3768 ಗಣತಿದಾರರು, 376 ಮೇಲ್ವಿಚಾರಕರು, 92 ಮಾಸ್ಟರ್ ಟ್ರೈನರ್ಸ್‌ಗಳನ್ನು ನೇಮಿಸಲಾಗಿದೆ ಎಂದು ತಿಳಿಸಿದರು.

ಸಮೀಕ್ಷೆಯಲ್ಲಿ ಒಟ್ಟು 60 ಪ್ರಶ್ನಾವಳಿಗಳು ಕೇಳಿದ್ದು, ಮುಖ್ಯವಾಗಿ ಆಧಾರ್ ಕಾರ್ಡ್ ಅಥವಾ ರೇಷನ್ ಕಾರ್ಡ್ ಆಧಾರದಲ್ಲಿ ಸಮೀಕ್ಷೆ ನಡೆಸಲಾಗುತ್ತಿದೆ. ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಸಮೀಕ್ಷೆಯ ಬಗ್ಗೆ ಅರಿವು ಮೂಡಿಸಲು ಈಗಾಗಲೇ ಆಶಾ ಕಾರ್ಯಕರ್ತೆಯರು ಹಾಗೂ ಎನ್‌ಆರ್‌ಎಲ್‌ಎಂ ಮೂಲಕ ಮನೆಗಳಿಗೆ ಭೇಟಿ ನೀಡಿ ಕುಟುಂಬ ಅನುಸೂಚಿ ನಮೂನೆಗಳನ್ನು ನೀಡಿ ಜಾಗೃತಿ ಮೂಡಿಸಲಾಗಿದೆ. ಒಟ್ಟು 4,31,000 ಕುಟುಂಬ ಅನುಸೂಚಿಗಳನ್ನು ಚಿತ್ರದುರ್ಗ ಜಿಲ್ಲೆಗೆ ನೀಡಲಾಗಿದ್ದು, ಮನೆಗಳಿಗೆ ನಮೂನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ ಎಂದರು.

**ಸಹಾಯವಾಣಿ:** ಸಮೀಕ್ಷಾ ಕಾರ್ಯಕ್ಕೆ ಜಿಲ್ಲೆಯ 06 ತಾಲ್ಲೂಕುಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ತೆರೆಯಲಾಗಿದ್ದು, ಸಾರ್ವಜನಿಕರು, ಗಣತಿದಾರರು ಯಾವುದೇ ಪ್ರಶ್ನಾವಳಿಗಳ ಬಗ್ಗೆ ಮಾಹಿತಿಯನ್ನು ಪಡೆಯಬಹುದಾಗಿದೆ. ಚಿತ್ರದುರ್ಗ ಜಿಲ್ಲಾ ಮಟ್ಟದ ಸಹಾಯವಾಣಿ ಸಂಖ್ಯೆ-08194-235034, ಚಳ್ಳಕೆರೆ-08195-200130, 9972997738, ಹಿರಿಯೂರು-6362474421, ಹೊಳಲ್ಕೆರೆ-08191-200021, ಹೊಸದುರ್ಗ-9972385061, ಮೊಳಕಾಲ್ಮುರು-9743085676 ಹಾಗೂ ರಾಜ್ಯಮಟ್ಟದ ಸಹಾಯವಾಣಿ ಸಂಖ್ಯೆ 8050770004 ಗೆ ಸಂಪರ್ಕಿಸಬಹುದು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಅನಿತಾ ರಮೇಶ್, ಜಿಲ್ಲಾಧಿಕಾರಿ ಟಿ.ವೆಂಕಟೇಶ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎಸ್.ಆಕಾಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪುಷ್ಪಲತಾ, ತಹಶೀಲ್ದಾರ್ ಗೋವಿಂದರಾಜು, ನಗರಸಭೆ ಸದಸ್ಯೆ ಶ್ರೀದೇವಿ ಚಕ್ರವರ್ತಿ, ಪೌರಾಯುಕ್ತೆ ಲಕ್ಷ್ಮಿ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು, ಗಣತಿದಾರರು ಇದ್ದರು.

**ಗಣತಿದಾರರಿಗೆ ಒಟ್ಟು 3491 ಕೈಪಿಡಿಗಳನ್ನು ವಿತರಣೆ ಮಾಡಲಾಗಿರುತ್ತದೆ. ಗಣತಿದಾರರಿಗೆ ಅವಶ್ಯವಾಗಿ ಬೇಕಾಗಿರುವ ಗುರುತಿನ ಚೀಟಿಗಳನ್ನು ಮತ್ತು ಟೋಪಿಗಳನ್ನು ವಿತರಣೆ ಮಾಡಲಾಗಿರುತ್ತದೆ. ಕುಟುಂಬದ ಸದಸ್ಯರು, ಮುಖ್ಯಸ್ಥರಿಂದ ಸಮೀಕ್ಷೆಗೆ ಮಾಹಿತಿ ಪಡೆದ ನಂತರ ಪಡೆಯಬೇಕಾದ ಸ್ವಯಂ ದೃಢೀಕರಣ ಪತ್ರಗಳನ್ನು ಗಣತಿದಾರರಿಗೆ ಜಿಲ್ಲಾಡಳಿತದಿಂದ ವಿತರಣೆ ಮಾಡಲಾಗಿರುತ್ತದೆ. ಸಮೀಕ್ಷಾ ಕಾರ್ಯವು ಸೆ.22 ರಿಂದ ಅ.07 ರವರೆಗೆ ಜಿಲ್ಲಾಧಿಕಾರಿಗಳ ಮುಂದಾಳತ್ವದಲ್ಲಿ ನಡೆಸಲಾಗುವುದು ಎಂದು ಹೇಳಿದರು.**

# ಮಿನಿ ನ್ಯೂಸ್

## ಉಚ್ಚಿಲ ದಸರಾ: ವಿದ್ಯುತ್ ದೀಪಾಲಂಕಾರಕ್ಕೆ ಚಾಲನೆ

• ಉದಯವಾಹಿನಿ ಪಡುಬಿದ್ರಿ

ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದ ಆಡಳಿತಕ್ಕೊಳಪಟ್ಟ ಶ್ರೀಕ್ಷೇತ್ರ ಉಚ್ಚಿಲ ಶ್ರೀಮಹಾಲಕ್ಷ್ಮೀ ದೇವಸ್ಥಾನದಲ್ಲಿ ಸೆ. 22 ರಿಂದ ಅ. 2ರವರೆಗೆ ನಡೆಯಲಿರುವ ಉಡುಪಿ - ಉಚ್ಚಿಲ ದಸರಾ-25ರ ಪ್ರಯುಕ್ತ ನಗರಾಲಂಕಾರಕ್ಕಾಗಿ ವಿಶೇಷವಾಗಿ ಜೋಡಿಸಿರುವ ವೈವಿಧ್ಯಮಯ ವಿದ್ಯುತ್ ದೀಪಾಲಂಕಾರಕ್ಕೆ ಚಾಲನೆ ನೀಡಲಾಯಿತು.

ಉಡುಪಿ-ಉಚ್ಚಿಲ ದಸರಾ ರೂವಾರಿ ಡಾ. ಜಿ.ಶಂಕರ್ ಕಾರ್ಯಕ್ರಮ ಉದ್ಘಾಟಿಸಿದರು.

ಶ್ರೀಕ್ಷೇತ್ರ ಉಚ್ಚಿಲ ಮಹಾಲಕ್ಷ್ಮೀ ದೇವಸ್ಥಾನ, ದೇವಸ್ಥಾನದ ರಥಬೀದಿ, ಶಾಲಿನಿ ಜಿ. ಶಂಕರ್ ತೆರೆದ ವೇದಿಕೆಯಲ್ಲಿ ಮತ್ತು ಶಾರದಾ ಮೂರ್ತಿಯನ್ನು ನವದುರ್ಗೆಯರು ಪ್ರತಿಷ್ಠಾಪಿಸುವ ದಸರಾ ಮಂಟಪ ಹಾಗೂ ರಾಷ್ಟ್ರೀಯ ಹೆದ್ದಾರಿ 66ರ ಉಚ್ಚಿಲದಿಂದ ಪಡುಬಿದ್ರಿಯವರೆಗ ಪಡುಬಿದ್ರಿಯಿಂದ ಕಾಪುವಿನವರೆಗೆ, ಕೊಪ್ಪಲಂಗಡಿಯಿಂದ ಕಾಪು ಬೀಚ್ವರೆಗೆ ರಸ್ತೆಯುದ್ದಕ್ಕೂ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಎಲ್ಲಾ ದೀಪಗಳನ್ನೂ ಏಕಕಾಲದಲ್ಲಿ ಉದ್ಘಾಟಿಸಲಾಯಿತು.

## ಮಹಿಳೆಯರಿಂದ ರೊಟ್ಟಿ ಬುಟ್ಟಿ ಮೆರವಣಿಗೆ

• ಉದಯವಾಹಿನಿ ಬೀಳಗಿ

ತಾಲ್ಲೂಕಿನ ಕಪ್ಪರಪಡಿಯಮ್ಮ ದೇವಿ ಸಭಾಮಂದಿರದ ಲೋಕಾರ್ಪಣೆ ಸಮಾರಂಭದ ಅಂಗವಾಗಿ ದಾಸೋಹಕ್ಕೆ ಮಹಿಳೆಯರು ಮನೆಯಲ್ಲಿ ಮಾಡಿದ ರೊಟ್ಟಿಗಳನ್ನು ಸಂಜೆ ಮೆರವಣಿಗೆ ಮೂಲಕ ದೇವಸ್ಥಾನದ ದಾಸೋಹ ಭವನಕ್ಕೆ ತಲುಪಿಸಿದರು. ನಾಗರಾಳ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ರೊಟ್ಟಿಯ ಬುಟ್ಟಿಗಳಿಗೆ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು. ನಂತರ ಮಹಿಳೆಯರು ರೊಟ್ಟಿ ಬುಟ್ಟಿಯನ್ನು ತಲೆಮೇಲೆ ಹೊತ್ತುಕೊಂಡು ಗ್ರಾಮದ ಜತ್ತಿಯವರ ಓಣಿಯಿಂದ ಬಸವೇಶ್ವರ ವೃತ್ತದ ಮಾರ್ಗವಾಗಿ ಸಂಗೊಳ್ಳಿ ರಾಯಣ್ಣ ವೃತ್ತ, ವಾಲ್ಮೀಕಿ ವೃತ್ತದ ಮುಖಾಂತರ ದೇವಸ್ಥಾನಕ್ಕೆ ತೆರಳಿ ತಾವು ತಂದಿದ್ದ ಸಾವಿರಾರು ರೊಟ್ಟಿಗಳನ್ನು ದಾಸೋಹ ಭವನಕ್ಕೆ ತಲುಪಿಸಿದರು.ಸಮಾರಂಭಕ್ಕೆ ವಿವಿಧೆಡೆಯಿಂದ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ. ಸಮಾರಂಭದ ವೇಳೆ ನಿರಂತರ ದಾಸೋಹ ಸೇವೆ ನಡೆಯುತ್ತದೆ. ಗ್ರಾಮದ ವಿವಿಧ ಓಣಿಗಳ ಮಹಿಳೆಯರು ತಮ್ಮ ಮನೆಯಲ್ಲಿ ಮಾಡಿದ ರೊಟ್ಟಿಗಳನ್ನು ದಾಸೋಹಕ್ಕೆ ನೀಡುತ್ತಿರುವುದು ವಿಶೇಷ.

ಇಂತಹ ಕಾರ್ಯಗಳು ಇತರರಿಗೆ ಮಾದರಿಯಾಗಲಿದೆ. ಸಮಾರಂಭದ ಮೆರುಗನ್ನು ಹೆಚ್ಚಿಸಲಿದೆ' ಎಂದು ಶೇಷಪ್ಪಯ್ಯ ಶ್ರೀ ತಿಳಿಸಿದರು.

## ಬಡ್ಡಿ ರಹಿತ ಸಾಲ ವಿತರಣೆ ಶ್ಲಾಘನೀಯ ಶಾಸಕ ಜಿ.ಹಂಪಯ್ಯ

• ಉದಯವಾಹಿನಿ ಮಾನ್ವಿ

ಸಣ್ಣ ವ್ಯಾಪಾರಿಗಳು, ಆರ್ಥಿಕವಾಗಿ ಹಿಂದುಳಿದವರಿಗೆ ದಾರುಸ್ಸಲಾಮ್ ಸಹಕಾರ ಸಂಘದ ವತಿಯಿಂದ ಬಡ್ಡಿ ರಹಿತ ಸಾಲ ವಿತರಣೆ ಮಾಡುತ್ತಿರುವುದು ಶ್ಲಾಘನೀಯ ಎಂದು ಶಾಸಕ ಜಿ.ಹಂಪಯ್ಯ ನಾಯಕ ಮೆಚ್ಚುಗೆ ವ್ಯಕ್ತಪಡಿಸಿದರು.ಪಟ್ಟಣದ ಖುಬಾ ಮಸೀದಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ದಾರುಸ್ಸಲಾಮ್ ಸೌಹಾರ್ದ ಸಹಕಾರ ಸಂಘದ 3ನೇ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದರು. ದಾರುಸ್ಸಲಾಮ್ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಸೈಯದ್ ಅಕ್ಬರ್ ಪಾಷಾ ಹುಸೇನಿ ಮಾತನಾಡಿ, ದಾರುಸ್ಸಲಾಮ್ ಸಹಕಾರ ಸಂಘ ಒಟ್ಟು 551 ಸದಸ್ಯರನ್ನು ಹೊಂದಿದೆ. 2024-25ನೇ ಸಾಲಿನಲ್ಲಿ 624 ಸದಸ್ಯರಿಗೆ ಯಾವುದೇ ಶುಲ್ಕ ಪಡೆಯದೆ ಒಟ್ಟು ರೂ.1.69 ಕೋಟಿ ಸಾಲವನ್ನು ಬಡ್ಡಿ ರಹಿತವಾಗಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಒಂದು ತಿಂಗಳಿಗೆ ಒಂದು ಕೋಟಿಯವರೆಗೂ ಸಾಲ ನೀಡುವ ಗುರಿ ಹೊಂದಲಾಗಿದೆ' ಎಂದು ತಿಳಿಸಿದರು. 2026ರ ಜನವರಿ 18ರಂದು ಮಾನ್ವಿಯಲ್ಲಿ 101 ಮುಸ್ಲಿಂ ಸಮುದಾಯದವರ ಸಾಮೂಹಿಕ ವಿವಾಹ ಹಮ್ಮಿಕೊಳ್ಳಲಾಗಿದ್ದು, ಆಸಕ್ತರು ಜ.5ರ ಒಳಗಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು' ಎಂದು ಮನವಿ ಮಾಡಿದರು. ಕಾಂಗ್ರೆಸ್ ಮುಖಂಡ ಎ.ಬಾಲಸ್ವಾಮಿ ಕೊಡ್ಲಿ, ಆರ್ ಡಿಸಿಸಿ ಬ್ಯಾಂಕ್ ನಿರ್ದೇಶಕ ಮಲ್ಲನಗೌಡ ನಕ್ಕುಂದಿ ಹಾಗೂ ಮತ್ತಿತರರು ಮಾತನಾಡಿ ದಾರುಸ್ಸಲಾಮ್ ಸಹಕಾರ ಸಂಘದ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

## ಭಜನಾ ಕಮ್ಮಟದಿಂದ ಧರ್ಮ, ಸಂಸ್ಕೃತಿಯ ಅನಾವರಣ

• ಉದಯವಾಹಿನಿ ಉಜಿರೆ

ಭಜನಾ ಕಮ್ಮಟದಿಂದ ನಮ್ಮ ಸನಾತನ ಧರ್ಮ ಮತ್ತು ಸಮಸ್ಕೃತಿಯ ಅನಾವರಣವಾಗಿ ಭಗವಂತನ ಸಾಕ್ಷಾತ್ಕಾರವಾಗುತ್ತದೆ ಎಂದು ಒಡಿಯೂರು ಗುರುದೇವಾನಂದ ಸ್ವಾಮೀಜಿ ಹೇಳಿದರು. ಧರ್ಮಸ್ಥಳದಲ್ಲಿ ಹಮ್ಮಿಕೊಂಡಿದ್ದ 27ನೇ ವರ್ಷದ ಭಜನಾ ಕಮ್ಮಟದ ಸಮಾರೋಪ ಸಮಾರಂಭದಲ್ಲಿ ಅವರು ಆಶೀರ್ವಚನ ನೀಡಿದರು. ಭಜನೆ ಮತ್ತು ಸಂಸ್ಕೃತಿಗೆ ಅವಿನಾಭಾವ ಸಂಬಂಧವಿದ್ದು, ದೃಢಭಕ್ತಿಯಿಂದ ಭಜನೆ ಮಾಡಿದಾಗ ಭಗವಂತನ ಸಾಕ್ಷಾತ್ಕಾರವಾಗುತ್ತದೆ. ಭಜನೆಯ ಮೂಲಕ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ಪುರುಷಾರ್ಥಗಳನ್ನು ಸಾಧಿಸಬಹುದು ಎಂದರು. ರಾಮಾಯಣ, ಮಹಾಭಾರತದ ಕಥೆಗಳಿಂದ ನಮ್ಮ ಸಾರ್ಥಕ ಬದುಕಿಗೆ ಮಾರ್ಗದರ್ಶನ ಸಿಗುತ್ತಿದೆ. ಭಜನಾ ಕಮ್ಮಟದ ಮೂಲಕ ಹೆಗ್ಗಡೆಯವರು ಹಿಂದೂ ಸಮಾಜದ ಸಂಘಟನೆ ಮತ್ತು ಬಲವರ್ಧನೆಗೆ ಅಮೂಲ್ಯ ಕೊಡುಗೆ ನೀಡುತ್ತಿದ್ದಾರೆ. ಭಜನೆಯಿಂದ ಸಾತ್ವಿಕ ಶಕ್ತಿ ಜಾಗೃತಗೊಂಡು ಭಯ, ದ್ವೇಷ ದೂರವಾಗಿ ಪ್ರೀತಿ-ವಿಶ್ವಾಸ ಮೂಡಿ ಬಂದು ಆರೋಗ್ಯಪೂರ್ಣ ಸಮಾಜ ನಿರ್ಮಾಣವಾಗುತ್ತದೆ ಎಂದು ಹೇಳಿದರು. ಸಂಸದ ಕ್ಯಾ.ಬ್ರಿಜೇಶ್ ಚೌಟ ಮಾತನಾಡಿ, ಧರ್ಮ ಮತ್ತು ಸಂಸ್ಕೃತಿ ಉಳಿದರೆ ಮಾತ್ರ ದೇಶ ಉಳಿಯುತ್ತದೆ. ಸನಾತನ ಧರ್ಮ ಮತ್ತು ಸಂಸ್ಕೃತಿಯ ಪುನರುತ್ಥಾನದೊಂದಿಗೆ ಏಕತೆ ಮತ್ತು ಏಕಾಗ್ರತೆ ಸಾಧಿಸಲು ಭಜನೆ ಪ್ರೇರಕ ಶಕ್ತಿಯಾಗಿದೆ ಎಂದು ಹೇಳಿದರು. ವಿಧಾನಪರಿಷತ್ ಸದಸ್ಯ ಕೆ.ಪ್ರತಾಪಸಿಂಹ ನಾಯಕ್ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಮಾತನಾಡಿ, ಮಹಿಳೆಯರು ಮತ್ತು ಮಕ್ಕಳು ಭಜನೆಯಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿರುವುದು ಸಂತೋಷವಾಗಿದೆ.

ಭಜನಾಪಟುಗಳು ಪರಸ್ಪರ ಪ್ರೀತಿ-ವಿಶ್ವಾಸದೊಂದಿಗೆ ನಾಯಕತ್ವ ಗುಣವನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು. ಕುಂದಾಪುರದ ಕೃಷ್ಣ ಪೂಜಾರಿ, ನೆಲ್ಯಾಡಿಯ ಭವಿಷ್ಯ ಕಮ್ಮಟದ ಕುರಿತು ಮಾತನಡಿದರು. ಹೇಮಾವತಿ ವೀ.ಹೆಗ್ಗಡೆ, ಡಿ.ಸುರೇಂದ್ರ ಕುಮಾರ್, ಅನಿತಾ ಸುರೇಂದ್ರ ಕುಮಾರ್, ಡಿ.ಹರ್ಷೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್, ಶ್ರದ್ಧಾ ಅಮಿತ್ ಭಾಗವಹಿಸಿದ್ದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ನಿಮ್ಮ ಕಣ್ಣುಗಳು ಅದೆಷ್ಟು ಪ್ರಕಾಶಮಾನವಾಗಿವೆಯೆಂದರೆ ಅವು ನಿಮ್ಮ ಪ್ರೇಮಿಯ ಕಾಳರಾತ್ರಿಯನ್ನು ಬೆಳಗಬಹುದು. ನೀವು ಕೆಲಸದಲ್ಲಿ ಇಂದು ಒಂದು ಒಳ್ಳೆಯ ಸುದ್ದಿ ಪಡೆಯಬಹುದು.

**ವೃಷಭ** ನಿಮ್ಮ ಸಂಪೂರ್ಣ ಹಾಗೂ ಪ್ರಶ್ನಾತೀತ ಪ್ರೀತಿ ಒಂದು ಜಾದುವಿನಂಥ ಸೃಜನಶೀಲ ಶಕ್ತಿಯನ್ನು ಹೊಂದಿದೆ. ಸ್ಪರ್ಧೆ ಹೆಚ್ಚಾದ ಹಾಗೆ ಕೆಲಸದ ವೇಳಾಪಟ್ಟಿಯಲ್ಲಿ ಒತ್ತಡ ಉಂಟಾಗುತ್ತದೆ.

**ಮಿಥುನ** ನಿಕಟ ಸಂಬಂಧಿಗಳ ಮನೆಗೆ ಹೋಗುವುದರಿಂದ ಇಂದು ನಿಮ್ಮ ಆರ್ಥಿಕ ಪರಿಸ್ಥಿತಿ ಹಾಳಾಗಬಹುದು. ಅನಿರೀಕ್ಷಿತ ಅತಿಥಿಗಳು ಸಂಜೆ ನಿಮ್ಮ ಮನೆಯಲ್ಲಿ ತುಂಬಿರುತ್ತಾರೆ.

**ಕರ್ಕಾಟಕ** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ.

**ಸಿಂಹ** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ತನ್ನ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಈ ಕೌಶಲ್ಯವನ್ನು ಇಂದು ನೀವು ಕಲಿಯಬಹುದು.

**ಕನ್ಯಾ** ಕೆಲವು ಹಿನ್ನಡೆ ಎದುರಿಸುವ ಸಾಧ್ಯತೆಯಿದೆ. ಧೃತಿಗೆಡಬೇಡಿ ಹಾಗೂ ನಿರೀಕ್ಷಿತ ಫಲಿತಾಂಶ ಪಡೆಯಲು ಕಠಿಣ ಪರಿಶ್ರಮಪಡಿ. ಈ ಹಿನ್ನಡೆಗಳು ನಿಮ್ಮ ಯಶಸ್ಸಿನ ಸೋಪಾನಗಳಾಗಿರಲಿ.

**ತುಲಾ** ಪತ್ನಿಯ ವ್ಯವಹಾರಗಳಲ್ಲಿ ನಿಮ್ಮ ಹಸ್ತಕ್ಷೇಪ ಅವಳಿಗೆ ಕಿರಿಕಿರಿ ಮಾಡಬಹುದು. ಕೋಪ ಭುಗಿಲೇಳುವುದನ್ನು ತಪ್ಪಿಸಲು ಅವಳ ಅನುಮತಿ ತೆಗೆದುಕೊಳ್ಳಿ. ನೀವು ಸುಲಭವಾಗಿ ಸಮಸ್ಯೆಯನ್ನು ತಪ್ಪಿಸಬಹುದು.

**ವೃಶ್ಚಿಕ** ಮಾನಸಿಕ ಒತ್ತಡ ತರುವ ಸುಪ್ತ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ.

**ಧನಸ್ಸು** ನಿಮ್ಮ ಪ್ರೇಮ ಜೀವನ ಇಂದು ಒಂದು ಸುಂದರ ತಿರುವನ್ನು ತೆಗೆದುಕೊಳ್ಳುತ್ತದೆ. ನೀವು ಪ್ರೀತಿಯಲ್ಲಿರುವ ಅದ್ಭುತ ಭಾವನೆ ಹೊಂದುತ್ತೀರಿ. ನೀವು ಕೆಲಸದಲ್ಲಿ ಅಭಿನಂದನೆಗಳನ್ನು ಪಡೆಯಬಹುದು.

**ಮಕರ** ನಿಮ್ಮ ಕುಂದಿದ ಜೀವಂತಿಕೆ ವ್ಯವಸ್ಥೆಯಲ್ಲಿ ದೀರ್ಘಕಾಲೀನ ವಿಷದಂತ ವರ್ತಿಸುತ್ತದೆ. ನಿಮ್ಮನ್ನು ಸೃಜನಶೀಲ ಕೆಲಸದಲ್ಲಿ ತೊಡಗಿಸಿಕೊಳ್ಳುವುದು ಮತ್ತು ರೋಗದ ವಿರುದ್ಧ ಹೋರಾಡಲು ಪ್ರೇರೇಪಿಸುವುದು ಒಳ್ಳೆಯದು.

**ಕುಂಭ** ವಿಧಿಯನ್ನು ಆಧರಿಸದಿರಿ ಮತ್ತು ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದ್ದು ಇದು ಎಂದಿಗೂ ತಾನಾಗಿಯೇ ನಿಮ್ಮ ಬಳಿ ಬರುವುದಿಲ್ಲ.

**ಮೀನ** ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸಬೇಕಾಗಿಲ್ಲ. ನಿಮ್ಮ ಸುತ್ತಲಿನ ಜನರು ನಿಮ್ಮ ಸ್ಥೈರ್ಯ ಮತ್ತು ಚೈತನ್ಯಗಳನ್ನು ಹೆಚ್ಚಿಸುತ್ತಾರೆ. ನೀವು ದೀರ್ಘಕಾಲದ ಆಧಾರದ ಮೇಲೆ ಹೂಡಿಕೆ ಮಾಡಿದಲ್ಲಿ ಗಣನೀಯ ಲಾಭ ಮಾಡುತ್ತೀರಿ.

## ಸಚಿವ ಶಿವಾನಂದ ಎಸ್ ಪಾಟೀಲ ರಿಂದ ಸಮೀಕ್ಷೆಗೆ ಚಾಲನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬಸವನಬಾಗೇವಾಡಿ

ಸೋಮವಾರದಿಂದ ಆರಂಭಗೊಂಡ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಕಾರ್ಯಕ್ಕೆ ಕಬ್ಬು ಅಭಿವೃದ್ಧಿ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು ಪಟ್ಟಣದ ವಿದ್ಯಾನಗರದ ಎಪಿಎಂಸಿ ನಿರ್ದೇಶಕ ಶೇಖರ ಗೊಳಸಂಗಿ ಅವರ ಮನೆಯಿಂದ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ತಾಲ್ಲೂಕ ಕಲ್ಯಾಣ ಅಧಿಕಾರಿ ಎಸ್. ವಿ ನಿಂಬಾಳ, ಬಿಇಓ ವಸಂತ ರಾಠೋಡ , ಗ್ರೇಡ್ 2 ತಹಶೀಲ್ದಾರ ಎಚ್‌ಎಸ್ ಅರಕೇರಿ, ಸಮನ್ವಯ ಅಧಿಕಾರಿ ಸುನೀಲ ಕುಮಾರ ನಾಯಕ, ರಾಜ್ಯ ಸಹಕಾರಿ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ, ಪುರಸಭೆ ಅಧ್ಯಕ್ಷೆ ಜಗದೇವಿ ಗುಂಡಳ್ಳಿ, ಶೇಖರ ಗೊಳಸಂಗಿ, ಟಿಎಪಿಸಿಎಂ ಅಧ್ಯಕ್ಷ ಚಂದ್ರಶೇಖರಗೌಡ ಪಾಟೀಲ್, ಸಿದ್ದು ಉಕ್ಕಲಿ,ಎಚ್. ಬಿ ಬಾರಿಕಾಯಿ, ರವಿ ರಾಠೋಡ, ಇಲಾಖೆ ಸಿಬ್ಬಂದಿಗಳಾದ ಸಿಜಿ ಬಿರಾದಾರ, ಎಸ್. ಸಿ ಕುಂಟೋಜಿ, ಸಿದ್ದರಾಮ ಕುರುಬರ, ಎಸ್ ಎಸ್ ಕಿರಸೂರ ಸೇರಿದಂತೆ ಸಮೀಕ್ಷಾ ಸಿಬ್ಬಂದಿಗಳು ಹಾಜರಿದ್ದರು.

## ಅಜಲಾಪೂರ ಗ್ರಾಮ ಪಂಚಾಯಿತಿಗೆ ಜಾಲಿಮುಳ್ಳು ಹಚ್ಚಿ ಬೃಹತ ಪ್ರತಿಭಟನೆ

• ಉದಯವಾಹಿನಿ,ಯಾದಗಿರಿ

23 ಸೆಪ್ಟೆಂಬರ್ ನೇ ತಾರೀಕಿನಂದು ಬೆಳಗ್ಗೆ 9 ಗಂಟೆಗೆ ಸೈದಾಪುರ ಸಮೀಪದ ಗುರುಮಠಕಲ್ ಮತಕ್ಷೇತ್ರದ ವ್ಯಾಪ್ತಿಗೆ ಬರುವ ಅಜಲಾಪುರ ಗ್ರಾಮ ಪಂಚಾಯತಿಗೆ ಜಾಲಿ ಮುಳ್ಳು ಬಡೆದು ಸಾಮಾಜಿಕ ಹೋರಾಟಗಾರ ಉಮೇಶ್ ಮುದ್ನಾಳ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಲಿದೆ.



ಈ ಹಿಂದೆಯೇ ಸಾಮಾಜಿಕ ಹೋರಾಟಗಾರ ಉಮೇಶ್ ಮುದ್ನಾಳ್ ಗ್ರಾಮಕ್ಕೆ ಭೇಟಿ ನೀಡಿ, ಗ್ರಾಮ ಸ್ವಚ್ಛತೆಗಾಗಿ ಗ್ರಾಮದಲ್ಲಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಆದರೂ ದಪ್ಪ ಚರ್ಮದ ಅಧಿಕಾರಿಗಳು ಎಚ್ಚೆತ್ತುಕೊಳ್ಳದೆ ಸಾರ್ವಜನಿಕರ ಜೀವದ ಜೊತೆಗೆ ಚೆಲ್ಲಾಟ ಆಡುತ್ತಿದ್ದಾರೆ. ಇಂತಹ ಭ್ರಷ್ಟ ಅಧಿಕಾರಿಗಳ ವಿರುದ್ಧ ನಾಳೆ ಪ್ರತಿಭಟನೆ ನಡೆಯಲ್ಲಿದೆ.ಈ ಭಾಗದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರತಿಭಟನೆ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿಕೊಂಡರು.

## 2.22 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು

• ಉದಯವಾಹಿನಿ, ಕಲಬುರಗಿ

ಕಿರಾಣಿ ಅಂಗಡಿ ಬೀಗ ಮುರಿದು 2.22 ಲಕ್ಷ ರೂ.ಮೌಲ್ಯದ ನಗನಾಣ್ಯ ದೋಚಿಕೊಂಡು ಹೋಗಿರುವ ಘಟನೆ ಭವಾನಿ ನಗರದಲ್ಲಿ ನಡೆದಿದೆ. ಚಂದ್ರಕಾಂತ ಗೋಳಾ ಎಂಬುವವರ ಕಿರಾಣಿ ಅಂಗಡಿ ಬೀಗ ಮುರಿದು ಕಳ್ಳರು 70 ಸಾವಿರ ರೂ.ಮೌಲ್ಯದ 10 ಗ್ರಾಂ.ಬಂಗಾರದ ಲಾಕೆಟ್, 70 ಸಾವಿರ ರೂ.ಮೌಲ್ಯದ 10 ಗ್ರಾಂ.ಬಂಗಾರದ ಸುತ್ತುಂಗುರ, 70 ಸಾವಿರ ರೂ.ಮೌಲ್ಯದ ತಲಾ 5 ಗ್ರಾಂ. ಬಂಗಾರದ ಎರಡು ಸುತ್ತುಂಗುರ ಮತ್ತು 12 ಸಾವಿರ ರೂ.ನಗದು ಸೇರಿ 2.22 ಲಕ್ಷ ರೂ.ಮೌಲ್ಯದ ನಗನಾಣ್ಯ ದೋಚಿಕೊಂಡು ಹೋಗಿದ್ದಾರೆ. ಈ ಬಗ್ಗೆ ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

# ಸಹಕಾರಿ ಸಂಘದ ಸಾಲ ಸೌಲಭ್ಯ ಸದುಪಯೋಗ ಪಡಿಸಿಕೊಳ್ಳಿ

### ರೈತರಿಗೆ ಸಾಲ ಪೈಪಲೈನ್ ಸಾಲ ಸೇರಿದಂತೆ ಕೃಷಿ ಚಟುವಟಿಕೆಗೆ ಗೊಬ್ಬರ ಕೇಂದ್ರ, ತೆರೆದರು ರಸಗೊಬ್ಬರ ಕೀಟನಾಶಕಗಳ ಕೊರತೆ

• ಉದಯವಾಹಿನಿ,ಮುದ್ದೇಬಿಹಾಳ

ಸಹಕಾರಿ ಸಂಘದಿಂದ ನೀಡುವಂತಹ ಸಾಲ ಸೌಲಭ್ಯಗಳನ್ನು ಸಂಘದ ಪ್ರತಿ ಸದಸ್ಯರು ರೈತರು ಸದುಪಯೋಗ ಪಡಿಸಿಕೊಳ್ಳಬೇಕೆಂದು ಬಸರಕೋಡ ಪ್ರಾಥಮಿಕ ಕೃಷಿ ಸಂಘದ ಅಧ್ಯಕ್ಷ ಹೇಮರೆಡ್ಡಿ ಮೇಟಿ ಹೇಳಿದರು ಅವರು ಸೋಮುವಾರ ಬಸರಕೋಡ ಶ್ರೀ ಪವಾಡ ಬಸವೇಶ್ವರ ದೇವಾಲಯದ ಸಭಾ ಭವನದಲ್ಲಿ ಸಂಘದ 50 ನೇ ವಾರ್ಷಿಕ ಮಹಾಸಭೆ ಉದ್ದೇಶಿಸಿ ಮಾತನಾಡಿದರು ಸಂಘ ಆರಂಭವಾಗಿ 45 ವರ್ಷಗಳು ಯಾವುದೇ ವಾರ್ಷಿಕ ಸಭೆಗಳು ಚರ್ಚೆಗಳು ನಡೆದಿರಲಿಲ್ಲ ನಾವು ಸಂಘದ ಅಧ್ಯಕ್ಷರಾದ 5 ವರ್ಷದಲ್ಲಿ ಸಂಘದ ಏಳ್ಗೆಗೆ ಮತ್ತು ಸಂಘದ ರೈತರಿಗೆ ಸಿಗುವ ಸೌಲಭ್ಯಗಳನ್ನು ಒದಗಿಸುವ ಕೆಲಸವನ್ನು ಮಾಡುತ್ತಿದ್ದೇನೆ ರೈತರಿಗೆ ಕೃಷಿ ಸಾಲ ಪೈಪಲೈನ್ ಸಾಲ ಸೇರಿದಂತೆ ಕೃಷಿ ಚಟುವಟಿಕೆಗೆ ಗೊಬ್ಬರ ಕೇಂದ್ರ, ತರೆದು ರಸಗೊಬ್ಬರ ಕೀಟನಾಶಕಗಳ ಕೊರತೆ ಆಗದಂತೆ ಮಾಡಿದ್ದೇನೆ

ಬರುವ ಅವಧಿಯಲ್ಲಿ ಸದಸ್ಯರು ಅವಕಾಶ ನೀಡಿದರೆ ಸಂಘದಿಂದ ಶುದ್ದ ಗಾಣದ ಎಣ್ಣೆ ಘಟಕ ಶುದ್ದ ಕುಡಿಯುವ ನೀರಿನ ಘಟಕ ಸೇರಿದಂತೆ ಅನೇಕ ಯೋಜನೆಗಳ ಕನಸಿದೆ ಎಂದ ಅವರು ಸಂಘ ಪ್ರಸ್ತಕ ವರ್ಷ 9 ಲಕ್ಷ 73 ಸಾವಿರ ನಿವ್ವಳ ಲಾಭಗಳಿಸಿದೆ ಎಂದರು



ಉದಯವಾಹಿನಿ ಚಿತ್ರ

ಸಭೆಯಲ್ಲಿ ಕೆ ವೈ ಬಿರಾದಾರ, ಲಕ್ಕಪ್ಪ ಸೋಮನಾಳ ವೈ ಮುತ್ತತ್ತಿ ಮಹಾವೀರ ಸಗರಿ ಗೊಮ್ಮಟೇಶ್ವರ ಸಗರಿ ಮಾತನಾಡಿ ಸಂಘದ ಸದಸ್ಯರು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ವ್ಯವಹರಿಸುವ ಬದಲು ಸಂಘದಲ್ಲಿ ವ್ಯವಹರಿಸಿದರೆ ಸಂಘ ಅಭಿವೃದ್ಧಿಯಾಗುತ್ತದೆ ಎಂದರು. ವೃತ್ತಿಪರ ನಿರ್ದೇಶಕ ಡಿ.ಬಿ ಬೇಲಾಳ ವಾರ್ಷಿಕ ವರದಿ ವಾಚಿಸಿದರು ಮಹಾದೇವಯ್ಯಾ ಶಾಸ್ತ್ರೀಗಳು ಆಶೀವರ್ಚನ ಮಾಡಿದರು.

ಸಾನಿಧ್ಯವನ್ನು ಶ್ರೀಕಾಂತ ಒಡೆಯರ್ ಅರವಿಂದ ಒಡೆಯರ ವಹಿಸಿದ್ದರು ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಬಾಬು ಸೂಳೆಬಾವಿ ನಿರ್ದೇಶಕರುಗಳಾದ ಸಿಂಧುಬಲ್ಲಾಳ ನಾಡಗೌಡ, ಸುನಿಲ್ ಸೂಳೆಭಾವಿ,ಸೋಮಪ್ಪ ಮೇಟಿ,ಬಸವರಾಜ ಪಾಟೀಲ್, ಲಕ್ಕಪ್ಪ ಸೋಮನಾಳ, ಶಾಂತಪ್ಪ ಸಂಕನಾಳ,ಮಡಿವಾಳಪ್ಪ ತಳವಾರ, ಶ್ರೀಮತಿ ಪಾರ್ವತಿ ಸಾಲಿಮಠ,ಸಿದ್ದಮ್ಮ ಬಿರಾದಾರ, ಯಲ್ಲಪ್ಪ ಚಲವಾದಿ, ಕ್ಷೇತ್ರಾಧಿಕಾರಿ ರವಿ ಗುರಿಕಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಸನಗೌಡ ಕೊಣ್ಣೂರ ಯುವ ಮುಖಂಡ ಶ್ರೀಶೈಲ ಮೇಟಿ ಸೇರಿದಂತೆ ಗಣ್ಯರು ಸದಸ್ಯರು ಭಾಗವಹಿಸಿದ್ದರು.ಎಲ್ ಆರ್ ಸೋಮನಾಳ ಸ್ವಾಗತಿಸಿದರು ಪವಾಡೆಪ್ಪ ತಾರನಾಳ ನಿರೂಪಿಸಿದರು ಮಂಜುನಾಥ ದೊಡ್ಡಮನಿ ವಂದಿಸಿದರು

> **45 ವರ್ಷ ಬಸರಕೋಡ ಕೃಷಿ ಕೇಂದ್ರದ ಅಧಿಕಾರ ದುರುಪಯೋಗ ಮಾಡಿ ಕೊಂಡವರಿಂದ ಡಿಪಾಜಿಟ್ ಸದಸ್ಯರಿಗೆ ನೀಡಲು ಆಗಿಲ್ಲ ಈ ಕುರಿತು ಕಾನೂನು ಹೋರಾಟ ನಡೆದಿದೆ ಪವಾಡ ಬಸವೇಶ್ವರ ಸಾಕ್ಷಿಯಾಗಿ ನಿಮ್ಮ ಡಿಪಾಜಿಟ್ ಹಣಕ್ಕೆ ಮೋಸವಾಗುವುದಿಲ್ಲ ಕೈಯಿಂದ ಹಣ ಖರ್ಚು ಮಾಡಿ ಆರಂಭಿಸಿದ ಸಂಘದ ಕಚೇರಿ ಕಾಮಗಾರಿ ತಡೆಗೆ ಕಾಣದ ಕೈಗಳು ಕೆಲಸ ಮಾಡಿವೆ -ಹೇಮರೆಡ್ಡಿ ಮೇಟಿ**

# 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ

• ಉದಯವಾಹಿನಿ,ಚಿತ್ರದುರ್ಗ

ಇಂದು ದೇಶಾದ್ಯಂತ ಆಯುರ್ವೇದ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಆಯುರ್ವೇದ ಒಂದು ಪರಿಪೂರ್ಣ ಚಿಕಿತ್ಸಾ ಪದ್ಧತಿ ಹಾಗೂ ಆರೋಗ್ಯವನ್ನು ರಕ್ಷಿಸಲು ಬೇಕಾದ ಎಲ್ಲಾ ಅಂಶಗಳನ್ನು ಆಯುರ್ವೇದದಲ್ಲಿ ವಿವರಿಸಲಾಗಿದೆ. ಇಂತಹ ಆಯುರ್ವೇದ ವೈದ್ಯಕೀಯ ವಿಜ್ಞಾನವು ಇಂದು ಎಂದಿಗಿಂತಲೂ ಪ್ರಸ್ತುತವಾಗಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ಚಂದ್ರಕಾಂತ ಎಸ್. ನಾಗಸಮುದ್ರ ತಿಳಿಸಿದ್ದಾರೆ. ಆಯುರ್ವೇದ, ಯೋಗ, ಧ್ಯಾನ ಭಾರತ ಪ್ರಪಂಚಕ್ಕೆ ಕೊಟ್ಟ ಅತ್ಯಮೂಲ್ಯ ಕೊಡುಗೆಗಳು ಆಯುರ್ವೇದ ಪದ್ಧತಿ ಪುರಾತನವಾದರೂ ಇಂದಿಗೂ ಪ್ರಸ್ತುತ. ಆಯುರ್ವೇದ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಯುನಾನಿ ಸಿದ್ಧ ಹಾಗೂ ಹೋಮಿಯೋಪತಿ ಪದ್ಧತಿಗಳ ಮೂಲಕ ಚಿಕಿತ್ಸೆ ನೀಡುತ್ತಿರುವ ಇಲಾಖೆಯ ಹೆಸರು ಆಯುಷ್.

ಆಯುರ್ವೇದ ಸುಮಾರು 5000 ವರ್ಷಗಳಿಂದ ಪ್ರಚಲಿತವಿರುವ ಪುರಾತನ ಭಾರತೀಯ ಚಿಕಿತ್ಸಾ ಪದ್ಧತಿ. ಶಾರೀರಿಕ ಹಾಗೂ ಮಾನಸಿಕ ರೋಗಗಳನ್ನು ಗುಣಪಡಿಸುವ ರೋಗಗಳು ಬಾರದಂತೆ ತಡೆಗಟ್ಟಲು ದಿನಚರ್ಯೆ, ಋತುಚರ್ಯೆ ಮೂಲಕ ಆರೋಗ್ಯವನ್ನು ಕಾಪಾಡುತ್ತದೆ. ಈ ಪದ್ಧತಿಯಲ್ಲಿ ನೈಸರ್ಗಿಕವಾಗಿ ದೊರೆಯುವ ಸಸ್ಯಜನ್ಮ ಪ್ರಾಣಿಜನ್ಮ ಹಾಗೂ ಖನಿಜ ಪದಾರ್ಥಗಳಿಂದ ತಯಾರಿಸಿದ ಔಷಧಗಳ ಮೂಲಕ ಚಿಕಿತ್ಸೆಯನ್ನು ನೀಡಲಾಗುವುದು.

ಚಿಕಿತ್ಸೆಗಿಂತ ಆರೋಗ್ಯ ಕಾಪಾಡಲು ಹೆಚ್ಚು ಒತ್ತು


ಉದಯವಾಹಿನಿ ಚಿತ್ರ

ಕೊಡುವ ಆಯುರ್ವೇದ ಚಿಕಿತ್ಸಾ ಪದ್ಧತಿಯಲ್ಲಿ ಆಧುನಿಕ ಜೀವನಶೈಲಿಯಿಂದ ಹೆಚ್ಚುತ್ತಿರುವ ಮಾನಸಿಕ ಒತ್ತಡ ಸ್ಥೌಲ್ಯತೆ, ಮಧುಮೇಹ ಅಧಿಕ ರಕ್ತದ ಒತ್ತಡ ಇತ್ಯಾದಿ, ಆ ಸಾಂಕ್ರಾಮಿಕ ರೋಗಗಳಿಗೆ ಸಮರ್ಥ ಚಿಕಿತ್ಸೆಗಳಿವೆ.

ರೋಗ ನಿರೋಧಕ ಶಕ್ತಿ ಹೆಚ್ಚಿಸಿ ರೋಗವೇ ಬಾರದಂತೆ ಕಾಪಾಡುವ ಪಂಚಕರ್ಮ, ದಿನಾಚರ್ಯೆ, ಋತುಚರ್ಯೆ, ಆಹಾರ ಪದ್ಧತಿ, ಮಾನಸಿಕ ಚಿಕಿತ್ಸೆ ಹೀಗೆ ಕೇವಲ ಚಿಕಿತ್ಸೆ ಅಲ್ಲದೆ ಮಾನವನ ಜನನದಿಂದ ಮರಣದವರೆಗೆ ಸುಖವಾಗಿ ಹಿತವಾಗಿ ಬದುಕಲು ಅವಶ್ಯಕವಿರುವ ಎಲ್ಲಾ ತತ್ವಗಳು ಆಯುರ್ವೇದದಲ್ಲಿ ಇವೆ. ಜಗತ್ತಿನಾದ್ಯಂತ ಇಂದು ಸಮರ್ಥ ಹಾಗೂ ಸುರಕ್ಷಿತ ವೈದ್ಯಕೀಯ ಪದ್ಧತಿಯ ಬಗ್ಗೆ ಹುಡುಕಾಟ ನಡೆದಿದೆ. ಹಾಗಾಗಿ ಆಯುರ್ವೇದ ಇಂದು ಪ್ರಪಂಚದಾದ್ಯಂತ ಮುನ್ನೆಲೆಗೆ ಬರುತ್ತಿದೆ ಆಯುರ್ವೇದ ಸಿದ್ಧಾಂತಗಳನ್ನು ಸಂಶೋಧನೆಗಳ ಮುಖಾಂತರ ದೃಢೀಕರಿಸಲಾಗುತ್ತಿದೆ. ಆಯುರ್ವೇದ ಔಷಧಿಗಳ ವಹಿವಾಟು ದಿನೇ ದಿನೇ ಹೆಚ್ಚುತ್ತಿದ್ದು, ಅದು ಇಂದು 1.2 ಟ್ರಿಲಿಯನ್ ಮುಟ್ಟಿದೆ. ಇದು ಆಯುರ್ವೇದ ಬಗ್ಗೆ ಹೆಚ್ಚಾಗುತ್ತಿರುವ ಜನಪ್ರಿಯತೆಯನ್ನು ತೋರಿಸುತ್ತದೆ.

ಇಂತಹ ಉತ್ಕೃಷ್ಟ ಆಯುರ್ವೇದ ಸೇವೆಯನ್ನು ನೀಡುವ ಚಿಕಿತ್ಸಾಲಯಗಳು ಚಿತ್ರದುರ್ಗದಾದ್ಯಂತ 34 ಕಡೆ ಕರ್ತವ್ಯ ನಿರ್ವಹಿಸುತ್ತಿವೆ. ಆಯುರ್ವೇದ ಪ್ರಾಥಮಿಕ ಹಂತದ ಆಯುರ್ವೇದ ಚಿಕಿತ್ಸೆ ಲಭ್ಯವಿದ್ದು, ಆಸ್ಪತ್ರೆಗಳಲ್ಲಿ ಮುಂದುವರೆದ ಹೆಚ್ಚಿನ ಆಯುರ್ವೇದ ಸೇವೆಗಳು ಲಭ್ಯ ಇವೆ. ಸಾರ್ವಜನಿಕರು ಇದರ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬೇಕು.


> **ಧನ್ವಂತರಿ ಜಯಂತಿಯ ಅಂಗವಾಗಿ ಸೆ.23ರಂದು ಆಯುರ್ವೇದ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು, ಉಚಿತ ಆಯುರ್ವೇದವನ್ನು ಚಿತ್ರದುರ್ಗ ನಗರದ ಪ್ರಕೃತಿ ಆಯುರ್ವೇದ ಮಹಾವಿದ್ಯಾಲಯದ ಆವರಣದಲ್ಲಿ ಆಯೋಜಿಸಲಾಗಿದೆ. ಆಯುರ್ವೇದ ದಿನಾಚರಣೆಯ ಈ ಶುಭ ಸಂದರ್ಭದಲ್ಲಿ ಧನ್ವಂತರಿಯು ಎಲ್ಲರಿಗೂ ಪರಿಪೂರ್ಣ ಆರೋಗ್ಯ ನೀಡಲಿ ಎಂದು ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ಚಂದ್ರಕಾಂತ್ ಎಸ್.ನಾಗಸಮುದ್ರ ಕೋರಿದ್ದಾರೆ.**

## 11ಸ್ಥಾನಕ್ಕೆ 23ಅಭ್ಯರ್ಥಿಗಳ ಚುನಾವಣೆ: ಹಸರಗುಂಡಗಿ ಶಾಂತಿಯುತ ಮತದಾನ

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಿನ ಹಸರಗುಂಡಗಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯು ಸೋಮವಾರ ಶಾಂತಿಯುತವಾಗಿ ನಡೆಯಿತು.

ಹಸರಗುಂಡಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 12ನಿರ್ದೇಶಕರಿಗೆ ನಡೆದ ಚುನಾವಣೆಯಲ್ಲಿ ಸಾಲಗಾರರ ಸಾಮಾನ್ಯ ಕ್ಷೇತ್ರಕ್ಕೆ 05 ನಿರ್ದೇಶಕ ಆಯ್ಕೆಗೆ 11ಅಭ್ಯರ್ಥಿ ಸ್ಪರ್ಧೆ, ಸಾಲಗಾರರಲ್ಲದ ಸಾಮಾನ್ಯ ಒಂದು ಕ್ಷೇತ್ರಕ್ಕೆ ಇಬ್ಬರು ಅಭ್ಯರ್ಥಿ ಸ್ಪರ್ಧೆ,ಸಾಲಗಾರರ ಹಿಂದುಳಿದ ವರ್ಗ ಅ ಒಂದು ಕ್ಷೇತ್ರಕ್ಕೆ ಇಬ್ಬರು ಸ್ಪರ್ಧೇ,ಪ್ರವರ್ಗ ಬ ಒಂದು ಕ್ಷೇತ್ರಕ್ಕೆ ಇಬ್ಬರು ಸ್ಪರ್ಧೆ, ಸಾಲಗಾರರ ಸಾಮಾನ್ಯ ಮಹಿಳಾ ಎರಡು ಕ್ಷೇತ್ರಕ್ಕೆ 04ಜನ ಸ್ಪರ್ಧೆ, ಸಾಲಗಾರರ ಪರೀಶಿಷ್ಟ ಜಾತಿ ಒಂದು ಸ್ಥಾನಕ್ಕೆ ಇಬ್ಬರು ಸ್ಪರ್ಧೆ ಸೇರಿದಂತೆ 23ಜನರು ಸ್ಪರ್ಧೆ ಮಾಡಿದರು,ಓರ್ವ ಪರಿಶೀಷ್ಟ ಪಂಗಡದ ಅಭ್ಯರ್ಥಿ ನಾಗಪ್ಪ ಈರಪ್ಪ ಅವಿರೋಧ ಆಯ್ಕೆಯಾಗಿದ್ದರು,11ನಿರ್ದೇಶಕರ ಆಯ್ಕೆಗಾಗಿ ಚುನಾವಣೆ ನಡೆದಿದ್ದು,ಒಟ್ಟಾರೆ 950 ಮತದಾರರಿದ್ದು 637 ಮತದಾರರು ಮತದಾನದ ಹಕ್ಕು ಚಲಾಯಿಸಿದರು ಎಂದು ಹಸರಗುಂಡಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಎಸಿಇಓ ಶ್ರೀಕಾಂತ ಮರಪಳ್ಳಿ ಹಾಗೂ ರೀಟರ್ಟಿಂಗ್ ಅಧಿಕಾರಿ ರಾಘವೇಂದ್ರರೆಡ್ಡಿ ತಿಳಿಸಿದ್ದಾರೆ. ಪಿಎಸ್ಐ ಗಂಗಮ್ಮ ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಹಿರಿಯ ನಾಗರಿಕರಿಗೆ ಮತ್ತು ವಿಕಲಚೇತನರಿಗಾಗಿ ವೀಲ್ಡ್ ಚೇರ್ ವ್ಯವಸ್ಥೆ ಮಾಡದೆ ಇರುವುದರಿಂದ ಪರದಾಡಿದ್ದು ಕಂಡುಬಂತ್ತು, ಈ ಸಂದರ್ಭದಲ್ಲಿ ಶಾಧಿಪೂರ ಸಹಕಾರ ಸಂಗದ ನಿರ್ದೇಶಕ ಗೌತಮ್ ಪಾಟೀಲ,ಗೌತಮ್ ಹಸರಗುಂಡಗಿ,ಪರ್ವತಕುಮಾರ ದೇಸಾಯಿ,ಭವಾನಿ ಪತ್ತೆಪೂರ,ಗೋಪಾಲರೆಡ್ಡಿ ಕೊಳ್ಳೂರ,ಸತೀಶ ಇಟಗಿ,ಸತೀಶರೆಡ್ಡಿ ಸೇರಿದಂತೆ ಅನೇಕರಿದ್ದರು.


ಉದಯವಾಹಿನಿ ಚಿತ್ರ

## ಸೀತಾಫಲ ಸ್ವಾಭಾವಿಕ ಬೆಳೆಯುವ ಹಣ್ಣಿಗೆ ಪ್ರಾಶಂಸೆ ನೀಡಲು ರಾಜ್ಯ ಸರ್ಕಾರಕ್ಕೆ ಉಮೇಶ ಕೆ. ಮುದ್ನಾಳ ಒತ್ತಾಯ !

• ಉದಯವಾಹಿನಿ,ಯಾದಗಿರಿ

ಜಿಲ್ಲೆಯ ಬಹುತೇಕ ಗುಡ್ಡಗಾಡು ಪ್ರದೇಶದಲ್ಲಿ ಬೆಳೆಯುವ ಸೀತಾಫಲ ಹಣ್ಣುಗಳು, ತೋಟಗಾರಿಕೆ ಇಲಾಖೆಯಿಂದ ನಿರ್ಲಕ್ಷಕ್ಕೆ ಒಳಗಾಗಿವೆ ಮಾವು, ಸೀಬೆ, ಪೇರಲ ಸೇರಿದಂತೆ ಹಲವಾರು ಹಣ್ಣಿನ ಬೆಳೆಗಳಿಗೆ ಆದ್ಯತೆ ತೆಗೆದುಕೊಳ್ಳದೇ ಇರುವುದು ಸರಿಯಲ್ಲ ಎಂದು ಅಖಿಲ ಭಾರತೀಯ ಕೋಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ ಉಮೇಶ ಮುದ್ದಾಳ ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

ಯರಗೋಳ ಬಾಧವಾರ ಸೀತಾಫಲ್ ಗುಡ್ಡಕ್ಕೆ ಬೇಟಿ ನೀಡಿ ಹೆಳಿಕೆ ನೀಡಿರುವ ಅವರು ಜಿಲ್ಲೆಯಲ್ಲಿ ಗುಡ್ಡಗಳು ಹೆಚ್ಚಾಗಿದ್ದು. ಅದಕ್ಕಾಗಿ ಗಿರಿನಾಡು ಎಂಬ ಹೆಸರು ಗುಡ್ಡಗಾಡು ಪ್ರದೇಶದಿಂದ ಬಂದಿದೆ ಸ್ವಾಭಾವಿಕವಾಗಿ ಬೆಳೆದ ಸೀತಾಫಲ ಹಣ್ಣುಗಳು ರುಚಿಕರವಾಗಿದ್ದು, ಆರೋಗ್ಯಕ್ಕೂ ಒಳ್ಳೆಯದು. ನಿರಂತರ ಮಳೆ ನೀರಿನಿಂದ ಬೆಳೆಯುವಂತದಲ್ಲಿರುವ ಹಣ್ಣುಗಳು ಕೊಳೆತು ಹೋಗಿವೆ ಅದಲ್ಲದೆ ಯಾವುದೇ ಕ್ರಿಮಿನಾಶಕ ಹಾಗೂ ರಸಗೊಬ್ಬರಗಳನ್ನು ಬಳಸದೇ ನೈಸರ್ಗಿಕವಾಗಿ ಬೆಳೆಯುತ್ತವೆ. ಹೀಗಾಗಿ ಆರೋಗ್ಯಕ್ಕೂ ಒಳ್ಳೆಯ ಹಣ್ಣುಗಳಾಗಿವೆ ಎಂದು ತಿಳಿಸಿದ್ದಾರೆ.

ಆದರೆ ಈ ಗಿಡಗಳಿಗೆ ಅಗತ್ಯ ಸಂರಕ್ಷಣೆ ಇಲ್ಲದಾಗಿದೆ. ಗುಡ್ಡಗಾಡಿನ ಜನರು ಸೀತಾಫಲ ಕಟ್ಟಿಗೆಗಳನ್ನು ಕಡಿದು ಉರುವಲಿಗೆ ಬಳಸುತ್ತಿದ್ದಾರೆ. ಇದರಿಂದಾಗಿ ಜಿಲ್ಲೆಯಲ್ಲಿ ಸೀತಾಫಲ ಹಣ್ಣುಗಳೂ ಕಡಿಮೆ ಆಗುವ ಆತಂಕ ಇದೇ ತೋಟಗಾರಿಕೆ ಇಲಾಖೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.


ಉದಯವಾಹಿನಿ ಚಿತ್ರ

> **ಗುಡ್ಡಗಾಡು ಪ್ರದೇಶಗಳಲ್ಲಿ ಹೆಚ್ಚಿನ ಸೀತಾಫಲ ಸಸಿಗಳು ನೆಡಬೇಕು. ಅವುಗಳನ್ನು ಪೋಷಿಸಿ, ಹಣ್ಣುಗಳು ದೊರೆಯುವಂತೆ ನೋಡಿಕೊಳ್ಳಬೇಕು. ತೋಟಗಾರಿಕೆ ಇಲಾಖೆ ಹಾಗೂ ಅರಣ್ಯ ಇಲಾಖೆಗೆ ಹೆಚ್ಚನ ಜವಬ್ದಾರಿ ಸೂಚಸಬೇಕೆಂದು ತಿಳಿಸಿದರು ಸೀತಾಫಲ ಹೆಚ್ಚು ಬೆಳೆದಲ್ಲಿ ಇತರ ಹಣ್ಣುಗಳನ್ನು ಪೂರೈಕೆ ಮಾಡಬಹುದು. ಇದರಿಂದ ಸರ್ಕಾರಕ್ಕೂ ಆದಾಯ ಬರಲಿದೆ. ಕೂಡಲೇ ರಾಜ್ಯ ಸರ್ಕಾರ ಇತ್ತ ಗಮನ ನೀಡಬೇಕು. ಸೀತಾಫಲಕ್ಕೂ ತೋಟಗಾರಿಕೆ ಬೆಳೆಯ ಸ್ಥಾನಮಾನ ಕೈಗೊಳ್ಳಬೇಕು**
> **-ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ**

## ಕಾಳಗಿ ಅಕ್ಕಪಕ್ಕದಲ್ಲೇ ಬಸ್ಸಿನ ಕೊರತೆ; ನಾಲ್ಕೈದು ಕಿ.ಮೀ ಕಾಲ್ನಡಿಗೆಯ ಗತಿ

• ಉದಯವಾಹಿನಿ, ಕಾಳಗಿ

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು 78ವರ್ಷ ಕಳೆದರೂ ಕಾಳಗಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಚಿಕ್ಕಂಡಿ ತಾಂಡಾ ಮತ್ತು ನಾಮುನಾಯಕ್ ತಾಂಡಾ ಇನ್ನು ಬಸ್ಸಿನ ಸೌಕರ್ಯವೇ ಕಂಡಿಲ್ಲ.ಕಾಳಗಿಯಲ್ಲಿ 2010ರಲ್ಲಿ ಸರ್ಕಾರಿ ಬಸ್ ಘಟಕ ಸ್ಥಾಪನೆಯಾಗಿದೆ. ಆದರೆ ಈ ತಾಂಡಾಗಳಿಗೆ ಮಾತ್ರ ಬಸ್ಸು ಓಡಾಡುತ್ತಿಲ್ಲ.

ಕಾಳಗಿಯಿಂದ ಕೇವಲ 4 ಕಿ.ಮೀ ಅಂತರದ ಚಿಕ್ಕಂಡಿತಾಂಡಾ 3 ಕಿ.ಮೀ ಅಂತರದ ನಾಮುನಾಯಕ್ ತಾಂಡಾಕ್ಕೆ ರಸ್ತೆ ಸಹ ಇದೆ. ಈ ಎರಡೂ ತಾಂಡಾಗಳಲ್ಲಿ ಒಟ್ಟು 630 ಮತದಾರರು ಇದ್ದಾರೆ. ಚಿಕ್ಕಂಡಿತಾಂಡಾದಲ್ಲಿ ಸುಮಾರು 70 ಮನೆ, ನಾಮುನಾಯಕ್ ತಾಂಡಾದಲ್ಲಿ 50 ಮನೆಗಳಿವೆ. ಎರಡು ಕಡೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಅಂಗನವಾಡಿ ಕೇಂದ್ರಗಳಿವೆ. ಆದರೆ ಈ ಎರಡು ತಾಂಡಾಗಳಿಗೆ ಇಲ್ಲಿಯವರೆಗೆ ಸರ್ಕಾರಿ ಬಸ್ಸು ಸಂಚರಿಸಿಲ್ಲ ಎನ್ನುತ್ತಾರೆ ನಿವಾಸಿಗಳು. ಎರಡು ತಾಂಡಾದಲ್ಲಿ 1ರಿಂದ 5ನೇ ತರಗತಿವರೆಗೆ


ಉದಯವಾಹಿನಿ ಚಿತ್ರ

ಮಾತ್ರ ಶಾಲೆಯಿದ್ದು ಬಳಿಕ ಈ ವಿದ್ಯಾರ್ಥಿಗಳು ಹೆಚ್ಚಿನ ವ್ಯಾಸಂಗಕ್ಕೆ ಕಾಳಗಿ, ಕಲಬುರಗಿ ಕಡೆಗೆ ತೆರಳುತ್ತಾರೆ. ಏನೇ ಖರೀದಿ ಮಾಡಲು, ಕಚೇರಿ ಕೆಲಸಕ್ಕೆ ಮತ್ತು ಯಾವುದೇ ಊರು-ಕೇರಿಗೆ ಹೋಗಲು ಈ ತಾಂಡಾಗಳ ಜನರು ಕಾಳಗಿ ಮೂಲಕವೇ ಹೋಗಬೇಕು. ಅದಲ್ಲದೇ 2024ರ ಲೋಕಸಭಾ ಚುನಾವಣೆ ತನಕವೂ ಚಿಕ್ಕಂಡಿ ತಾಂಡಾದ ಮತದಾರರು ದೂರದ ಕರಿಕಲ್ ತಾಂಡಾಕ್ಕೆ ಹಾಗೂ ನಾಮುನಾಯಕ್ ತಾಂಡಾದ ಮತದಾರರು ಲಕ್ಷ್ಮಣನಾಯಕ್ ತಾಂಡಾಕ್ಕೆ ಹೋಗಿ ಮತದಾನ ಮಾಡಿದ್ದಾರೆ. ಈಗಷ್ಟೇ ಪಟ್ಟಣ ಪಂಚಾಯಿತಿ ಸಾರ್ವತ್ರಿಕ ಚುನಾವಣೆಯಲ್ಲಿ ಚಿಕ್ಕಂಡಿ ತಾಂಡಾದಲ್ಲೇ ಮತದಾನ ಕೇಂದ್ರ ಸ್ಥಾಪನೆಯಾಗಿದೆ. ಆದರೆ ನಾಮುನಾಯಕ್ ತಾಂಡಾದ ಜನರು ಈ ಬಾರಿ ಲಕ್ಷ್ಮಣನಾಯಕ್ ತಾಂಡಾದ ಬದಲಾಗಿ ಚಿಕ್ಕಂಡಿತಾಂಡಾಕ್ಕೆ ಬಂದು ಮತ ಚಲಾಯಿಸಿದ್ದಾರೆ.

ನಿತ್ಯ ಎಲ್ಲದಕ್ಕೂ ಕಾಳಗಿ ಪಟ್ಟಣದ ಕಡೆಗೆ ಮುಖಮಾಡುವ ಈ ಎರಡು ತಾಂಡಾಗಳ ಜನರಿಗೆ ಬಸ್ಸಿನ ಸೇವೆ ಮರೀಚಿಕೆಯಾಗಿದೆ. ಸ್ಥಿತಿವಂತರು ತಮ್ಮ ಸ್ವಂತ ವಾಹನಗಳಲ್ಲಿ ಸಂಚರಿಸುತ್ತಿದ್ದರೆ, ಸಾಮಾನ್ಯರು ಟಂಟಂ, ಆಟೋಗಳಲ್ಲಿ ಪ್ರಯಾಣಿಸುವ ಪರಿಸ್ಥಿತಿ ಇದೆ. ಆದರೆ ಬಡವರು ಕಾಲ್ನಡಿಗೆಯನ್ನೆ ಅವಲಂಬಿಸಿದ್ದಾರೆ. ಅಲ್ಲದೆ ಸಾಕಷ್ಟು ಬಾರಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಬೈಕ್ ಅಪಘಾತಕ್ಕೆ ಒಳಗಾಗಿದ್ದಾರೆ. ಕೂಡಲೇ ಬಸ್ಸಿನ ವ್ಯವಸ್ಥೆ ಕಲ್ಪಿಸಬೇಕು' ಎಂದು ವಿಶ್ವನಾಥ ಜಾಧವ, ಅರವಿಂದ ರಾಠೋಡ, ದಿನೇಶ ಜಾಧವ ಆಗ್ರಹಿಸಿದ್ದಾರೆ.

## ಬಬಲಾದ ಐಕೆ ಕೂಸಿನ ಮನೆಗೆ ಭೇಟಿ ನೀಡಿ ಪರಿಶೀಲನೆ

• ಉದಯವಾಹಿನಿ, ಕಮಲಾಪುರ

ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿ ರಮೇಶ ಪಾಟೀಲ ಮತ್ತು ಉದ್ಯೋಗ ಖಾತ್ರಿ, ಯೋಜನೆ ಸಹಾಯಕ ನಿರ್ದೇಶಕ ಜಗನ್ನಾಥ ರೆಡ್ಡಿ ಅವರು ಬಬಲಾದ ಐಕೆ ಕೂಸಿನ ಮನೆಗೆ ಭೇಟಿ ನೀಡಿ ಪರಿಶೀಲನೆ ಮಾಡಿದರು. ನಂತರ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆ ಮಾಡಲಾಯಿತು.

ಹಾಗೆಯೇ ಬಬಲಾದ ಐಕೆ ಗ್ರಾಮ ಪಂಚಾಯಿತಿ ಕಟ್ಟಡ, ಗ್ರಂಥಾಲಯ ವೀಕ್ಷಣೆ ಮಾಡಿ ದಾಖಲಾತಿಗಳ ಪರಿಶೀಲನೆ ಮಾಡಿದರು. ಸ್ಥಳದಲ್ಲಿ ಗ್ರಾಮ ಅಭಿವೃದ್ಧಿ ಅಧಿಕಾರಿ ಭೀಮರಾವ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಪಾರ್ವತಿ ಜಗನ್ನಾಥ ಮತ್ತು ಗ್ರಾಮ ಪಂಚಾಯತಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಎಂಎಸ್‌ಪಿ ದರದಲ್ಲಿ ಜೋಳ ಖರೀದಿಸದ ಕರ್ನಾಟಕ ಸರ್ಕಾರ

### ಬೆಂಬಲ ಬೆಲೆಯಡಿ ಖರೀದಿ ಕೇಂದ್ರದಿಂದ ಭತ್ತ, ರಾಗಿ ಖರೀದಿಗೆ ಆದೇಶ

• ಉದಯವಾಹಿನಿ, ಕೊಟ್ಟೂರು

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 2025-26ನೇ ಸಾಲಿನ ಮುಂಗಾರು ಋತುವಿನಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ಮೂಲಕ ರಾಗಿ ಮತ್ತು ಭತ್ತ ಉತ್ಪನ್ನಗಳನ್ನು ಮಾತ್ರ ಖರೀದಿಸಲು ಸರಕಾರ ಆದೇಶಿಸಿದೆ. ಆದರೆ ಕೃಷಿ ಮಾರುಕಟ್ಟೆಯಲ್ಲಿ ಕಡಿಮೆ ಧಾರಣೆ ಇರುವ ಹೈಬ್ರಿಡ್ ಜೋಳವನ್ನು ಕನಿಷ್ಠ ಬೆಂಬಲ ಯೋಜನೆಯಡಿ ಸರಕಾರ ಖರೀದಿಸುತ್ತದೆ ಎಂಬ ನಿರೀಕ್ಷೆಯಲ್ಲಿದ್ದ ಜೋಳ ಬೆಳೆದ ರೈತರಿಗೆ ನಿರಾಸೆಯಾಗಿದೆ. ಕಳೆದ ವರ್ಷ ರಾಗಿ ಜತೆಗೆ ಹೈಬ್ರಿಡ್ ಜೋಳವನ್ನು ಕನಿಷ್ಠ ಬೆಂಬಲ ಬೆಲೆಯಡಿ ಸರಕಾರ ಖರೀದಿಸಿತ್ತು.

ಆದರೆ ಈ ಪ್ರಕ್ರಿಯೆಯನ್ನು ಡಿಸೆಂಬರ್‌ನಲ್ಲಿಮಾಡುವುದರಿಂದ ಮುಂಗಾರಿನಲ್ಲಿ ಬಂದ ಜೋಳವನ್ನು ರೈತರ ತಮ್ಮ ಆರ್ಥಿಕ ಅಗತ್ಯತೆಗೆ ಕೃಷಿ ಮಾರುಕಟ್ಟೆಯಲ್ಲಿ ಸಿಕ್ಕ ಬೆಲೆಗೆ ಮಾರಾಟ ಮಾಡಿದ್ದರು. ದಾಸ್ತಾನು ಮಾಡಿಟ್ಟುಕೊಂಡ ದೊಡ್ಡ ಹಿಡುವಳಿದಾರರು ಮಾತ್ರ ಬೆಂಬಲ ಬೆಲೆ ಯೋಜನೆ ಲಾಭ ಪಡೆದಿದ್ದರು.

ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಖರೀದಿಸಿದ್ದ ಖರೀದಿದಾರರು ರೈತರ ಹೆಸರಿನಲ್ಲಿ ನೋಂದಣಿ ಮಾಡಿಸಿ, ಅದೇ ಜೋಳವನ್ನು ಹೆಚ್ಚಿನ ದರಕ್ಕೆ ಸರಕಾರಕ್ಕೆ ಮಾರಾಟ ಮಾಡಿದ್ದರು. ಹೆಚ್ಚಿನ ರೈತರು ಹೈಬ್ರಿಡ್ ಜೋಳ ಬೆಳೆದಿದ್ದರೂ ಬೆಂಬಲ ಬೆಲೆ ಯೋಜನೆಯಡಿ ಮಾರಾಟ ಮಾಡುವ ಅವಕಾಶ ಇಲ್ಲವಾಗಿದೆ.


ಉದಯವಾಹಿನಿ ಚಿತ್ರ

**ರೈತರಿಗೆ ನಷ್ಟ:** ಮುಂಗಾರಿನಲ್ಲಿ ಬಿತ್ತುವ ಹೈಬ್ರಿಡ್ ಜೋಳ ಸೆಪ್ಟೆಂಬರ್ ಹೊತ್ತಿಗೆ ಕಟಾವಿಗೆ ಬರುವುದರಿಂದ ಕೇಂದ್ರ ಸರಕಾರ ಘೋಷಿಸಿದ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಕೇಂದ್ರಗಳ ಮೂಲಕ ಖರೀದಿಸಿದರೆ ರೈತರಿಗೆ ಸಹಾಯವಾಗುತ್ತದೆ. ಆದರೆ ಹೈಬ್ರಿಡ್ ಜೋಳ ಖರೀದಿಗೆ ಕೇಂದ್ರ ಆರಂಭಕ್ಕೆ ಆದೇಶವನ್ನೇ ನೀಡದಿರುವುದು ಮತ್ತು ಕೃಷಿ ಮಾರುಕಟ್ಟೆಯಲ್ಲಿ ಹೈಬ್ರಿಡ್ ಜೋಳ ಬೆಲೆ ಕ್ವಿಂಟಲ್‌ಗೆ 2100ರೂ. ಇರುವುದರಿಂದ ರೈತರು ನಷ್ಟ ಅನುಭವಿಸುವುದು ಅನಿವಾರ್ಯವಾಗಿದೆ.

ಈ ವರ್ಷ ಮುಂಗಾರಿನಲ್ಲಿ ಹೈಬ್ರಿಡ್ ಜೋಳವನ್ನು ಹೆಚ್ಚು ಬೆಳೆಯಲಾಗಿದೆ. ಆದರೆ ಮಾರುಕಟ್ಟೆಯಲ್ಲಿದರ ಕುಸಿದಿದೆ. ಇಂತಹ ರೈತರ ನೆರವಿಗಾಗಿ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಕೇಂದ್ರಗಳ ಮೂಲ ಜೋಳ ಖರೀದಿಸಬೇಕಿತ್ತು. ಆದರೆ ಸರಕಾರ ರಾಗಿ ಮತ್ತು ಭತ್ತ ಉತ್ಪನ್ನಗಳ ಖರೀದಿಗೆ ಮಾತ್ರ ಆದೇಶಿಸಿರುವುದು ಜೋಳ ಬೆಳೆದ ರೈತರಿಗೆ ಅನ್ಯಾಯ ಮಾಡಿದೆ.

**ಭತ್ತ, ರಾಗಿ ಖರೀದಿಗೆ ನೋಂದಣಿ**

**ಆಹಾರ ನಿಗಮದಿಂದ ಉಪ ಏಜೆನ್ಸಿಗಳಾದ ಟಿಎಪಿಸಿಎಂಎಸ್, ಪಿಎಸಿಎಸ್, ಎಫ್‌ಪಿಎಸ್, ಎಸ್‌ಎಚ್‌ಎಸ್ ಸಹಯೋಗದೊಂದಿಗೆ ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಟಾಸ್ಕ್ ಫೋರ್ಸ್ ಸಮಿತಿ ನೀಡುವ ಆದೇಶದನ್ವಯ ಆಹಾರ ಧಾನ್ಯಗಳ ಖರೀದಿ ಪ್ರಕ್ರಿಯೆ ಕೈಗೊಳ್ಳಲು ಸರಕಾರ ಆದೇಶಿಸಿದೆ. ಪ್ರತಿ ಜಿಲ್ಲೆಗಳ ಅಗತ್ಯಕ್ಕೆ ತಕ್ಕಂತೆ ಖರೀದಿ ಕೇಂದ್ರಗಳನ್ನು ತೆರೆದು ರಾಗಿ ಬೆಳೆದ ರೈತರ ನೋಂದಣಿ ಅ.1 ರಿಂದ ಡಿ.15 ರವರೆಗೆ ನಡೆಸಿ, 2026ರ ಜ.1ರಿಂದ ಮಾ.31ರವರೆಗೆ ಹಾಗೂ ಭತ್ತ ಬೆಳೆದ ರೈತರ ನೋಂದಣಿ ಕಾರ್ಯವನ್ನು ಸೆ.15ರಿಂದ ಅ 31ರವರೆಗೆ ನಡೆಸುವುದು, ನ.11ರಿಂದ 2026ರ ಫೆ.28 ವರೆಗೆ ಖರೀದಿ ನಡೆಸಲು ತಿಳಿಸಿದೆ.**

**ಬೆಂಬಲ ಬೆಲೆ ಘೋಷಣೆ**

**ರೈತರಿಂದ ಬೆಂಬಲ ಬೆಲೆ ಯೋಜನೆಯಡಿ ಕೇಂದ್ರ ಸರಕಾರ ನಿಗದಿಪಡಿಸಿರುವ 6 ಲಕ್ಷ ಮೆಟ್ರಿಕ್ ಟನ್ ರಾಗಿಯನ್ನು ಕ್ವಿಂಟಲ್‌ಗೆ 4,886 ರೂ.ದರದಲ್ಲಿ ಖರೀದಿಸಲು ಮತ್ತು ಭತ್ತ ಸಾಮಾನ್ಯ ಕ್ವಿಂಟಲ್‌ಗೆ 2,369 ರೂ., ಗ್ರೇಡ್ ಎ ಭತ್ತ ಕ್ವಿಂಟಲ್‌ಗೆ 2,389 ರೂ.ದರದಲ್ಲಿ ಖರೀದಿಸಲು ಆದೇಶಿದೆ. ಆದರೆ ಬಿಳಿ ಜೋಳ ಕ್ವಿಂ.ಗೆ 3, 749ರೂ., ಹೈಬ್ರಿಡ್ ಜೋಳ ಕ್ವಿಂ.ಗೆ 3,689ರೂ. ಬೆಂಬಲ ಬೆಲೆಯನ್ನು ಕೇಂದ್ರ ಘೋಷಿಸಿದ್ದರೂ ಜೋಳ ಖರೀದಿಗೆ ಸರಕಾರ ಮುಂದಾಗಿಲ್ಲ.**

# ಕಿರ್ಕ್ ಸ್ಮಾರಕ ಸಮಾರಂಭದಲ್ಲಿ ಮತ್ತೆ ಒಂದಾದ ಟ್ರಂಪ್ - ಮಸ್ಕ್





**ಅಮೆರಿಕ:** ಸಂಪ್ರದಾಯವಾದಿ ಕಾರ್ಯಕರ್ತ ಚಾರ್ಲಿ ಕಿರ್ಕ್ ಅವರ ಸ್ಮಾರಕ ಸಮಾರಂಭದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಟೆಸ್ಲಾ ಸಿಇಒ ಎಲೋನ್ ಮಸ್ಕ್ ಅಕ್ಕಪಕ್ಕದಲ್ಲಿ ಕುಳಿತಿರುವುದು ಕಂಡು ಬಂದಿದೆ.

ಸಮಾರಂಭದಲ್ಲಿ ಇಬ್ಬರೂ ಖಾಸಗಿ ಸೂಟ್‌ನಲ್ಲಿ ಮಾತನಾಡುತ್ತಿರುವುದು ಕಂಡುಬಂದಿದೆ. ಶ್ವೇತಭವನದ ಸಾಮಾಜಿಕ ಮಾಧ್ಯಮ ಖಾತೆಯು ಟ್ರಂಪ್ - ಮಸ್ಕ್ ಸಂವಹನವನ್ನು ಹೈಲೈಟ್ ಮಾಡಿದೆ. ಎಲೋನ್ ಮಸ್ಕ್ ಅವರು ಚಾರ್ಲಿಗಾಗಿ ಎಂದು ಬರೆದ ಎಕ್ಸ್ ಪೋಸ್ಟ್ ಅನ್ನು ಹಂಚಿಕೊಳ್ಳಲಾಗಿದೆ.

ಈ ಹಿಂದೆ ಉದ್ಯಮಿ ಮಸ್ಕ್, ಅಮೆರಿಕ ಸರ್ಕಾರದ ವಿಶೇಷ ಸರ್ಕಾರಿ ದಕ್ಷತೆ ಇಲಾಖೆಯ ಹುದ್ದೆಗೆ ರಾಜೀನಾಮೆ ನೀಡಿದ್ದರು. ಆ ಬಳಿಕ ಟ್ರಂಪ್ ಮತ್ತು ಮಸ್ಕ್ ಇದೇ ಮೊದಲ ಬಾರಿಗೆ ಸಾರ್ವಜನಿಕವಾಗಿ ಮುಖಾಮುಖಿ ಆಗಿದ್ದಾರೆ. ಮೇ ಅಂತ್ಯದವರೆಗೆ ಮಸ್ಕ್ ಸರ್ಕಾರಿ ದಕ್ಷತೆ ಇಲಾಖೆಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಈ ವೇಳೆ ಅವರು ಟ್ರಂಪ್ ನೀತಿಗಳನ್ನು ಟೀಕಿಸಿದ್ದರು. ಹಣಕಾಸಿನ ಬೇಜವಾಬ್ದಾರಿ ಎಂದು ಕರೆದಿದ್ದರು.

ತಮ್ಮ ಹುದ್ದೆಯಿಂದ ನಿರ್ಗಮಿಸಿದ ಬಳಿಕ ಮಸ್ಕ್, ಟ್ರಂಪ್ ಅವರ ನೀತಿಗಳನ್ನು ಸೋಷಿಯಲ್ ಮೀಡಿಯಾದಲ್ಲಿ ದೊಡ್ಡ ಪ್ರಮಾಣದಲ್ಲಿ ಟೀಕೆ ಮಾಡಿದ್ದರು. ಇದು ಇಬ್ಬರ ನಡುವಣ ಸಂಬಂಧಗಳಲ್ಲಿ ಬಿರುಕು ಮೂಡಿಸಿತ್ತು. ಅಷ್ಟೇ ಅಲ್ಲ ಟ್ರಂಪ್, ಮಸ್ಕ್ ಅವರ ಕಂಪನಿಗಳೊಂದಿಗಿನ ಫೆಡರಲ್ ಒಪ್ಪಂದಗಳನ್ನು ರದ್ದುಗೊಳಿಸುವುದಾಗಿ ಬೆದರಿಕೆ ಕೂಡಾ ಹಾಕಿದ್ದರು.

ಅದಾದ ಬಳಿಕ ಚಾರ್ಲಿ ಕಿರ್ಕ್ ಸ್ಮಾರಕ ಸಮಾರಂಭ ಇಬ್ಬರ ನಡುವಣ ಮುನಿಸನ್ನು ಬಹಳಷ್ಟು ತಗ್ಗಿಸಿರುವುದನ್ನು ಕಾಣಬಹುದಾಗಿದೆ ಎಂದು ದಿ ಹಿಲ್ ವರದಿ ಮಾಡಿದೆ. ಈ ನಡುವೆ ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು, ಕಿರ್ಕ್ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಹೃದಯಸ್ಪರ್ಶಿ ಮಾತುಗಳನ್ನಾಡಿದರು. ನಂಬಿಕೆ, ಸತ್ಯ ಮತ್ತು ದೇಶಕ್ಕಾಗಿ ಚಾರ್ಲಿ ಕಿರ್ಕ್ ಅವರ ಹೋರಾಟವನ್ನು ಮುಂದುವರಿಸುವ ಮೂಲಕ ಅವರ ಜೀವನವನ್ನು ಗೌರವಿಸುವಂತೆ ಬೆಂಬಲಿಗರಿಗೆ ಕರೆ ನೀಡಿದರು.ನಾನು ಸಾಮಾಜಿಕ ಮಾಧ್ಯಮದಲ್ಲಿ ಅನೇಕರು 'ಚಾರ್ಲಿಗಾಗಿ' ಮಾತನಾಡುವುದನ್ನು ನೋಡಿದ್ದೇನೆ. ನಾವು ಇದನ್ನು ಚಾರ್ಲಿಗಾಗಿ ಮಾಡಬೇಕು. ಚಾರ್ಲಿಗಾಗಿ ನಾವು ಪ್ರತಿದಿನ ಸತ್ಯವನ್ನು ಮಾತನಾಡುತ್ತೇವೆ. ಚಾರ್ಲಿಗಾಗಿ ನಾವು ಅಮೆರಿಕ ಸಂಯುಕ್ತ ಸಂಸ್ಥಾನವನ್ನು ಶ್ರೇಷ್ಠ ಮಾಡುತ್ತೇವೆ. ಚಾರ್ಲಿಗಾಗಿ, ನಾವು ಎಂದಿಗೂ ಕುಗ್ಗುವುದಿಲ್ಲ ವ್ಯಾನ್ಸ್ ಹೇಳಿದ್ದಾರೆ.

ಕಿರ್ಕ್ ಅವರನ್ನು ದೇಶಭಕ್ತ ಮತ್ತು ಆಳವಾದ ನಂಬಿಕೆಯ ವ್ಯಕ್ತಿ ಎಂದು ವ್ಯಾನ್ಸ್ ಬಣ್ಣಿಸಿದ್ದಾರೆ. ಅವರ ಸಾವಿನ ನಂತರ ಮಾನವೀಯತೆಯ ಕೆಲವು ಕೆಟ್ಟ ಭಾಗಗಳನ್ನು ನಾವು ನೋಡಿದ್ದೇವೆ. ಜನರು ಅವರ ಬಗ್ಗೆ ಅಪಪ್ರಚಾರ ಮಾಡುವುದನ್ನು ನಾವು ನೋಡಿದ್ದೇವೆ. ಜನರು ಅವರ ಹತ್ಯೆಯನ್ನು ಸಮರ್ಥಿಸಿಕೊಳ್ಳುವುದನ್ನು ಮತ್ತು ಅವರ ಸಾವನ್ನು ಸಂಭ್ರಮಿಸಿರುವುದನ್ನು ನಾವು ನೋಡಿದ್ದೇವೆ ಎಂದು ವ್ಯಾನ್ಸ್ ಬೇಸರ ಕೂಡಾ ಹೊರ ಹಾಕಿದರು.

ದಿ ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದಂತೆ 31 ವರ್ಷದ ಬಲಪಂಥೀಯ ನಿರೂಪಕ ಮತ್ತು ಟರ್ನಿಂಗ್ ಪಾಯಿಂಟ್ WTí ಸ್ಥಾಪಕ ಚಾರ್ಲಿ ಕಿರ್ಕ್ ಸೆಪ್ಟೆಂಬರ್ 10 ರಂದು ಉತಾಹ್ ವ್ಯಾಲಿ ವಿಶ್ವವಿದ್ಯಾಲಯದಲ್ಲಿ ಮಾತನಾಡುತ್ತಿದ್ದಾಗ ಗುಂಡಿನ ದಾಳಿಗೆ ಒಳಗಾಗಿದ್ದರು. ಈ ಹತ್ಯೆಗೆ ಸಂಬಂಧಿಸಿದಂತೆ ಅಧಿಕಾರಿಗಳು 22 ವರ್ಷದ ಟೈಲರ್ ರಾಬಿನ್ಸನ್ ಅವರನ್ನು ಬಂಧಿಸಿದ್ದರು.

## ಅಮೆರಿಕಕ್ಕೆ ಭೇಟಿ ನೀಡಿದ ವಿದೇಶಾಂಗ ಸಚಿವ ಜೈಶಂಕರ್;ಮಾರ್ಕೊ ರೂಬಿಯೊ ಜತೆ ಮಾತುಕತೆ

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹಾಗೂ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಜೈ ಶಂಕರ್ ಭೇಟಿ

# ಭಾರತ-ಅಮೆರಿಕ ವೃದ್ಧಿಗೆ ಸಹಕಾರ



### ಭಾರತ - ಫಿಲಿಪ್ಪಿನ್ಸ್ ಸಂಬಂಧಗಳ ಬಲ

ನ್ಯೂಯಾರ್ಕ್‌ನಲ್ಲಿ ಆರಂಭದಲ್ಲಿ ಫಿಲಿಪೈನ್ಸ್‌ನ ವಿದೇಶಾಂಗ ಕಾರ್ಯದರ್ಶಿ Thelb¨bws ಅವರನ್ನು ಭೇಟಿ ಮಾಡಿದ್ದು ಸಂತೋಷವಾಯಿತು. ಅಧ್ಯಕ್ಷಅವರ ಇತ್ತೀಚಿನ ಭಾರತ ಭೇಟಿಯ ನಂತರ ನಾವು ಇದನ್ನು ಅನುಸರಿಸಿದ್ದೇವೆ ಎಂದು ಜೈಶಂಕರ್™ ನಲ್ಲಿ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದರು. ಕಳೆದ ಆಗಸ್ಟ್‌ನಲ್ಲಿ ಭಾರತದ ಯಶಸ್ವಿ ಭೇಟಿಯ ನಂತರ ಡಾ. ಎಸ್. ಜೈಶಂಕರ್ ಅವರನ್ನು ಮತ್ತೊಮ್ಮೆ ಭೇಟಿಯಾಗಲು ಸಂತೋಷವಾಯಿತು. ಇಂದಿನ ನಮ್ಮ ಚರ್ಚೆಯು ರಾಜಕೀಯ, ರಕ್ಷಣೆ ಮತ್ತು ಭದ್ರತೆ, ಕಡಲ ಕ್ಷೇತ್ರ ಇತ್ಯಾದಿಗಳಲ್ಲಿ ಸಹಕಾರವನ್ನು ಸಕ್ರಿಯವಾಗಿ ಅಭಿವೃದ್ಧಿಪಡಿಸಲು ಕಾರ್ಯತಂತ್ರದ ಪಾಲುದಾರರಾಗಿ ನಮ್ಮ ಎರಡು ದೇಶಗಳ ಬದ್ಧತೆಯನ್ನು ಪುನರುಚ್ಚರಿಸುತ್ತದೆ' ಎಂದಿದ್ದರು.



ಈ ಸಭೆಯು ಭಾರತ - ಫಿಲಿಪ್ಪಿನ್ಸ್ ಸಂಬಂಧಗಳನ್ನು ಬಲಪಡಿಸುವುದನ್ನು, ವಿಶೇಷವಾಗಿ ಇಂಡೋ - ಪೆಸಿಫಿಕ್‌ನಲ್ಲಿ ಭದ್ರತೆ ಮತ್ತು ಕಡಲ ಸಹಕಾರದ ಕ್ಷೇತ್ರಗಳಲ್ಲಿನ ಸಂಬಂಧಗಳನ್ನು ಎತ್ತಿ ತೋರಿಸಿತು. ಭಾರತ ಮತ್ತು ಫಿಲಿಪ್ಪಿನ್ಸ್ 1949ರ ನವೆಂಬರ್‌ನಲ್ಲಿ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪಿಸಿದವು ಮತ್ತು ಅಂದಿನಿಂದ ವ್ಯಾಪಾರ, ರಕ್ಷಣೆ, ಕಡಲ ಭದ್ರತೆ, ಕೃಷಿ, ಆರೋಗ್ಯ ರಕ್ಷಣೆ, ಔಷಧಗಳು ಮತ್ತು ಡಿಜಿಟಲ್ ತಂತ್ರಜ್ಞಾನಗಳು ಸೇರಿದಂತೆ ಕ್ಷೇತ್ರಗಳಲ್ಲಿ ತಮ್ಮ ಪಾಲುದಾರಿಕೆ ವಿಸ್ತರಿಸಿವೆ.

ಪಾಲುದಾರಿಕೆ ವಿಸ್ತಾರದ ಬಗ್ಗೆ ಚರ್ಚೆ

### ಸಕ್ರಿಯವಾಗಿ ಅಭಿವೃದ್ಧಿಪಡಿಸಲು ಕಾರ್ಯತಂತ್ರ

ವಿಶ್ವಸಂಸ್ಥೆ ಮತ್ತು ಇಂಡೋ - ಪೆಸಿಫಿಕ್ ಪ್ರದೇಶದಲ್ಲಿ ನಮ್ಮ ಸಹಕಾರದ ಬಗ್ಗೆಯೂ ಚರ್ಚಿಸಲಾಗಿದೆ ಎಂದು ಜೈಶಂಕರ್ ಹೇಳಿಕೊಂಡಿದ್ದರು. ರಾಜಕೀಯ, ರಕ್ಷಣೆ ಮತ್ತು ಭದ್ರತೆ, ಕಡಲ ಕ್ಷೇತ್ರ ಇತ್ಯಾದಿಗಳಲ್ಲಿ ಸಹಕಾರವನ್ನು ಸಕ್ರಿಯವಾಗಿ ಅಭಿವೃದ್ಧಿಪಡಿಸಲು ಕಾರ್ಯತಂತ್ರದ ಪಾಲುದಾರರಾಗಿ ಎರಡೂ ದೇಶಗಳ ಬದ್ಧತೆಯನ್ನು ಅವರ ಚರ್ಚೆಯು ಪುನರುಚ್ಚರಿಸಿದೆ ಎಂದು ಫಿಲಿಪೈನ್ಸ್‌ನ ವಿದೇಶಾಂಗ ಕಾರ್ಯದರ್ಶಿ ಮಾ. ಥೆರೆಸಾ ಪಿ. ಲಜಾರೊ ಹೇಳಿದ್ದರು.

**ನ್ಯೂಯಾರ್ಕ್ :** ಭಾನುವಾರ ನ್ಯೂಯಾರ್ಕ್‌ಗೆ ಆಗಮಿಸಿದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಅವರು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರನ್ನು ಭೇಟಿ ಮಾಡಲಿದ್ದಾರೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ತಿಳಿಸಿದೆ. ಭಾರತವು ರಷ್ಯಾದಿಂದ ತೈಲ ಖರೀದಿಸಿದ್ದಕ್ಕೆ ಪ್ರತಿಯಾಗಿ ಡೊನಾಲ್ಡ್ ಟ್ರಂಪ್ ಸರ್ಕಾರ ಭಾರತೀಯ ಸರಕುಗಳ ಮೇಲೆ ಶೇಕಡಾ 50 ರಷ್ಟು ಸುಂಕವನ್ನು ವಿಧಿಸಿದೆ. ಆ ಬಳಿಕ ಉಭಯ ರಾಷ್ಟ್ರಗಳ ನಡುವೆ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು. ಆ ಬಳಿಕ ಇಬ್ಬರು ರಾಜತಾಂತ್ರಿಕರ ನಡುವಿನ ಮೊದಲ ಸಭೆ ಇದಾಗಿದೆ. ಜುಲೈ ಆರಂಭದಲ್ಲಿ ಮಾರ್ಕೊ ರುಬಿಯೊ ಮತ್ತು ಜೈಶಂಕರ್ ಕೊನೆಯ ಬಾರಿಗೆ ವಾಷಿಂಗ್ಟನ್‌ನಲ್ಲಿ ಭೇಟಿಯಾಗಿದ್ದರು. ಇದಕ್ಕೂ ಮೊದಲು ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ (ಯುಎನ್‌ಜಿಎ) 80ನೇ ಅಧಿವೇಶನದ ಹೊರತಾಗಿ ವಿದೇಶಾಂಗ ಕಾರ್ಯದರ್ಶಿ ಥೆರೆಸಾ ಪಿ ಲಜಾರೊ ಅವರನ್ನು ಭೇಟಿಯಾಗಿದ್ದರು.ಆಗಸ್ಟ್‌ನಲ್ಲಿ ಫಿಲಿಪೈನ್ಸ್ ಅಧ್ಯಕ್ಷ ಫರ್ಡಿನಾಂಡ್ ಬಾಂಗ್‌ಬಾಂಗ್ ಮಾರ್ಕೋಸ್ ಜೂನಿಯರ್ ಭಾರತಕ್ಕೆ ನೀಡಿದ ಭೇಟಿಯನ್ನು ಉಭಯ ನಾಯಕರು ನೆನಪಿಸಿಕೊಂಡಿದ್ದರು ಮತ್ತು ನವದೆಹಲಿ ಮತ್ತು ಮನಿಲಾ ನಡುವೆ ಬೆಳೆಯುತ್ತಿರುವ ಪಾಲುದಾರಿಕೆಯ ಬಗ್ಗೆ ಚರ್ಚಿಸಿದ್ದರು.

## ಪಿಒಕೆ ಜನ ಮೇ ಭಿ ಭಾರತ್ ಹೂಂ ಎನ್ನುವ ದಿನ ದೂರವಿಲ್ಲ; ಸಿಂಗ್



**ಮೊರಾಕೊ:** ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ)ದ ಮೇಲೆ ಯಾವುದೇ ಆಕ್ರಮಣ ಮಾಡದೆ ಅದನ್ನು ಭಾರತದ ನಿಯಂತ್ರಣವನ್ನು ಮರಳಿ ಪಡೆಯುವ ವಿಶ್ವಾಸವನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ವ್ಯಕ್ತಪಡಿಸಿದ್ದಾರೆ. ಏಕೆಂದರೆ ಈ ಪ್ರದೇಶದ ಜನರು ಪ್ರಸ್ತುತ ಆಡಳಿತದಿಂದ ಸ್ವಾತಂತ್ರ್ಯವನ್ನು ಬಯಸುತ್ತಿದ್ದಾರೆ.ಪಿಒಕೆ ತನ್ನದೇ ಆದ ಮೇಲೆ ನಮ್ಮದಾಗುತ್ತದೆ. ಪಿಒಕೆಯಲ್ಲಿ ಬೇಡಿಕೆಗಳನ್ನು ಇಡಲು ಪ್ರಾರಂಭಿಸಲಾಗಿದೆ, ನೀವು ಘೋಷಣೆಗಳನ್ನು ಕೇಳಿರಬೇಕು ಎಂದು ಸಚಿವರು ಮೊರಾಕೊದಲ್ಲಿ ಭಾರತೀಯ ಸಮುದಾಯದೊಂದಿಗೆ ನಡೆಸಿದ ಸಂವಾದದ ಸಂದರ್ಭದಲ್ಲಿ ಹೇಳಿದರು. ಐದು ವರ್ಷಗಳ ಹಿಂದೆ ಕಾಶ್ಮೀರ ಕಣಿವೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾನು ಭಾರತೀಯ ಸೇನೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದೆ, ಆಗ ನಾವು ಪಿಒಕೆ ಮೇಲೆ ದಾಳಿ ಮಾಡಿ ವಶಪಡಿಸಿಕೊಳ್ಳುವ ಅಗತ್ಯವಿಲ್ಲ ಎಂದು ನಾನು ಹೇಳಿದ್ದೆ, ಅದು ಹೇಗಾದರೂ ನಮ್ಮದು; ಪಿಒಕೆ ಸ್ವತಃ ಮೇ ಭಿ ಭಾರತ್ ಹೂಂ ಎಂದು ಹೇಳುವ ದಿನ ದೂರವಿಲ್ಲ ಎಂದಿದ್ದಾರೆ. ಮೇ 7 ರಂದು ನಡೆದ ಆಪರೇಷನ್ ಸಿಂಧೂರ್ ಸಮಯದಲ್ಲಿ ಕೇಂದ್ರ ಸರ್ಕಾರವು ಪಿಒಕೆ ವಶಪಡಿಸಿಕೊಳ್ಳುವ ಅವಕಾಶವನ್ನು ಕಳೆದುಕೊಂಡಿದೆ ಎಂದು ಆರೋಪಿಸಿದ ನಂತರ ಸಚಿವರ ಹೇಳಿಕೆಗಳು ಬಂದಿವೆ.ಆಪರೇಷನ್ ಸಿಂಧೂರ್ ಹಲವಾರು ಪಾಕಿಸ್ತಾನಿ ಜೆಟ್‌ಗಳನ್ನು ಹೊಡೆದುರುಳಿಸಿದ ನಂತರ ಭಾರತವು ಮೇಲುಗೈ ಸಾಧಿಸಿದ್ದರೂ, ಪಾಕಿಸ್ತಾನ ಆಕ್ರಮಿತ ಪ್ರದೇಶವನ್ನು ವಶಪಡಿಸಿಕೊಳ್ಳುವ ಅವಕಾಶವಿದೆ ಎಂದು ಹೇಳಿಕೊಂಡು, ಕೇಂದ್ರ ಸರ್ಕಾರವು ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದಕ್ಕಾಗಿ ವಿವಿಧ ವಿರೋಧ ಪಕ್ಷಗಳ ಹಲವಾರು ನಾಯಕರು ಕೇಂದ್ರ ಸರ್ಕಾರವನ್ನು ಟೀಕಿಸಿದ್ದರು. ರಕ್ಷಣಾ ಸಚಿವರು ಎರಡು ದಿನಗಳ ಕಾಲ ಮೊರಾಕೊಗೆ ಭೇಟಿ ನೀಡುತ್ತಿದ್ದು, ಅಲ್ಲಿ ಅವರು ಬೆರೆಚಿಡ್‌ನಲ್ಲಿ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್‌ನ ವೀಲ್ಡ್ ಆರ್ಮರ್ಡ್ ಪ್ಲಾಟ್‌ಫಾರ್ಮ್ (ಡಬ್ಲ್ಯುಎಚ್‌ಎಪಿ) 88 ಗಾಗಿ ಹೊಸ ಉತ್ಪಾದನಾ ಸೌಲಭ್ಯವನ್ನು ಉದ್ಘಾಟಿಸಲಿದ್ದಾರೆ, ಇದು ಆಫ್ರಿಕಾದಲ್ಲಿ ಮೊದಲ ಭಾರತೀಯ ರಕ್ಷಣಾ ಉತ್ಪಾದನಾ ಘಟಕವಾಗಿದೆ.ಇದು ಮೊರಾಕೊಗೆ ಭಾರತೀಯ ರಕ್ಷಣಾ ಸಚಿವರ ಮೊದಲ ಭೇಟಿಯಾಗಿದೆ. ಮೊರಾಕೊದಲ್ಲಿನ ಹೊಸ ಸೌಲಭ್ಯವು ಭಾರತದ ರಕ್ಷಣಾ ಉದ್ಯಮದ ಬೆಳೆಯುತ್ತಿರುವ ಜಾಗತಿಕ ಹೆಜ್ಜೆಗುರುತನ್ನು ಪ್ರತಿಬಿಂಬಿಸುವ ಪ್ರಮುಖ ಮೈಲಿಗಲ್ಲು ಎಂದು ಸಚಿವರು ಶ್ಲಾಘಿಸಿದರು.

## ನ.5 ರಿಂದ 15ರೊಳಗೆ ಬಿಹಾರ ಚುನಾವಣೆ...?

**ಪಾಟ್ನಾ:** ಮುಂದಿನ ನವೆಂಬರ್ 5 ರಿಂದ 15ರ ನಡುವೆ ಬಿಹಾರ ವಿಧಾನಸಭೆ ಚುನಾವಣೆ ನಡೆಯುವ ಸಾಧ್ಯತೆಗಳಿವೆ. ಅಕ್ಟೋಬರ್ 28 ರಂದು ಛಾತ್ ಪೂಜೆ ನಡೆಯುವ ನಂತರ ನವೆಂಬರ್ 5 ರಿಂದ 15ರ ನಡುವೆ ಬಿಹಾರ ವಿಧಾನಸಭಾ ಚುನಾವಣೆ ನಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಪ್ರಸ್ತುತ ವಿಧಾನಸಭೆಯ ಅವಧಿ ನವೆಂಬರ್ 22, 2025 ರಂದು ಕೊನೆಗೊಳ್ಳಲಿದ್ದು, ಆ ದಿನಾಂಕಕ್ಕೂ ಮುನ್ನ ಚುನಾವಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಅಗತ್ಯವಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮುಂದಿನ ವಾರ ಚುನಾವಣೆಗೆ ಬಿಹಾರಕ್ಕೆ ಭೇಟಿ ನೀಡಿ ಚುನಾವಣಾ ಸಿದ್ಧತೆಗಳು ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಪರಿಶೀಲಿಸಲಿದ್ದಾರೆ.

ಇದನ್ನು ಸೆಪ್ಟೆಂಬರ್ 30 ರಂದು ಪ್ರಕಟಿಸಲಾಗುವುದು ಎಂದು ಮೂಲಗಳು ತಿಳಿಸಿವೆ. ಚುನಾವಣಾ ಆಯೋಗವು ಇತ್ತೀಚೆಗೆ ಮುಕ್ತಾಯಗೊಳಿಸಿದ ವಿಶೇಷ ತೀವ್ರ ಪರಿಷ್ಕರಣಾ ವ್ಯಾಯಾಮದ ಬಗ್ಗೆ ರಾಜಕೀಯ ಕೋಪ ಭುಗಿಲೆದ್ದಿತ್ತು, ಇದು ಕರಡು ಮತದಾರರ ಪಟ್ಟಿಯಿಂದ 65 ಲಕ್ಷ ಹೆಸರುಗಳನ್ನು ಅಳಿಸಿಹಾಕಿತು. ನಿಜವಾದ ಮತದಾರರನ್ನು ತೆಗೆದುಹಾಕಲು ಈ ಪ್ರಕ್ರಿಯೆಯನ್ನು ಮರೆಮಾಚಲು ಬಳಸಲಾಗುತ್ತಿದೆ ಎಂದು ಇಂಡಿಯಾ ಒಕ್ಕೂಟ ಚುನಾವಣಾ ಸಂಸ್ಥೆಯನ್ನು ಗುರಿಯಾಗಿಸಿಕೊಂಡಿದೆ. ಏತನ್ಮಧ್ಯೆ, ಸೆಪ್ಟೆಂಬರ್ 30 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟವಾದ ನಂತರವೂ ಯಾವುದೇ ಅಕ್ರಮ ಕಂಡುಬಂದರೆ ಇಡೀ ಪ್ರಕ್ರಿಯೆಯನ್ನು ರದ್ದುಗೊಳಿಸುವುದಾಗಿ ಸುಪ್ರೀಂ ಕೋರ್ಟ್ ಎಚ್ಚರಿಸಿದೆ. ಹಿಂದಿನ ಪದ್ಧತಿಗೆ ಅನುಗುಣವಾಗಿ, ಬಿಹಾರದಲ್ಲಿ ಮತ್ತೆ ಬಹು-ಹಂತದ ಮತದಾನಕ್ಕೆ ಸಜ್ಜಾಗಿದೆ. 2020 ರ ಚುನಾವಣೆಗಳನ್ನು ಮೂರು ಹಂತಗಳಲ್ಲಿ ನಡೆಸಲಾಯಿತು .71 ಸ್ಥಾನಗಳಿಗೆ ಅಕ್ಟೋಬರ್ 28 ರಂದು, 94 ಸ್ಥಾನಗಳಿಗೆ ನವೆಂಬರ್ 3 ರಂದು ಮತ್ತು 78 ಸ್ಥಾನಗಳಿಗೆ ನವೆಂಬರ್ 7 ರಂದು ಮತದಾನ ನಡೆದಿತ್ತು. ಮತ್ತೊಮ್ಮೆ ಆಡಳಿತಾರೂಢ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಮತ್ತು ವಿರೋಧ ಪಕ್ಷದ ಇಂಡಿಯಾ ಒಕ್ಕೂಟಗಳ ನಡುವೆ ನೇರ ಹಣಾಹಣಿ ನಡೆಯಲಿದೆ. ಬಿಜೆಪಿ, ಜನತಾದಳ (ಯುನೈಟೆಡ್) ಮತ್ತು ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್) ಒಳಗೊಂಡ ಎನ್‌ಡಿಎ, ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದಲ್ಲಿ ಮತ್ತೊಂದು ಅವಧಿಯನ್ನು ಗುರಿಯಾಗಿಸಿಕೊಂಡಿದೆ. ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ನೇತೃತ್ವದ ವಿರೋಧ ಪಕ್ಷಗಳು, ಕಾಂಗ್ರೆಸ್ ಮತ್ತು ಎಡ ಪಕ್ಷಗಳೊಂದಿಗೆ ಸೇರಿ, ಅವರನ್ನು ಪದಚ್ಯುತಗೊಳಿಸಲು ಆಶಿಸುತ್ತಿವೆ. 243 ಸದಸ್ಯರ ಸದನದಲ್ಲಿ, ಎನ್‌ಡಿಎ ಪ್ರಸ್ತುತ 131 ಸದಸ್ಯರೊಂದಿಗೆ ಬಹುಮತವನ್ನು ಹೊಂದಿದೆ ? ಬಿಜೆಪಿ 80, ಜೆಡಿ (ಯು) 45, ಹಿಂದೂಸ್ತಾನಿ ಅವಾಮ್ ಮೋರ್ಚಾ (ಜಾತ್ಯತೀತ) 4, ಮತ್ತು 2 ಸ್ವತಂತ್ರ ಶಾಸಕರ ಬೆಂಬಲವಿದೆ. ಇಂಡಿಯಾ ಬ್ಲಾಕ್ 111 ಶಾಸಕರನ್ನು ಹೊಂದಿದ್ದು, ಆರ್‌ಜೆಡಿ 77, ಕಾಂಗ್ರೆಸ್19, ಸಿಪಿಐ (ಎಂಎಲ್) 11, ಸಿಪಿಐ (ಎಂ) 2 ಮತ್ತು ಸಿಪಿಐ 2 ಶಾಸಕರನ್ನು ಹೊಂದಿದೆ.

## ಪಾಕಿಸ್ತಾನದಲ್ಲಿ ಬರೋಬ್ಬರಿ 8 ಬಾಂಬ್ ಬ್ಲಾಸ್ಟ್; ಮಹಿಳೆಯರು ಮತ್ತು ಮಕ್ಕಳು ಸೇರಿ 30ಕ್ಕೂ ಹೆಚ್ಚು ಜನ ಬಲಿ

**ಇಸ್ಲಮಾಬಾದ್:** ಪಾಕಿಸ್ತಾನದ ಖೈಬರ್ ಪಖ್ತುಂಖ್ವಾದ ( ತಿರಾಹ್ ಕಣಿವೆಯ ಸೋಮವಾರ ಮುಂಜಾನೆ ಪಾಕಿಸ್ತಾನ ವಾಯುಪಡೆ ನಡೆಸಿದ ವೈಮಾನಿಕ ದಾಳಿಯಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿ ಕನಿಷ್ಠ 30 ನಾಗರಿಕರು ಮೃತಪಟ್ಟಿದ್ದಾರೆ. ತೆಹ್ರೀಕ್-ಇ-ತಾಲಿಬಾನ್ ಪಾಕಿಸ್ತಾನ ಉಗ್ರರನ್ನು ಗುರಿಯಾಗಿಸಿರುವುದಾಗಿ ಹೇಳಲಾಗಿದೆ. ಆದರೆ, ಸ್ಥಳೀಯರು ಮತ್ತು ಪ್ರತ್ಯಕ್ಷದರ್ಶಿಗಳು ಈ ದಾಳಿಯನ್ನು ''ನಾಗರಿಕರ ಹತ್ಯಾಕಾಂಡ'' ಎಂದು ಕರೆದಿದ್ದಾರೆ.

ಗುಪ್ತಚರ ಮೂಲಗಳ ಪ್ರಕಾರ, ಮುಂಜಾನೆ 2 ಗಂಟೆ ಸುಮಾರಿಗೆ GD&17 ಥಂಡರ್ ಯುದ್ಧ ವಿಮಾನಗಳು ಎಂಟು ಬಾಂಬ್‌ಗಳನ್ನು ಎಸೆದಿದ್ದು. ಈ ದಾಳಿಯಿಂದ ನಾಗರಿಕ ವಸತಿ ಪ್ರದೇಶಗಳು ಧ್ವಂಸಗೊಂಡವು. ಮನೆಗಳು ಕುಸಿದು, ಹಲವು ಜನರು ಅವಶೇಷಗಳಡಿ ಸಿಕ್ಕಿಹಾಕಿಕೊಂಡಿದ್ದಾರೆ. ''ಬೆಳಗಿನ ಜಾವದ ವೇಳೆಗೆ ಗ್ರಾಮವೆಲ್ಲ ಶವಗಳಿಂದ ತುಂಬಿತ್ತು, ಜಾನುವಾರುಗಳು ನಾಶವಾದವು'' ಎಂದು ಸ್ಥಳೀಯರು ವಿವರಿಸಿದ್ದಾರೆ. ಗುಪ್ತಚರ ವಿಶ್ಲೇಷಕರು, "IT-6 ಬಾಂಬ್‌ಗಳ ಬಳಕೆಯು ಉದ್ದೇಶಿತ ದಾಳಿಯನ್ನು ಸೂಚಿಸುತ್ತದೆ, ಇದು ಆಕಸ್ಮಿಕ ಹಾನಿಯಲ್ಲ'' ಎಂದಿದ್ದಾರೆ. ಈ ಕೃತ್ಯವು ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಉಲ್ಲಂಘನೆಯಾಗಿದೆ . ''ಇಸ್ಲಾಮಾಬಾದ್ ಆಂತರಿಕ ದಮನಕ್ಕೆ ಉಗ್ರ ನಿಗ್ರಹದ ಹೆಸರಿನಲ್ಲಿ ಕಾರ್ಯಾಚರಣೆಯನ್ನು ದುರುಪಯೋಗ ಮಾಡುತ್ತಿದೆ'' ಎಂದು ಮೂಲಗಳು ತಿಳಿಸಿವೆ. ದಾಳಿಯು ಪಶ್ತೂನ್ ಜನರ ವಿರುದ್ಧದ ವ್ಯವಸ್ಥಿತ ಕಾರ್ಯಾಚರಣೆಯ ಭಾಗವಾಗಿರಬಹುದು ಎಂದು ಶಂಕಿಸಲಾಗಿದೆ. ತಿರಾಹ್‌ನ ಅಕಾಖೇಲ್



ಬುಡಕಟ್ಟಿನವರು ಜಿರ್ಗಾ (ಬುಡಕಟ್ಟು ಸಭೆ) ಸೇರಿ, ಮಹಿಳೆಯರ ಶವಗಳನ್ನು ಸಮಾಧಿ ಮಾಡಲು, ಆದರೆ ಪುರುಷರು ಮತ್ತು ಮಕ್ಕಳ ಶವಗಳನ್ನು ಕಾರ್ಪ್ಸ್ ಕಮಾಂಡರ್‌ನ ಮನೆ ಮುಂದೆ ಇಟ್ಟು ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ.

ಖೈಬರ್ ಚೌಕ್‌ನಲ್ಲಿ ಈಗಾಗಲೇ ಧರಣಿ ಆರಂಭವಾಗಿದ್ದು, ''ನಾಗರಿಕರನ್ನು ಕೊಂದು ಉಗ್ರ ನಿಗ್ರಹದ ಹೆಸರಿನಲ್ಲಿ ಅಪರಾಧ ಮಾಡಲಾಗುತ್ತಿದೆ'' ಎಂದು ಆರೋಪಿಸಲಾಗಿದೆ.

ಪಾಕ್ ಸೇನೆಯು ದಾಳಿಯ ಜವಾಬ್ದಾರಿಯನ್ನು ನಿರಾಕರಿಸಿದ್ದು, ''ಖವಾರಿಜ್ ಉಗ್ರರ ದೊಡ್ಡ ಸ್ಫೋಟಕ ಸಂಗ್ರಹವು ಆಕಸ್ಮಿಕವಾಗಿ ಸ್ಫೋಟಗೊಂಡಿತು'' ಎಂದು ಹೇಳಿದೆ.

## ತಿರುಪತಿ ದೇವಸ್ಥಾನದ ಹುಂಡಿಯಲ್ಲಿ 100 ಕೋಟಿ ಹಣ ಕಳ್ಳತನ

**ತಿರುಪತಿ:** ಮಾಜಿ ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ ನೇತೃತ್ವದ ವೈಎಸ್ಆರ್‌ಪಿ ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ತಿರುಪತಿ ದೇವಸ್ಥಾನದ ಪರಕಾಮಣಿ (ಹುಂಡಿಯಲ್ಲಿ ಭಕ್ತರು ಹಾಕಿದ್ದ) 100 ಕೋಟಿಗೂ ಅಧಿಕ ಹಣ ಕಳ್ಳತನವಾಗಿದೆ ಎಂದು ಬಿಜೆಪಿ ಮುಖಂಡರೊಬ್ಬರು ಆರೋಪಿಸಿದ್ದಾರೆ. ತಿರುಮಲ ತಿರುಪತಿ ದೇವಸ್ತಾನಂ(ಟಿಟಿಡಿ) ಸದಸ್ಯರೂ ಆಗಿರುವ ಬಜೆಪಿ ಮುಖಂಡ ಭಾನುಪ್ರಕಾಶ್ ರೆಡ್ಡಿ, ದೇವಸ್ಥಾನದ ಸಿಬ್ಬಂದಿ ರವಿಕುಮಾರ್ ಕಾಣಿಕೆ ಪೆಟ್ಟಿಗೆಯಿಂದ ಹಣ ಕದ್ದಿದ್ದಾರೆ ಎಂದು ಆರೋಪಿಸಿದ್ದು, ಈ ಸಂಬಂಧ ಸಿಸಿಟಿವಿ ದೃಶ್ಯಾವಳಿಗಳನ್ನು ಬಿಡುಗಡೆ ಮಾಡಿದ್ದಾರೆ.

ಲೂಟಿ ಮಾಡಿದ ಹಣವನ್ನು ಬಳಸಿಕೊಂಡು ರಿಯಲ್ ಎಸ್ಟೇಟ್‌ಲ್ಲಿ ಕೋಟ್ಯಂತರ ರೂ. ಹೂಡಿಕೆ ಮಾಡಲಾಗಿದೆ. ಅಕ್ರಮ ಹಣವನ್ನು ಜಗನ್‌ರೆಡ್ಡಿ ಅವರ ಮನೆ, ತಾಡೆಪಲ್ಲಿ ಪ್ಯಾಲೇಸ್‌ಗೆ ವರ್ಗಾಯಿಸಲಾಗಿದೆ ಎಂದು ಆರೋಪಿಸಲಾದೆ. 2019ರಿಂದ 2024ರವರೆಗೆ ವೈಎಸ್‌ಆರ್‌ಪಿ ಆಡಳಿತದಲ್ಲಿ ಟಿಟಿಡಿಯ ಇತಿಹಾಸದಲ್ಲಿ ಅತ್ಯಧಿಕ 100 ಕೋಟಿ ರೂ. ಲೂಟಿ ಮಾಡಲಾಗಿದೆ ಎಂದು ಆರೋಪಿಸಿದ್ದಾರೆ.

ಬಿಜೆಪಿ ನೇತೃತ್ವದ ಎನ್‌ಡಿಎಗೆ ಸೇರಿರುವ ಟಿಡಿಪಿ ನಾಯಕ ನಾರಾ ಲೋಕೇಶ್ ತಮ ಎಕ್ಸ್ ಖಾತೆಯಲ್ಲಿ ಲೂಟಿ ತೋರಿಸುತ್ತಿರುವ ಸಿಸಿಟಿವಿ ದೃಶ್ಯಗಳನ್ನು ಹಂಚಿಕೊಂಡಿದ್ದಾರೆ. ವೈಎಸ್‌ಆರ್‌ಪಿ ಆಡಳಿತದಲ್ಲಿ ಭಕ್ತರು ಕಾಣಿಕೆಯಾಗಿ ಹುಂಡಿಗೆ ಹಾಕಿದ್ದ ಹಣವನ್ನು ಲೂಟಿ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ. ಹೈಕೋರ್ಟ್ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಿದ್ದು, ಒಂದು ತಿಂಗಳೊಳಗೆ ತನಿಖೆ ಮತ್ತು ಮುಚ್ಚಿದ ಕವರ್ ವರದಿಯನ್ನು ಆದೇಶಿಸಿದೆ. ಮಂಡಳಿಯ ನಿರ್ಧಾರಗಳು ಮತ್ತು ಸಂಬಂಧಿತ ದಾಖಲೆಗಳನ್ನು ವಶಪಡಿಸಿಕೊಳ್ಳುವಂತೆ ಸೂಚಿಸಲಾಗಿದೆ ಎಂದು



## ಪ್ಯಾಲೆಸ್ಟೈನ್‌ಗೆ 'ರಾಷ್ಟ್ರ' ಮಾನ್ಯತೆ ಯುಕೆ, ಆಸ್ಟ್ರೇಲಿಯಾ, ಕೆನಡಾ ಬೆಂಬಲ

**ನವದೆಹಲಿ:** ಮಹತ್ವದ ಬೆಳವಣಿಗೆಯಲ್ಲಿ ಯುನೈಟೆಡ್ ಕಿಂಗ್‌ಡಮ್, ಕೆನಡಾ ಮತ್ತು ಆಸ್ಟ್ರೇಲಿಯಾ ದೇಶಗಳು ಪ್ಯಾಲೆಸ್ಟೈನ್ ಅನ್ನು ರಾಷ್ಟ್ರವಾಗಿ ಔಪಚಾರಿಕವಾಗಿ ಗುರುತಿಸಿವೆ.

ಬ್ರಿಟಿಷ್ ಪ್ರಧಾನಿ ಕೀರ್ ಸ್ಟಾರ್ಮರ್ ವಿಡಿಯೋ ಹೇಳಿಕೆಯಲ್ಲಿ ಯುನೈಟೆಡ್ ಕಿಂಗ್‌ಡಮ್ ಪ್ಯಾಲೆಸ್ಟೈನ್ ರಾಜ್ಯವನ್ನು ಔಪಚಾರಿಕವಾಗಿ ಗುರುತಿಸುತ್ತಿದೆ ಎಂದು ಘೋಷಿಸಿದರು. ಈ ಕ್ರಮವನ್ನು ಶಾಂತಿ ಮತ್ತು ಎರಡು-ರಾಜ್ಯ ಪರಿಹಾರಕ್ಕಾಗಿ ಭರವಸೆಯನ್ನು ಪುನರುಜ್ಜೀವನಗೊಳಿಸುವತ್ತ ಒಂದು ಹೆಜ್ಜೆ ಎಂದು ಅವರು ವಿವರಿಸಿದರು.

ಇನ್ನು ಕೆನಡಾ ದೇಶ ಕೂಡ ದಿನದ ಆರಂಭದಲ್ಲಿ ರಾಜತಾಂತ್ರಿಕ ಕ್ರಮವನ್ನು ಮುನ್ನಡೆಸಿದ್ದು, ಪ್ಯಾಲೆಸ್ಟೈನ್ ರಾಷ್ಟ್ರವನ್ನು ಔಪಚಾರಿಕವಾಗಿ ಗುರುತಿಸಿದ ಮೊದಲ E7 ರಾಷ್ಟ್ರವಾಯಿತು. ಪ್ರಧಾನಿ ಮಾರ್ಕ್ ಕಾರ್ನಿ ತಮ್ಮ ದೇಶದ ಶಾಂತಿಗೆ ಬದ್ಧತೆಯನ್ನು ಒತ್ತಿ ಹೇಳಿದರು, ಪ್ಯಾಲೆಸ್ಟೈನ್ ಮತ್ತು ಇಸ್ರೇಲ್ ಎರಡಕ್ಕೂ ಶಾಂತಿಯುತ ಭವಿಷ್ಯವನ್ನು ನಿರ್ಮಿಸುವಲ್ಲಿ ಕೆನಡಾ ತನ್ನ ಪಾಲುದಾರಿಕೆಯನ್ನು ನೀಡುತ್ತಿದೆ ಎಂದು ಅವರು ಘೋಷಣೆ ಮಾಡಿದರು. ಪ್ಯಾಲೆಸ್ಟೈನ್ ಹಿಂಸಾಚಾರವನ್ನು ತಿರಸ್ಕರಿಸುವುದು ಮತ್ತು ಶಾಂತಿಯುತ ಸಹಬಾಳ್ವೆಗೆ ಅದರ ಬೆಂಬಲವು ನಿರ್ಧಾರದ ಕೇಂದ್ರಬಿಂದುವಾಗಿದೆ ಎಂದು ಕೆನಡಾದ ಅಧಿಕಾರಿಗಳು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಬೆಳವಣಿಗೆ ಬೆನ್ನಲ್ಲೇ ಇತ್ತ ಆಸ್ಟ್ರೇಲಿಯಾ ಕೂಡ ಯುಕೆ ಮತ್ತು ಕೆನಡಾ ದೇಶಗಳನ್ನು ಅನುಸರಿಸಿದ್ದು, ಆಸಿಸ್ ಸರ್ಕಾರ ಕೂಡ ಪ್ಯಾಲೆಸ್ತೀನ್ ರಾಷ್ಟ್ರಕ್ಕೆ ಔಪಚಾರಿಕ ಮಾನ್ಯತೆ ನೀಡಿರುವುದಾಗಿ ಹೇಳಿದೆ. ಆಸಿಸ್ ಪ್ರಧಾನಿ ಆಂಥೋನಿ ಅಲ್ಬನೀಸ್ ಮತ್ತು ವಿದೇಶಾಂಗ ಸಚಿವ ಪೆನ್ನಿ ವಾಂಗ್ ಜಂಟಿ ಹೇಳಿಕೆಯನ್ನು ನೀಡಿ ಪ್ಯಾಲೆಸ್ಟೈನ್ ಅನ್ನು ಸ್ವತಂತ್ರ ಮತ್ತು ಸಾರ್ವಭೌಮ ರಾಷ್ಟ್ರವೆಂದು ಗುರುತಿಸುವುದನ್ನು ದೃಢಪಡಿಸಿದರು.

## ಮಿನಿ ನ್ಯೂಸ್

### 1 ವರ್ಷದ ವೈವಾಹಿಕ ಜೀವನ ಕೊನೆಗೊಳಿಸಲು 5 ಕೋಟಿ ರೂ. ಜೀವನಾಂಶ ಕೇಳಿದ ಮಹಿಳೆ

**ದೆಹಲಿ:** ಕೇವಲ 1 ವರ್ಷದ ವೈವಾಹಿಕ ಜೀವನವನ್ನು ಕೊನೆಗೊಳಿಸಲು 5 ಕೋಟಿ ರೂ. ಜೀವನಾಂಶ ಕೇಳಿದ ಮಹಿಳೆಯೊಬ್ಬರನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಈ ಬೇಡಿಕೆ ಅತಿಯಾಯ್ತು ಎಂದು ಹೇಳಿದೆ. ನ್ಯಾಯಮೂರ್ತಿ ಜೆ.ಬಿ. ಪಾರ್ದಿವಾಲಾ ನೇತೃತ್ವದ ಪೀಠವು ಎರಡೂ ಕಡೆಯವರು ಅಕ್ಟೋಬರ್ 5 ರಂದು ಮತ್ತೊಂದು ಸುತ್ತಿನ ಚರ್ಚೆಗಾಗಿ ಸುಪ್ರೀಂ ಕೋರ್ಟ್ ಮಧ್ಯಸ್ಥಿಕೆ ಕೇಂದ್ರಕ್ಕೆ ಭೇಟಿ ನೀಡುವಂತೆ ನಿರ್ದೇಶಿಸಿದೆ. ಸದ್ಯ ಈ ಪ್ರಕರಣ ದೇಶಾದ್ಯಂತ ಚರ್ಚೆಗೆ ಕಾರಣವಾಗಿದ್ದು, ಕಾನೂನು ದುರುಪಯೋಗದ ಎಚ್ಚರಿಕೆ ನೀಡಿದೆ.

ಪತ್ನಿಯ ನಿಲುವು ಹೀಗಿದ್ದರೆ ಆಕೆಗೆ ಇಷ್ಟವಾಗದ ಕೆಲವು ಆದೇಶಗಳನ್ನು ನಾವು ಹೊರಡಿಸಬೇಕಾಗುತ್ತದೆ. ಅವರು ಸಮಂಜಸವಾದ ಬೇಡಿಕೆಯನ್ನು ಮುಂದಿಟ್ಟು ಈ ಮೊಕದ್ದಮೆಯನ್ನು ಕೊನೆಗೊಳಿಸುತ್ತಾರೆ ಎಂದು ನಾವು ನಿರೀಕ್ಷಿಸುತ್ತೇವೆ ಎಂಬುದಾಗಿ ವಿಚಾರಣೆಯ ಸಮಯದಲ್ಲಿ ನ್ಯಾಯಮೂರ್ತಿ ಪಾರ್ದಿವಾಲಾ ತಿಳಿಸಿದರು. ಮದುವೆಯು ಕೇವಲ ಒಂದು ವರ್ಷ ಮಾತ್ರ ಆಗಿರುವುದನ್ನು ಗಮನಿಸಿದ ನ್ಯಾಯಪೀಠ ಈ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿತು.

### ಶಬರಿಮಲೆಯಲ್ಲಿ ಚಿನ್ನ ನಾಪತ್ತೆ ಪ್ರಕರಣಕ್ಕೆ ಬಿಗ್ ಟ್ವಿಸ್ಟ್; ಕಳುವಾಗಿದ್ದ ಸಂಪತ್ತು ದೇವಸ್ಥಾನಕ್ಕೆ ವಾಪಸ್

**ತಿರುವನಂತಪುರಂ:** ಶಬರಿಮಲೆ ಅಯ್ಯಪ್ಪ ಸ್ವಾಮಿ ದೇಗುಲದಲ್ಲಿ ಚಿನ್ನ ಕಳ್ಳತನದ ಬಗ್ಗೆ ಚರ್ಚೆ ಜೋರಾಗಿದ್ದು, ದುರಸ್ತಿಗೆಂದು ಕೊಂಡೊಯ್ಯಲಾಗಿದ್ದ ವಿಗ್ರಹದ ಕವಚಗಳನ್ನು ಸೆಪ್ಟೆಂಬರ್ 21ರಂದು ಪವಿತ್ರ ಕ್ಷೇತ್ರಕ್ಕೆ ವಾಪಸ್ ತರಲಾಗಿದೆ. ತಿರುವಾಂಕೂರು ದೇವಸ್ವಂ ಮಂಡಳಿ ಪ್ರಕಾರ, ಸೆಪ್ಟೆಂಬರ್ 8ರಂದು ಈ ಕವಚಗಳನ್ನು ಚೆನ್ನೈನ ಸ್ಮಾರ್ಟ್ ಕ್ರಿಯೇಷನ್ಸ್‌ಗೆ ದುರಸ್ತಿಗಾಗಿ ಕೊಂಡೊಯ್ಯಲಾಗಿತ್ತು. ಸೆಪ್ಟೆಂಬರ್ 21ರಂದು ಇವುಗಳನ್ನು ಪವಿತ್ರ ಕ್ಷೇತ್ರಕ್ಕೆ ವಾಪಸ್ ತರಲಾಯಿತು. ಈ ಕಾರ್ಯಾಚರಣೆಯನ್ನು ತಿರುವಾಭರಣ ಕಮಿಷನರ್ ನೇತೃತ್ವದಲ್ಲಿ, ಶಬರಿಮಲೆ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ, ದೇವಸ್ವಂ ಕಮ್ಮಾರ, ದೇವಸ್ವಂ ಗಾರ್ಡ್ ಮತ್ತು ದೇವಸ್ವಂ ವಿಜಿಲೆನ್ಸ್ ಸಬ್-ಇನ್ಸ್‌ಪೆಕ್ಟರ್‌ನೊಂದಿಗೆ ನಡೆಸಲಾಯಿತು. ಈ ಕವಚಗಳನ್ನು ಈಗ ಸನ್ನಿಧಾನದ ದೇವಸ್ವಂ ಭದ್ರಕೊಠಡಿಯಲ್ಲಿ ಇರಿಸಲಾಗಿದ್ದು, ತಂತ್ರಿಯ ಅನುಮತಿಯೊಂದಿಗೆ ಶುದ್ಧೀಕರಣ ಆಚರಣೆಯ ನಂತರ ದ್ವಾರಪಾಲಕರ ವಿಗ್ರಹಗಳಿಗೆ ಮತ್ತೆ ಅಳವಡಿಸಲಾಗುವುದು. ಕೇರಳ ಹೈಕೋರ್ಟ್, ಈ ಕವಚಗಳನ್ನು ತೆಗೆದುಕೊಂಡು ಚೆನ್ನೈಗೆ ಕೊಂಡೊಯ್ಯಲಾಗಿದ್ದು ತನ್ನ ಅನುಮತಿಯಿಲ್ಲದೆ ನಡೆದಿದೆ.

### ಕೊಲೆ ಪ್ರಕರಣದ ದೋಷಿಗೆ ಬೇವಿನ ಗಿಡ ನೆಟ್ಟು ಪೋಷಿಸುವ ಶಿಕ್ಷೆ ವಿಧಿಸಿದ ಹೈಕೋರ್ಟ್

**ಭೋಪಾಲ್:** ಜೀವಾವಧಿ ಶಿಕ್ಷೆಯನ್ನು ವಜಾಗೊಳಿಸುವಂತೆ ಕೊಲೆ ಅಪರಾಧಿಯೊಬ್ಬ ಮಧ್ಯಪ್ರದೇಶ ಹೈಕೋರ್ಟ್ ಗೆ ಮನವಿ ಮಾಡಿದ್ದು, ಅವನ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಾಲಯ ಹಿಂಸಾಚಾರ ವಿರೋಧಿ ಭಾವನೆಯನ್ನು ಬೆಳೆಸಿಕೊಳ್ಳಲು ಸಲಹೆ ನೀಡಿತು. 10 ಬೇವು ಮತ್ತು ಅರಳಿ ಸಸಿಗಳನ್ನು ನೆಟ್ಟು ಪೋಷಿಸುವಂತೆ ನಿರ್ದೇಶನ ನೀಡಿದ ನ್ಯಾಯಾಲಯ ಜಾಮೀನಿನ ಆಧಾರದ ಮೇಲೆ ಬಿಡುಗಡೆ ಮಾಡಲು ಒಪ್ಪಿಗೆ ಸೂಚಿಸಿದೆ.

2021ರಲ್ಲಿ ವಿಚಾರಣಾ ನ್ಯಾಯಾಲಯವು ಮಹೇಶ್ ಶರ್ಮಾ ಎಂಬಾತನಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು.ಜೀವಾವಧಿ ಶಿಕ್ಷೆ ವಜಾಗೊಳಿಸುವಂತೆ ಮಹೇಶ್ ಶರ್ಮಾ ಮಧ್ಯಪ್ರದೇಶ ಹೈಕೋರ್ಟ್ ಮೊರೆ ಹೋಗಿದ್ದು, 50 ಸಾವಿರ ರೂ. ಬಾಂಡ್ ಮತ್ತು ಇಬ್ಬರು ಶ್ಯೂರಿಟಿಗಳನ್ನು ಒದಗಿಸಬೇಕು. ಅಗತ್ಯವಿದ್ದಾಗ ನ್ಯಾಯಾಲಯದ ರಿಜಿಸ್ಟ್ರಾರ್ ಮುಂದೆ ಹಾಜರಾಗಬೇಕು ಎಂದು ಷರತ್ತು ವಿಧಿಸಿ ಆತನಿಗೆ ಜಾಮೀನು ನೀಡಿದೆ. ತನ್ನ ಆದೇಶದಲ್ಲಿ ತಿಳಿಸಿದೆ.

ನ್ಯಾಯಮೂರ್ತಿಗಳಾದ ಆನಂದ್ ಪಾಠಕ್ ಮತ್ತು ಪುಷ್ಪೇಂದ್ರ ಯಾದವ್ ಅವರ ವಿಭಾಗೀಯ ಪೀಠವು, ಹಿಂಸೆ ಮತ್ತು ದುಷ್ಟತನದ ಕಲ್ಪನೆಯನ್ನು ಸೃಷ್ಟಿ ಮತ್ತು ಪ್ರಕೃತಿಯೊಂದಿಗೆ ಸಾಮರಸ್ಯ ಸಾಧಿಸುವುದರಿಂದ ಎದುರಿಸಬಹುದು ಎಂದು ಅಭಿಪ್ರಾಯಪಟ್ಟಿದೆ.

### ಡಿವೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕಾರು ಜಖಂ

**ಮುಂಬೈ:** ಐಷಾರಾಮಿ ಲ್ಯಾಂಬೋರ್ಘಿನಿ ಕಾರೊಂದು ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಜಖಂಗೊಂಡ ಘಟನೆ ಮುಂಬೈನಲ್ಲಿ ನಡೆದಿದೆ. ಕಾರು ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಮಳೆ ಬರುತ್ತಿರುವ ಸಮಯದಲ್ಲಿ ಈ ಅಪಘಾತ ಸಂಭವಿಸಿದೆ. ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿರುವ ವಿಡಿಯೋದಲ್ಲಿ ಘಟನೆಯ ನಂತರದ ದೃಶ್ಯಾವಳಿಗಳನ್ನು ತೋರಿಸಲಾಗಿದೆ.

ಈ ವಿಡಿಯೋದಲ್ಲಿ ಕಿತ್ತಳೆ ಬಣ್ಣದ ಲ್ಯಾಂಬೋರ್ಘಿನಿ ಕಾರು ಜಖಂಗೊಂಡ ಸ್ಥಿತಿಯಲ್ಲಿರುವುದನ್ನು ಕಾಣಬಹುದಾಗಿದೆ. ಅಪಘಾತ ಸಂಭವಿಸುವ ಕೆಲವು ಕ್ಷಣಗಳ ಮೊದಲು, ನಿಯಂತ್ರಣ ತಪ್ಪಿದ ಕಾರು ಕೂಡ ವಿಡಿಯೊದಲ್ಲಿ ಸೆರೆಯಾಗಿದೆ. ಐಷಾರಾಮಿ ಕಾರಿನ ಮುಂಭಾಗಕ್ಕೆ ಗಮನಾರ್ಹ ಹಾನಿಯಾಗಿದ್ದು, ಬಂಪರ್ ಮತ್ತು ಹುಡ್ ಜಖಂಗೊಂಡಿದೆ. ಮುಂಭಾಗದ ಟ್ರಂಕ್ ತೆರೆದಿರುವುದನ್ನು ವಿಡಿಯೋದಲ್ಲಿ ಕಾಣಬಹುದು. ಇದು ಕಾರಿಗೆ ಎಷ್ಟು ಹಾನಿಯಾಗಿದೆ ಎಂಬುದನ್ನು ತೋರಿಸುತ್ತದೆ. ಹಲವಾರು ಮಂದಿ ಕಾರಿನ ಸುತ್ತಲೂ ನಿಂತಿರುವುದು ಕಂಡುಬಂದಿದೆ. ಮಾಹಿತಿ ಪಡೆದ ಪೊಲೀಸರು ಕೂಡಲೇ ಸ್ಥಳಕ್ಕೆ ತಲುಪಿದ್ದು, ಇಲ್ಲಿಯವರೆಗೆ ಯಾವುದೇ ಗಾಯಗಳ ಬಗ್ಗೆ ವರದಿಯಾಗಿಲ್ಲ.

### ಉತ್ತರ ಪ್ರದೇಶ: ಕೆಟ್ಟು ನಿಂತಿದ್ದ ಎಸ್‌ಯುವಿಗೆ ವಾಹನ ಡಿಕ್ಕಿ; ನಾಲ್ವರು ಸಾವು

**ಪ್ರಯಾಗರಾಜ್:** ಕಾನ್ಪುರ-ವಾರಣಾಸಿ ಹೆದ್ದಾರಿಯಲ್ಲಿ ಸೋಮವಾರ ಅಪರಿಚಿತ ವಾಹನವೊಂದು, ಕೆಟ್ಟು ನಿಂತಿದ್ದ ಎಸ್‌ಯುವಿ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಕನಿಷ್ಠ ನಾಲ್ವರು ಸಾವನ್ನಪ್ಪಿದ್ದಾರೆ ಮತ್ತು ಮೂವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಗಂಗಾ ನಗರ ಪ್ರದೇಶದ ಬಿಗಾಹಿಯಾ ಗ್ರಾಮದ ಬಳಿ ಈ ಭೀಕರ ಅಪಘಾತ ಸಂಭವಿಸಿದೆ ಎಂದು ಉಪ ಪೊಲೀಸ್ ಆಯುಕ್ತ (ಗಂಗಾ ನಗರ) ಕುಲದೀಪ್ ಗುಣವತ್ ಅವರು ಪಿಟಿಐಗೆ ತಿಳಿಸಿದ್ದಾರೆ.

ಎಸ್‌ಯುವಿ ಕೆಟ್ಟು ರಸ್ತೆಬದಿಯಲ್ಲಿ ನಿಂತಿತ್ತು. ಅದರಲ್ಲಿದ್ದ ನಾಲ್ವರು ಪ್ರಯಾಣಿಕರು ಕಾರಿನ ಮುಂದೆ ಮಲಗಿದ್ದರು ಮತ್ತು ಮೂವರು ಮಹಿಳೆಯರು ಒಳಗೆ ವಿಶ್ರಾಂತಿ ಪಡೆಯುತ್ತಿದ್ದರು. ಪ್ರದೇಶದ ಬಿಗಾಹಿಯಾ ಗ್ರಾಮದ ಬಳಿ ಮೃತರನ್ನು ಕಾನ್ಪುರ ನಿವಾಸಿಗಳಾದ ಸುರೇಶ್ ಸೈನಿ, ಸುರೇಶ್ ಬಾಜ್‌ಪೈ, ಅವರ ಪತ್ನಿ ಮತ್ತು ರಾಮಸಾಗರ್ ಅವಸ್ಥಿ ಎಂದು ಗುರುತಿಸಲಾಗಿದೆ ಎಂದು ಗುಣವತ್ ಹೇಳಿದ್ದಾರೆ.

# ಧ್ರುವ ಸರ್ಜಾ ಜೀವನದ ಜಂಬೂ ಸವಾರಿ ಸೆ.27ಕ್ಕೆ ಉದಯ ಟಿವಿಯಲ್ಲಿ ಪ್ರಸಾರ



ಉದಯ ಟಿವಿಯಲ್ಲಿ ದಸರಾ ಹಬ್ಬದ ಪ್ರಯುಕ್ತ ಸೆಪ್ಟೆಂಬರ್ 27 ಶನಿವಾರ ಸಂಜೆ 6 ಗಂಟೆಗೆ ಧ್ರುವ ಸರ್ಜಾ ಜೊತೆ ವಿಶೇಷ ಕಾರ್ಯಕ್ರಮ ಧ್ರುವ ದಸರಾ ಪ್ರಸಾರವಾಗಲಿದೆ. ಭರ್ಜರಿ ಸೆಟ್‌ನಲ್ಲಿ ಚಿತ್ರರಂಗದ ಪ್ರಮುಖ ತಾರೆಯರ ಉಪಸ್ಥಿತಿಯಲ್ಲಿ ಅದ್ದೂರಿಯಾಗಿ ಚಿತ್ರೀಕರಣಗೊಂಡಿರುವ ಧ್ರುವ ದಸರಾ ಆಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಸಿನಿಮಾ ಪಯಣ ಮತ್ತು ಬಾಲ್ಯದಿಂದ ಇಲ್ಲಿಯವರೆಗಿನ ಜೀವನದ ಝಲಕ್ ಕೂಡ ಹೌದು.

ಧ್ರುವ ದಸಾರದ ಒಂದು ವಿಶೇಷ ಅಂದ್ರೆ, ಧ್ರುವ ಅವರಿಗೆ ಗೊತ್ತಿರದೇ ಹಲವು ವಿಶೇಷ ವ್ಯಕ್ತಿಗಳು ಆಗಮಿಸಿ ಅವರಿಗೆ ಅಚ್ಚರಿ ಮೂಡಿಸಿದರು. ಆಗ ಧ್ರುವ ಸರ್ಜಾ ಇವರ ಜೊತೆ ಕಳೆದ ಬಹಳ ಅಪರೂಪದ ವಿಷಯಗಳನ್ನು ಹಂಚಿಕೊಂಡಿದ್ದಾರೆ. ಬಹಳಷ್ಟು ಕುತೂಹಲಕರ ಘಟನೆಗಳು, ಭಾವನಾತ್ಮಕ ವಿಷಯಗಳು ಇಲ್ಲಿವೆ. ಕಿಕ್ಕಿರಿದು ನೆರೆದಿದ್ದ ಅಭಿಮಾನಿಗಳ ಜೈಕಾರದ ನಡುವೆ ತಮ್ಮ ಕೆಡಿ ಚಿತ್ರದ ಹಾಡಿನೊಂದಿಗೆ ಧ್ರುವ ಎಂಟ್ರಿ ಕೊಟ್ಟಿದ್ದು ವಿಶೇಷ. ತಾನು ಸುಪರ್ ಸ್ಟಾರ್ ಎನ್ನಿಸಿಕೊಳ್ಳಲು ಇಷ್ಟಪಡುವುದಿಲ್ಲ. ತಾನೊಬ್ಬ ನಟ ಮಾತ್ರ ಎಂದು ವಿನಯದಿಂದ ಹೇಳಿದ ಧ್ರುವ ಸರ್ಜಾ ಅಭಿಮಾನಿಗಳಿಗಾಗಿ ಇನ್ನು ಮುಂದೆ ಪ್ರತಿವರ್ಷ ಕನಿಷ್ಟ ಎರಡು ಚಿತ್ರಗಳಲ್ಲಿ ನಟಿಸುವುದಾಗಿ ಘೋಷಿಸಿದರು.

ಚಿರಂಜೀವಿ ಸರ್ಜಾ ಪತ್ನಿ ಮೇಘನಾ ರಾಜ್ ಆಕಸ್ಮಿಕವಾಗಿ ವೇದಿಕೆಗೆ ಆಗಮಿಸಿ ಧ್ರುವ ಅವರಿಗೆ ಅಚ್ಚರಿ ಮೂಡಿಸಿದರು.

ಅತ್ತಿಗೆಯನ್ನು ತಾಯಿಯಂತೆ ಕಾಣುವ ಧ್ರುವ ಅಣ್ಣನನ್ನು ನೆನೆದು ಭಾವುಕರಾದರು. ಮನೆಗೆ ಬಂದಾಗ ತಮ್ಮ ಮಗ ರಾಯನ್ ಜೊತೆ ಧ್ರುವ ಮಗುವಾಗಿ ಇರುವ ರೀತಿಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದರು ಮೇಘನಾ ರಾಜ್. ಧ್ರುವ ಸರ್ಜಾ ತಮ್ಮ ಪತ್ನಿ ಪ್ರೇರಣಾ ಬಗೆಗೆ ಹೇಳಬೇಕಾದ್ರೆ ಹಿಂದಿನಿಂದ ವೇದಿಕೆಗೆ ಅವರೇ ಸ್ವತಃ ಬಂದಿದ್ದು ಇವರಿಗೆ ಆಶ್ಚರ್ಯ ಉಂಟುಮಾಡಿತು.

ಪ್ರೇರಣಾ, ಟಿವಿ ಕಾರ್ಯಕ್ರಮವೊಂದರಲ್ಲಿ ಮೊಟ್ಟಮೊದಲ ಬಾರಿ ಕಾಣಿಸಿಕೊಂಡಿದ್ದು ಧ್ರುವ ದಸರಾ ವಿಶೇಷಗಳಲ್ಲೊಂದು. ಇದೇ ಸಂದರ್ಭದಲ್ಲಿ ತಮ್ಮ ಹಾಗೂ ಧ್ರುವ ನಡುವಿನ ಪ್ರೇಮಲೋಕದ ದಿನಗಳನ್ನು ಮೆಲುಕು ಹಾಕಿದರು. ಅವರು ಧ್ರುವರಿಗೆ ಪ್ರೇಮ ಪ್ರಸ್ತಾಪ ಮಾಡಿದ್ದನ್ನು ಮರುಸೃಷ್ಟಿಸಲಾಯಿತು.

ಕೇಕ್ ಕತ್ತರಿಸುವ ಮೂಲಕ ಮುಂಗಡವಾಗಿ ಧ್ರುವ ಸರ್ಜಾ ಹುಟ್ಟುಹಬ್ಬ ಆಚರಿಸಲಾಯಿತು. ಕಲಾವಿದ, ಚಿಕ್ಕಪ್ಪ ಅರ್ಜುನ್ ಸರ್ಜಾ ಅವರು ವಿಡಿಯೋ ಮುಖಾಂತರ ಶುಭ ಕೋರಿದರು. ಧ್ರುವ ಅವರ ನಿಷ್ಠೆ, ಕಠಿಣ ಪರಿಶ್ರಮ, ನಟನಾ ಚಾತುರ್ಯದ ಬಗ್ಗೆ ವಿವರಿಸಿದರು.

# ಹಾಲಿವುಡ್‌ಗೆ ಹಾರಿದ್ರಾ ದೀಪಿಕಾ ಪಡುಕೋಣೆ



ಬಾಲಿವುಡ್ ಸೂಪರ್ ಸ್ಟಾರ್, ಕನ್ನಡತಿ ದೀಪಿಕಾ ಪಡುಕೋಣೆ ಇತ್ತೀಚಿನ ದಿನಗಳಲ್ಲಿ ಹಲವು ಕಾರಣಗಳಿಗೆ ಭಾರಿ ಸುದ್ದಿಯಲ್ಲಿದ್ದಾರೆ. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಮಗಳು ದುವಾಗೆ ಜನ್ಮ ನೀಡಿದ ಅವರು ಚಿಕ್ಕ ಬ್ರೇಕ್ ನಂತರ ಮತ್ತೆ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದಾರೆ. ಅಲ್ಲು ಅರ್ಜುನ್-ಅಟ್ಲಿ ಕಾಂಬಿನೇಷನ್ ಬಹು ನಿರೀಕ್ಷಿತ ತೆಲುಗು ಚಿತ್ರವನ್ನು ಒಪ್ಪಿಕೊಂಡ ಅವರು ಬಾಲಿವುಡ್ ಕಿಂಗ್ ಖಾನ್ ಶಾರುಖ್ ಖಾನ್ ಅವರ ಕಿಂಗ್ ಸಿನಿಮಾಕ್ಕೆ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ಇದರ ಜತೆಗೆ ಟಾಲಿವುಡ್ ಸ್ಟಾರ್ ಪ್ರಭಾಸ್ ಅಭಿನಯದ 'ಸ್ಪಿರಿಟ್' ಮತ್ತು 'ಕಲ್ಕಿ 2' ಚಿತ್ರಗಳಿಂದ ಹೊರ ನಡೆದಿದ್ದಾರೆ. ಅತಿಯಾದ ಸಂಭಾವನೆ ಮತ್ತು ವಿವಿಧ ಬೇಡಿಕೆಗಳನ್ನು ಮುಂದಿಟ್ಟ ಕಾರಣ ಅವರನ್ನು ಈ ಚಿತ್ರಗಳಿಂದ ಕೈಬಿಡಲಾಗಿದೆ ಎನ್ನುವ ಸುದ್ದಿ ಹರಿದಾಡುತ್ತಿದ್ದು, ಚರ್ಚೆ ಹುಟ್ಟು ಹಾಕಿದೆ. ಇದೆಲ್ಲದರ ಮಧ್ಯೆ ಅವರು ತಮ್ಮ 2ನೇ ಹಾಲಿವುಡ್ ಚಿತ್ರ ಒಪ್ಪಿಕೊಂಡಿದ್ದಾರೆ ಎನ್ನುವ ವರದಿಯೂ ಹೊರಬಿದ್ದಿದೆ. 2006ರಲ್ಲಿ ತೆರೆಕಂಡ ಉಪೇಂದ್ರ ಅವರ ಕನ್ನಡದ ಐಶ್ವರ್ಯ ಸಿನಿಮಾ ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟ ದೀಪಿಕಾ 2007ರಲ್ಲಿ ರಿಲೀಸ್ ಆದ ಓಂ ಶಾಂತಿ ಓಂ ಮೂಲಕ ಬಾಲಿವುಡ್ ಪ್ರವೇಶಿಸಿದರು. ಮೊದಲ ಚಿತ್ರದಲ್ಲೇ ಶಾರುಖ್ ಖಾನ್‌ಗೆ ಜೋಡಿಯಾಗಿ ನಟಿಸಿ ಗಮನ ಸೆಳೆದರು. ಬ್ಯಾಕ್ ಟು ಬ್ಯಾಕ್ ಹಿಂದಿ ಸಿನಿಮಾಗಳಲ್ಲಿ ನಟಿಸಿ ಬಾಲಿವುಡ್‌ನ ಟಾಪ್ ನಾಯಕಿಯಲ್ಲಿ ಒಬ್ಬರೆನಿಸಿಕೊಂಡರು. 2017ರಲ್ಲಿ ರಿಟರ್ನ್ ಆಫ್ ಕ್ಸಂಡರ್ ಕೇಜ್ ಇಂಗ್ಲಿಷ್ ಚಿತ್ರ ಮೂಲಕ ಹಾಲಿವುಡ್‌ಗೂ ಹಾರಿದರು. ಮೊದಲ ಹಾಲಿವುಡ್ ಚಿತ್ರದಲ್ಲೇ ಜಾಗತಿಕ ಸಿನಿ ಪ್ರೇಕ್ಷಕರ ಗಮನ ಸೆಳೆದ ಅವರು ಇದೀಗ ಮತ್ತೊಂದು ಇಂಗ್ಲಿಷ್ ಸಿನಿಮಾ ಒಪ್ಪಿಕೊಂಡಿದ್ದಾರೆ ಎನ್ನಲಾಗುತ್ತಿದೆ.

**ಹಾಲಿವುಡ್ ಚಿತ್ರದಲ್ಲೇ ಪ್ರೇಕ್ಷಕರ ಗಮನ**

ಇತ್ತೀಚೆಗೆ ಕಲ್ಕಿ 2 ಚಿತ್ರತಂಡ ಅಧಿಕೃತ ಪ್ರಕಟಣೆ ಹೊರಡಿಸಿ ದೀಪಿಕಾ ನಾಯಕಿ ಪಾತ್ರದಿಂದ ಹೊರ ನಡೆದಿದ್ದಾರೆ ಎಂದು ತಿಳಿಸಿತ್ತು. ಇದು ಸಾಕಷ್ಟು ಚರ್ಚೆಗೆ ಗ್ರಾಸವಾಗಿತ್ತು.

ಸ್ಪಿರಿಟ್ ಸಿನಿಮಾದಿಂದ ಹೊರಗಿಡಲಾಗಿತ್ತು. ದೀಪಿಕಾ 8 ಗಂಟೆ ಮಾತ್ರ ಕೆಲಸ ಮಾಡುವುದಾಗಿ ಷರತ್ತು ವಿಧಿಸಿದ್ದರಿಂದ ಅವರನ್ನು ಈ ಚಿತ್ರಗಳಿಂದ ತೆಗೆದು ಹಾಕಲಾಗಿದೆ ಎನ್ನುವ ಸುದ್ದಿ ಹರಿದಾಡುತ್ತಿದೆ. ಕಳೆದ ವರ್ಷ ತೆರೆಕಂಡ ಕಲ್ಕಿ 2898 ಎಡಿ ಸಿನಿಮಾದ ನಾಯಕಿಯಾಗಿ ದೀಪಿಕಾ ಕಾಣಿಸಿಕೊಂಡಿದ್ದರು. 2 ಭಾಗಗಳಲ್ಲಿ ಚಿತ್ರ ಮೂಡಿ ಬರಲಿದೆ ಎಂದು ನಿರ್ದೇಶಕ ನಾಗ್ ಅಶ್ವಿನ್ ಮೊದಲೇ ಘೋಷಿಸಿದ್ದರು. ಇನ್ನೇನು ಅದರ ಸೀಕ್ವೆಲ್‌ನ ಶೂಟಿಂಗ್ ಆರಂಭಿಸಲು ಮುಂದಾಗಿದ್ದರು.

# ಯಾರ ಸಂಗವೂ ಇಲ್ಲ, ಜೈಲಲ್ಲಿ ಒಂಟಿಯಾಗಿ ನೋವು ತಿಂತಿರೋ ಡೆವಿಲ್

ಆನೆ ನಡೆದಿದ್ದೇ ದಾರಿ ಅಂತ ದರ್ಶನ್ ರನ್ನ ಅಭಿಮಾನಿಗಳು ಫಾಲೋ ಮಾಡ್ತಿದ್ದರು, ಫ್ರೆಂಡ್ಸ್ ಪಾರ್ಟಿ, ಮೋಜು ಮಸ್ತಿ ಅಂತಿದ್ದ ದರ್ಶನ್ ಈಗ ಕತ್ತಲ ಕೋಣೆಯಲ್ಲಿ ಬಂದಿಯಾಗಿದ್ದಾರೆ. ಸುಪ್ರಿಂ ಕೋರ್ಟ್ ನ ಕಟ್ಟುನಿಟ್ಟಿನ ಆದೇಶವನ್ನ ಪಾಲಿಸ್ತಿರೋ ಜೈಲು ಅಧಿಕಾರಿಗಳು ದಾಸನಿಗೆ ಯಾವುದೇ ವಿಶೇಷ ಟ್ರೀಟ್ಮೆಂಟ್ ಕೊಡ್ತಿಲ್ಲ. ಇದರಿಂದ ಬೇಸತ್ತಿರೋ ದರ್ಶನ್ ಹೈ ಕೋರ್ಟ್ ಮೆಟ್ಟಿಲೇರಿದ್ದಾರೆ. ದಾಸ ದರ್ಶನ್ ಒಂದು ಕೂಗು ಕೊಟ್ಟರೆ ಸಾಕು ಅಭಿಮಾನಿಗಳು ದರ್ಶನ್ ಮಾತನ್ನ ಶಿರಸಾವಹಿಸಿ ಪಾಲಿಸ್ತಾರೆ. ಸೆಲೆಬ್ರೆಟಿಸ್ ಅಂತ ದರ್ಶನ್ ಅಭಿಮಾನಿಗಳನ್ನ ಎಷ್ಟು ಪ್ರೀತಿಸ್ತಾರೋ ಅಭಿಮಾನಿಗಳು ಕೂಡ ಅಷ್ಟೆ ದಾಸನನ್ನ ಪ್ರೀತಿಸ್ತಾರೆ ಕಷ್ಟ ಅಂದ್ರೆ ಹೆಗಲಾಗೋಕು ಸಿದ್ದರಾಗಿರ್ತಾರೆ. ದರ್ಶನ್ ನೆಮ್ಮದಿಯಾಗಿ ಸಿನಿಮಾ ಕುಟುಂಬ ಅಂತಿದ್ದಾಗ ಕಷ್ಟ ಅಂತ ಬಂದ ಅದೆಷ್ಟೋ ಮಂದಿಗೆ ಆಸರೆಯಾಗಿದ್ದರು. ನಮ್ಮ ಬಾಸ್ ಬೈದರೂ ಅಲ್ಲಿ ಪ್ರೀತಿಯಿರುತ್ತೆ ಅಂತಲೇ ಆರಾಧಿಸೋ ಮಂದಿ ಇವತ್ತು ದರ್ಶನ್ ರ ಪರಿಸ್ಥಿತಿ ಕಂಡು ಮರುಗಿದ್ದಾರೆ, ಜೈಲಿನಲ್ಲಿ ಯಾರ ಸಂಗವೂ ಇಲ್ಲದೇ ಏಕಾಂಗಿಯಾಗಿ ನೋವು ತಿಂತಿರೋ ದಾಸನ ಮನಸ್ಥಿತಿ ಕಂಡು ಕಣ್ಣೀರು ಹಾಕ್ತಿದ್ದಾರೆ.

ಹುಟ್ಟುಹಬ್ಬ ಅಂತ ಬಂದ್ರೆ ತಮ್ಮ ಹೆಸರಲ್ಲಿ ಅನಾಥಶ್ರಮ, ವೃದ್ದಾಶ್ರಮಕ್ಕೆ ಅಕ್ಕಿ ಬೇಳೆಯನ್ನ ಕ್ವಿಂಟಾಲ್ ಗಟ್ಟಲೆ ದಾನ ಮಾಡಿಸ್ತಾ, ಅಭಿಮಾನಿಗಳೆಲ್ಲರು ಸೇರಿ ನಮ್ಮ ದಾಸನಿಗೆ ಒಳ್ಳೆಯದಾಗಲಿ ಅಂತ ಅನ್ನದಾನ ಮಾಡಿದ ಆ ದಿನಗಳೆಲ್ಲ ಇಷ್ಟು ಬೇಗ ಮರೆತು ಹೋದ್ವಾ ಅನ್ನೋ ರೀತಿಯಾಗಿದೆ. ದಾಸ ಈಗ ನಾಲ್ಕು ಗೋಡೆಯ ಮಧ್ಯ ಸಿಲುಕಿ ಕನಿಷ್ಠ ಸೌಲಭ್ಯವನ್ನಾದ್ರೂ ಕೊಡಿ ಅಂತ ಅವಲತ್ತು ಕೊಂಡಿದ್ದಾರೆ.

ದರ್ಶನ್ ಪರಪ್ಪನ ಅಗ್ರಹಾರ ಸೇರಿದಾಗಿನಿಂದ ಕುಟುಂಬದವರಿಂದಲೂ ದೂರಾಗಿದ್ದಾರೆ. ಈ ಹಿಂದೆ ಪರಪ್ಪನ ಅಗ್ರಹಾರದ ರಾಜಾತಿಥ್ಯದ ಸಲುವಾಗಿ ಜಾಮೀನು ವಜಾ ಆದ ಹಿನ್ನಲೆ ಜೈಲಧಿಕಾರಿಗಳು ದರ್ಶನ್ ಮೇಲೆ ತೀವ್ರ ನಿಗಾ ಇಟ್ಟಿದ್ದು ಜೈಲಿನ ಕೊಠಡಿಯಲ್ಲಿಯೇ ವಾಕಿಂಗ್ ಮಾಡೋ ಸ್ಥಿತಿಯಲ್ಲಿದ್ದಾರೆ.

ಬಿಸಿಲು ನೋಡಿ ತಿಂಗಳಾಯ್ತು ಅನ್ನೋ ದರ್ಶನ್ ಜೈಲಿನಲ್ಲಿ ನನ್ನ ಬಟ್ಟೆಗಳು ವಾಸನೆ ಬರುತ್ತಿವೆ. ನನಗೆ ಬದುಕೋಕೆ ಆಗುತ್ತಿಲ್ಲ, ಸ್ವಲ್ಪ ವಿಷ ಕೊಡಿ. ಸೂರ್ಯನ ಬಿಸಿಲೇ ಬೀಳುತ್ತಿಲ್ಲ. ಕೈಯೆಲ್ಲ ಫಂಗಸ್ ಆಗಿದೆ ಎಂದು ನಟ ಕೋರ್ಟ್ ಜಡ್ಜ್ ಮುಂದೆ ಬೇಡಿಕೊಂಡಿದ್ದರು.



# ಪುಷ್ಪ 2 ನೆನಪಿಸುತ್ತೆ ಕಾಂತಾರ ಚಾಪ್ಟರ್ 1 ಒಂದು ದೃಶ್ಯ



ಅಂತೂ ಇಂತೂ ಕಾಯುವಿಕೆ ಕೊನೆಯಾಗಿದೆ. ಅಕ್ಟೋಬರ್ 2ರಂದು ಕಾಂತಾರ ಸಿನಿಮಾ ರಿಲೀಸ್ ಆಗಲಿದ್ದು ಅದಕ್ಕೂ ಮುನ್ನ ಸೆಪ್ಟೆಂಬರ್ 22ರಂದು ಟ್ರೈಲರ್ ರಿಲೀಸ್ ಮಾಡಲಾಗಿದೆ. ಈ ಟ್ರೈಲರ್ ರಿಷಬ್ ಶೆಟ್ರ ಕಾಂತಾರ ಲೋಕದ ಒಂದು ಝಲಕ್ ಅನ್ನು ಪ್ರೇಕ್ಷಕರಿಗೆ ಕೊಟ್ಟಿದೆ. ಈ ಸಿನಿಮಾದ ಟ್ರೈಲರ್ ನೋಡಿದರೆ ದೈವಿಕ ಅಂಶ, ಹೋರಾಟ, ಕಾಡಿನ ಜನರ ಜೀವನ, ಅಧಿಕಾರ ಇರುವವರ ದರ್ಪ ಇವೆಲ್ಲದರ ಜೊತೆ ಪ್ರಣಯ ಎನ್ನುವ ಅಂಶ ಮಿಸ್ ಆಗಿಲ್ಲ. ತುಂಬಾ ಸೀರಿಯಸ್ ಸ್ಟೋರಿ ಹೇಳುವಾಗಲೂ ಮಿತವಾದ ರೀತಿಯಲ್ಲಿ ಹದವಾಗಿ ರೊಮ್ಯಾನ್ಸ್ ಮಾಡುವಲ್ಲಿ ಶೆಟ್ರು ಯಶಸ್ವಿಯಾಗಿದ್ದಾರೆ. ಕಾಂತಾರ ಸಿನಿಮಾ ನೋಡಿದರೆ ಅಲ್ಲಿ ನೆನಪಾಗುವುದು ದೈವ, ಜನರು, ಕಾಡಿನ ಜನರ ಹೋರಾಟ, ಜೀವನ. ಆದರೆ ಶಿವ ಹಾಗೂ ಲೀಲಾರ ಪ್ರಣಯ ಮರೆಯೋಕೆ ಸಾಧ್ಯವೇ ಅವರ ಪ್ರೀತಿ ಹುಟ್ಟುವ ರೀತಿ, ಹಾಡು, ರೊಮ್ಯಾನ್ಸ್ ಎಲ್ಲವನ್ನೂ ಹದವಾಗಿ ಕಾಂತಾರದಲ್ಲಿ ಬೆರೆಸಲಾಗಿದೆ. ಅದೇ ರೀತಿ ಕಾಂತಾ ಚಾಪ್ಟರ್ 1ರಲ್ಲಿಯೂ ಇವೆಲ್ಲವೂ ಇದೆ. ಇಲ್ಲಿ ರುಕ್ಮಿಣಿ ವಸಂತ್ ರಿಷಬ್‌ಗೆ ಜೋಡಿಯಾಗಿದ್ದಾರೆ. ರಿಷಬ್ ಶೆಟ್ಟಿ ಕಾಡಿನ ಸಮುದಾಯವಾದರೆ ರುಕ್ಮಿಣಿ ರಾಜಕುಮಾರಿಯಾಗಿದ್ದಾರೆ. ಅವರಿಬ್ಬರ ಭೇಟಿ, ಪರಿಚಯ, ಒಡನಾಟ, ಪ್ರೀತಿ ಎಲ್ಲವನ್ನ ಇಲ್ಲಿ ತೋರಿಸಲಾಗಿದೆ. ರಿಷಬ್ ಶೆಟ್ಟಿ ಹಾಗೂ ರುಕ್ಮಿಣಿ ವಸಂತ್ ದೃಶ್ಯಗಳಲ್ಲಿ ಗಮನ ಸೆಳೆಯುವ ಒಂದು ದೃಶ್ಯವಿದೆ. ಮಳೆಯಲ್ಲಿ ನೆನೆಯುತ್ತಾ ಸಮರ ಕಲಿಯುವ ದೃಶ್ಯ ಒಂದಾದರೆ, ಪಟ್ಟಣದಲ್ಲಿ ಮುಖಾಮುಖಿಯಾಗುವ ದೃಶ್ಯ ಇನ್ನೊಂದು. ಬಿಳಿ ಕುದುರೆ ಹತ್ತಿ ಕಾಡಿನ ಮಧ್ಯೆ ಬರುವ ರುಕ್ಮಿಣಿ ವಸಂತ್ ದೃಶ್ಯ ಇನ್ನೊಂದು, ಹಾಗೆಯೇ ರಿಷಬ್ ಆಯಕ್ಷನ್ ನೋಡುತ್ತಾ ಅಚ್ಚರಿ ಪಡುವ ದೃಶ್ಯವೂ ಇದೆ. ಇನ್ನೊಂದರಲ್ಲಿ ಆಕರ್ಷಕವಾದ ನೀರಿನ ದೊಡ್ಡ ಪಾತ್ರೆಯೊಳಗೆ, ಹಿಂದಿನ ಕಾಲದ ಬಾತ್‌ಟಬ್‌ನಂತಹ ರಚನೆಯಲ್ಲಿ ರುಕ್ಮಿಣಿ ವಸಂತ್ ಹಾಗೂ ರಿಷಬ್ ಶೆಟ್ಟಿ ಇರುವಂತಹ ಒಂದು ದೃಶ್ಯವಿದೆ. ಇದನ್ನು ನೋಡಿದರೆ ತಕ್ಷಣಕ್ಕೆ ಪುಷ್ಪ 2ನಲ್ಲಿ ಬರುವಂತಹ ರಶ್ಮಿಕಾ ಹಾಗೂ ಅಲ್ಲು ಅರ್ಜುನ್ ಅಭಿನಯದ ಹಾಡಿನ ದೃಶ್ಯ ನೆನಪಿಗೆ ಬರುತ್ತದೆ. ಫೀಲಿಂಗ್ ಸಾಂಗ್‌ನ ದೃಶ್ಯಗಳಲ್ಲಿ ಇದೇ ರೀತಿಯ ಸನ್ನಿವೇಶವೊಂದು ಚಿತ್ರಿಸಲಾಗಿದೆ. ಪುಷ್ಪ 2ನಲ್ಲಿ ಫೀಲಿಂಗ್ ಸಾಂಗ್‌ನಲ್ಲಿ ಹಾರ್ಡ್ ರೊಮ್ಯಾನ್ಸ್ ತೋರಿಸಲಾಗಿದ್ದು ಇಲ್ಲಿ ಕೊಳದಂತಹ ಒಂದು ರಚನೆಯಲ್ಲಿ ಅಲ್ಲು ಹಾಗೂ ರಶ್ಮಿಕಾ ಡ್ಯಾನ್ಸ್ ಮಾಡುತ್ತಾ ರೊಮ್ಯಾನ್ಸ್ ಮಾಡುವುದನ್ನು ತೋರಿಸಲಾಗಿದೆ. ಇಲ್ಲಿ ನೀರು, ಗುಲಾಬಿ ದಳಗಳು ರೊಮ್ಯಾಂಟಿಕ್ ಆ್ಯಂಗಲ್ ಕೊಡಲಾಗಿದೆ. ಕಾಂತಾರದಲ್ಲಿಯೂ ಇಂಥದ್ದೊಂದು ದೃಶ್ಯ ಕಾಣಿಸುತ್ತದೆ. ರಿಷಬ್ ಹಾಗೂ ರುಕ್ಮಿಣಿ ಗುಲಾಬಿ ನೀರಿನಲ್ಲಿ ರೊಮ್ಯಾಂಟಿಕ್ ಮೂಡ್‌ನಲ್ಲಿರುವಂತೆ ಈ ದೃಶ್ಯ ತೋರಿಸತ್ತದೆ. ಇದು ಸಿನಿಮಾ ದೃಶ್ಯವೋ ಅಥವಾ ಹಾಡಿನ ಅಂತ ತಿಳಿಯಲು ಸಿನಿಮಾ ರಿಲೀಸ್ ಆಗುವವರೆಗೆ ಕಾಯಬೇಕು ಅಷ್ಟೆ. ರಿಷಬ್ ಶೆಟ್ಟಿ ಮತ್ತೊಮ್ಮೆ ಕಾಂತಾರ ಚಾಪ್ಟರ್ 1ನಲ್ಲಿ ಡಿವೈನ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

# ಟೀಂ ಇಂಡಿಯಾಗೆ ವಿರುದ್ಧ ಸೋಲಿಗೆ ಇವರೇ ಕಾರಣ ಎಂದ ಪಾಕ್ ಕ್ಯಾಪ್ಟನ್..!



ಭಾರತದ ಆರಂಭಿಕರಾದ ಅಭಿಷೇಕ್ ಶರ್ಮಾ, ಶುಭ್ ಮನ್ ಗಿಲ್ ಸ್ಫೋಟಕ ಬ್ಯಾಟಿಂಗ್ ಮಾಡುವ ನಮ್ಮ ಸೋಲನ್ನು ಬರೆದರು ಎಂದು ಪಾಕಿಸ್ತಾನ ಕ್ಯಾಪ್ಟನ್ ಸಲ್ಮಾನ್ ಅಲಿ ಅಘಾ ಹೇಳಿದ್ದಾರೆ. ಪಾಕಿಸ್ತಾನ ಮತ್ತು ಭಾರತ ತಂಡಗಳ ನಡುವೆ ಇರುವ ವ್ಯತ್ಯಾಸ ಕುರಿತು ಮಾತನಾಡಿದ ಅವರು, ಪವರ್ ಪ್ಲೇನಲ್ಲಿ ಭಾರತ ಆರಂಭಿಕರ ಸ್ಫೋಟಕ ಆಟ ನಮ್ಮ ಸೋಲಿಗೆ ನಿರ್ದೇಶನ ಮಾಡಿತ್ತು ಎಂದು ಹೇಳಿದ್ದಾರೆ. ಏಷ್ಯಾ ಕಪ್ 2025ರ ಭಾಗವಾಗಿ ಭಾನುವಾರ ನಡೆದ ಸೂಪರ್ 4 ಹೋರಾಟದಲ್ಲಿ ಭಾರತ ತಂಡ 6 ವಿಕೆಟ್ ನಿಂದ ಪಾಕಿಸ್ತಾನ ವಿರುದ್ಧ ಗೆಲುವು ಪಡೆದುಕೊಂಡಿದೆ. ಈ ಟೂರ್ನಿಯಲ್ಲಿ ಭಾರತದ ವಿರುದ್ಧ ಪಾಕಿಸ್ತಾನ ಎರಡನೇ ಬಾರಿಗೆ ಸೋಲುಂಡಿದೆ. ಮೊದಲ ಮ್ಯಾಚ್ ಸೋಲಿನ ಬಳಿಕ ಬ್ರಾಡ್ ಕಾಸ್ಟರ್ ನೊಂದಿಗೆ ಮಾತನಾಡದೆ ತೆರಳಿದ್ದ ಸಲ್ಮಾನ್ ಅಲಿ, ಈ ಬಾರಿ ದುರಹಂಕಾರ ದೂರವಿಟ್ಟು ಬ್ರಾಡ್ ಕಾಸ್ಟರ್ ರೊಂದಿಗೆ ಮಾತನಾಡಿದ್ದರು. ನಾವು ಪರ್ಫೆಕ್ಟ್ ಗೇಮ್ ಆಡಲು ಸಾಧ್ಯವಾಗಿಲ್ಲ. ಆದರೆ ನಾವು ಆ ಕಡೆ ಮುನ್ನಡೆಯುತ್ತಿದ್ದೇವೆ. ಆದರೆ ಪವರ್ ಪ್ಲೇ ನಲ್ಲಿ ಭಾರತ ಆರಂಭಿಕ ಆಟಗಾರರು ಸ್ಫೋಟಕ ಬ್ಯಾಟಿಂಗ್ ನಡೆಸುವ ಮೂಲಕ ನಮ್ಮಿಂದ ಪಂದ್ಯವನ್ನು ದೂರ ಮಾಡಿದ್ದರು. ನಾವು ಬ್ಯಾಟಿಂಗ್ ಮಾಡುವ ಸಮಯದಲ್ಲಿ 10 ಓವರ್‌ಗಳ ಬಳಿಕ ನಮ್ಮ ಸ್ಥಾನವನ್ನು ನೋಡಿದರೆ ಇನ್ನು ಹೆಚ್ಚುವರಿಯಾಗಿ 10-15 ರನ್ ಗಳಿಸಬೇಕಿತ್ತು. 170-180 ರನ್ ಹೋರಾಟ ಸ್ಕೋರ್ ಆಗಿದ್ರು, ಪವರ್ ಪ್ಲೇನಲ್ಲಿ ಭಾರತ ಅದ್ಭುತವಾಗಿ ಬ್ಯಾಟಿಂಗ್ ಮಾಡಿತ್ತು. ಇದೇ ಎರಡು ತಂಡಗಳ ನಡುವೆ ಇರುವ ವ್ಯತ್ಯಾಸ ಎಂದು ಸಲ್ಮಾನ್ ಹೇಳಿದ್ದಾರೆ. ಬೌಲರ್ ಗಳು ರನ್ ಬಿಟ್ಟುಕೊಡುವ ಸಂದರ್ಭದಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ಇದು ಟಿ20 ಮಾದರಿಯಲ್ಲಿ ಸಾಮಾನ್ಯ. ಈ ಪಂದ್ಯದಲ್ಲಿ ಸೋಲುಂಡರೂ ಹಲವು ಅಂಶಗಳು ಪ್ಲಸ್ ಆಗಿದೆ.

# ಪ್ರೀತಿ ಗುಟ್ಟು ರಟ್ಟು ಮಾಡಿದ ಸುಹಾನಾ ಸಯ್ಯದ್





ಸರಿಗಮಪ ರಿಯಾಲಿಟಿ ಶೋ ಮೂಲಕ ಭಾರೀ ಜನಪ್ರಿಯತೆ ಗಳಿಸಿರುವ ಕನ್ನಡದ ಖ್ಯಾತ ಗಾಯಕಿ ಸುಹಾನಾ ಸಯ್ಯದ್ ಇದೀಗ ಪ್ರೀತಿಸುತ್ತಿರುವ ಹುಡುಗನ ಮಾಹಿತಿಯನ್ನು ರಿವೀಲ್ ಮಾಡಿದ್ದಾರೆ. ಹಿಂದೊಮ್ಮೆ ಹಿಂದೂ ದೇವರ ಭಜನೆ ಹಾಡಿದ್ದಕ್ಕೆ ವಿವಾದಕ್ಕೀಡಾಗಿದ್ದ ಗಾಯಕಿ. ಶಿವಮೊಗ್ಗದ ಸಾಗರದ ಚೆಲುವೆ, ಸಿನಿಮಾಗಳಲ್ಲೂ ಹಿನ್ನೆಲೆ ಗಾಯಕನ ಮೂಲಕ ಜನಪ್ರಿಯತೆ ಗಳಿಸಿದ್ದಾರೆ.

ಇದೀಗ ನಿರ್ಭೀತಿಯಿಂದ ತಾವು ಪ್ರೀತಿಸುತ್ತಿರುವ ಹುಡುಗನನ್ನು ಪರಿಚಯ ಮಾಡಿಸಿಕೊಟ್ಟಿದ್ದಾರೆ. ನಿತಿನ್ ಶಿವಾಂಶ್ ಜೊತೆ ಪ್ರೀತಿಯ ಗುಟ್ಟನ್ನ ರಟ್ಟು ಮಾಡಿರುವ ಸುಹಾನಾ ಸಯ್ಯದ್, ತಾವು ಈ ಪ್ರೀತಿಯಲ್ಲಿ ಎದುರಿಸಿದ ಸವಾಲಿನ ಕುರಿತು ಇನ್ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದಾರೆ. ರಂಗಭೂಮಿ ಕಲಾವಿದ ಆಗಿರುವ ನಿತಿನ್ ಶಿವಾಂಶ್ ಸಿನಿಮಾದಲ್ಲೂ ಸಕ್ರಿಯರಾಗಿದ್ದಾರೆ.

ಶಾಲಾ ದಿನಗಳಲ್ಲೇ ನಿತಿನ್ ಶಿವಾಂಶ್ ಪರಿಚಯ ಇರೋದಾಗಿ ಸುಹಾನಾ ಹೇಳಿಕೊಂಡಿದ್ದಾರೆ. 16 ವರ್ಷಗಳ ಸ್ನೇಹ ಪ್ರೀತಿಯಾಗಿ ಚಿಗುರಿದೆ. ಇದೀಗ ಪ್ರೇಮಿಗಳು ಸಮಾಜದ ಮುಂದೆ ಬಲವಾಗಿ ಎದ್ದು ನಿಂತು ತಮ್ಮ ಪ್ರೀತಿಯ ವಿಚಾರ ಘೋಷಿಸಿದ್ದಾರೆ. ಪ್ರೀತಿಯ ಗುಟ್ಟನ್ನ ನಿಮ್ಮ ಮುಂದೆ ತೆರೆದಿಡುತ್ತೇವೆ ಎಂದು ಘೋಷಿಸಿದ ಸುಹಾನಾ ಸಯ್ಯದ್ ಜೋಡಿ ಫೋಟೋ ಹಂಚಿಕೊಂಡಿದ್ದಾರೆ.

# ಬ್ಯಾಟ್ ಗನ್ ರೀತಿ ಹಿಡಿದು ಸೆಲೆಬ್ರೇಟ್...!



ಏಷ್ಯಾಕಪ್‌ನ ಸೂಪರ್-4 ಪಂದ್ಯದಲ್ಲಿ ಪಾಕಿಸ್ತಾನದ ವಿರುದ್ಧ ಭಾರತ ತಂಡ ಜಯ ದಾಖಲಿಸಿ ಸಂಭ್ರಮಿಸಿದೆ. ಹ್ಯಾಂಡ್ ಶೇಕ್ ಸೇರಿದಂತೆ ಕೆಲ ಸನ್ನಿವೇಶಗಳು ಈ ಪಂದ್ಯದಲ್ಲಿ ಕಂಡು ಬಂದವು. ಇದರಲ್ಲಿ ಪಾಕಿಸ್ತಾನದ ಓಪನರ್ ಸಾಹಿಬ್‌ಜಾದಾ ಫರ್ಹಾನ್ ಅರ್ಧಶತಕ ಬಾರಿಸುತ್ತಿದ್ದಂತೆ ಬ್ಯಾಟ್‌ಅನ್ನು ಗನ್‌ರೀತಿ ಹಿಡಿದು ಸೆಲೆಬ್ರೇಷನ್ ಮಾಡಿದರು. ಸದ್ಯ ಈ ಸಂಬಂಧ ಸಾಹಿಬ್ ಜಾದಾ ಫರ್ಹಾನ್ ಪ್ರತಿಕ್ರಿಯೆ ನೀಡಿದ್ದಾರೆ. ಟಾಸ್ ಗೆದ್ದು ಸೂರ್ಯಕುಮಾರ್ ಅವರು ಮೊದಲ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದರು. ಹೀಗಾಗಿ ಮೊದಲ ಬ್ಯಾಟಿಂಗ್ ಮಾಡಿದ್ದ ಪಾಕಿಸ್ತಾನ 172 ರನ್‌ಗಳ ಗುರಿ ನೀಡಿತ್ತು. ಪಾಕ್ ಪರ ಓಪನರ್ ಸಾಹಿಬ್‌ಜಾದಾ ಫರ್ಹಾನ್ ಬ್ಯಾಟಿಂಗ್‌ಹೆಚ್ಚು ನೆರವಾಯಿತು. ಪಂದ್ಯದಲ್ಲಿ 45 ಬಾಲ್‌ಗಳನ್ನ ಎದುರಿಸಿದ್ದ ಸಾಹಿಬ್ ಜಾದಾ ಫರ್ಹಾನ್ 5 ಬೌಂಡರಿ, 3 ಸಿಕ್ಸರ್‌ಗಳಿಂದ ಅರ್ಧಶತಕ ಸಿಡಿಸಿದರು. '

ಒಂದು ರೀತಿಯಲ್ಲಿ ಪಾಕ್ 170 ರನ್‌ವರೆಗೆ ಹೋಗಲು ಫರ್ಹಾನ್ ಬ್ಯಾಟಿಂಗ್ ಹೆಚ್ಚು ಸಹಕಾರಿ ಆಯಿತು. ಪಂದ್ಯದಲ್ಲಿ ಸಾಹಿಬ್‌ಜಾದಾ ಫರ್ಹಾನ್ ಹಾಫ್‌ಸೆಂಚುರಿ ಬಾರಿಸುತ್ತಿದ್ದಂತೆ ಬ್ಯಾಟ್ ಅನ್ನು ಗನ್ ರೀತಿ ಹಿಡಿದು ಸಂಭ್ರಮಿಸಿದರು. ಆದರೆ ಈ ಬಗ್ಗೆ ಎಲ್ಲೆಡೆಯಿಂದ ಭಾರೀ ಟೀಕೆಗಳು ಕೇಳಿ ಬಂದವು.

ಸದ್ಯ ಈ ಸಂಬಂಧ ಮಾತನಾಡಿರುವ ಸಾಹಿಬ್‌ಜಾದಾ ಫರ್ಹಾನ್ ಯಾರೇ ಏನೇ ಅಂದರೂ ನಾನು ತಲೆ ಕಡಿಸಿಕೊಳ್ಳಲ್ಲ ಎಂದು ಹೇಳಿದ್ದಾರೆ. ಪಂದ್ಯದಲ್ಲಿ ಆ ಕ್ಷಣಕ್ಕೆ ಮಾತ್ರ ನಾನು ಸೆಲೆಬ್ರೇಟ್ ಮಾಡಿದ್ದು ಅಷ್ಟೇ. ಅರ್ಧಶತಕ ಗಳಿಸಿದಾಗ ಯಾವಾಗಲೂ ಅಷ್ಟೊಂದು ಆಗಿ ಸಂಭ್ರಮಿಸಲ್ಲ. ಆದರೆ ನಿನ್ನೆ ಭಾರತದ ವಿರುದ್ಧ ಆಡುವಾಗ ತಕ್ಷಣಕ್ಕೆ ನನ್ನ ಮೈಂಡ್‌ಗೆ ಅದು ಬಂದಿದ್ದರಿಂದ ಬ್ಯಾಟ್ ಅನ್ನು ಗನ್ ರೀತಿ ಹಿಡಿದು ಸೆಲೆಬ್ರೇಟ್ ಮಾಡಿದೆ. ಇದನ್ನು ಜನರು ಹೇಗೆ ತೆಗೆದುಕೊಳ್ಳುತ್ತಾರೆ ಎನ್ನುವುದು ನನಗೆ ಬೇಕಾಗಿಲ್ಲ. ಆ ಬಗ್ಗೆ ನಾನು ಕೇರ್ ಮಾಡೋದಿಲ್ಲ. ಎಲ್ಲಿಯೇ ಹೋಗಲಿ ನಾವು ಅಗ್ರೆಸ್ಸಿವ್ ಆಗಿ ಆಡಬೇಕು. ಭಾರತದ ಜೊತೆ ಮಾತ್ರ ಹೀಗೆ ಮಾಡಿಲ್ಲ. ಪ್ರತಿ ತಂಡದ ಜೊತೆಯೂ ಅಗ್ರೆಸ್ಸಿವ್ ಆಗಿ ಆಡುತ್ತೇವೆ. ಅದರಂತೆ ನಾನು ಬ್ಯಾಟಿಂಗ್ ಮಾಡಿದೆ ಎಂದು ಪಾಕ್ ಓಪನರ್ ಸಾಹಿಬ್‌ಜಾದಾ ಫರ್ಹಾನ್ ಹೇಳಿದ್ದಾರೆ.


# ಇಡಿ ವಿಚಾರಣೆಗೆ ಹಾಜರಾದ ರಾಬಿನ್ ಉತ್ತಪ್ಪ

ಅಕ್ರಮ ಆನ್‌ಲೈನ್ ಬೆಟ್ಟಿಂಗ್ ಹಾಗೂ ಹಣ ವರ್ಗಾವಣೆ ಪ್ರಕರಣದ ಜಾರಿ ನಿರ್ದೇಶನಾಲಯ ತನಿಖೆಗೆ ಇಂದು ಮಾಜಿ ಭಾರತೀಯ ಕ್ರಿಕೆಟಿಗ ರಾಬಿನ್ ಉತ್ತಪ್ಪ ಹಾಜರಾಗಿದ್ದಾರೆ.

ದೆಹಲಿಯ ಇ.ಡಿ ಕಚೇರಿಗೆ ವಕೀಲರೊಂದಿಗೆ ರಾಬಿನ್ ಉತ್ತಪ್ಪ ಹಾಜರಾಗಿದ್ದು, ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಹೇಳಿಕೆ ದಾಖಲಿಕೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದೇ ಪ್ರಕರಣದಲ್ಲಿ ಮಾಜಿ ಕ್ರಿಕೆಟಿಗ ಯುವರಾಜ್ ಸಿಂಗ್ ಹಾಗೂ ನಟ ಸೋನು ಸೂದ್‌ಗೆ ಸಹ ವಿಚಾರಣೆ ಹಾಜರಾಗುವಂತೆ ಇ.ಡಿ ಸಮನ್ಸ್ ಜಾರಿ ಮಾಡಿತ್ತು.

ಸೆ.23 ರಂದು ಯುವರಾಜ್ ಸಿಂಗ್ ಹಾಗೂ ಸೆ.34 ರಂದು ನಟ ಸೋನು ಸೂದ್ ವಿಚಾರಣೆಗೆ ಒಳಪಡಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ. ಈ ಹಿಂದೆ ಟಿಎಂಸಿ ಮಾಜಿ ಸಂಸದೆ ಮಿಮಿ ಚಕ್ರವರ್ತಿ, ನಟ ಅಂಕುಶ್ ಹಜ್ರಾ, ಕ್ರಿಕೆಟಿಗ ಶಿಖರ್ ಧವನ್, ಸುರೇಶ್ ರೈನಾ ಈ ಪ್ರಕರಣದ ಇ.ಡಿ ತನಿಖೆಯನ್ನು ಎದುರಿಸಿದ್ದರು.





# ಕಿರಿಕ್ ತೆಗೆದ ಹ್ಯಾರಿಸ್ ರೌಫ್‌ಗೆ ತಕ್ಕ ಉತ್ತರ ಕೊಟ್ಟ ಅಭಿಷೇಕ್ ಶರ್ಮಾ

ಭಾರತ ಮತ್ತು ಪಾಕ್ ನಡುವಿನ ಸೂಪರ್-4 ಪಂದ್ಯ ರಣಾಂಗಣದಂತೆ ಮಾರ್ಪಟ್ಟಿತ್ತು. ಕೊನೆಯವರೆಗೂ ಜಿದ್ದಾಜಿದ್ದಿಯಿಂದ ಕೂಡಿದ್ದ ಪಂದ್ಯದಲ್ಲಿ ಭಾರೀ ಹೈಡ್ರಾಮಾಗಳು ನಡೆಯಿತು. ಸ್ಲೆಡ್ಜಿಂಗ್, ಮಾತಿನ ಚಕಮಕಿ, ಗನ್ ಸೆಲೆಬ್ರೇಷನ್, ಕ್ಯಾಚ್ ವಿವಾದ ಸೇರಿ ಹಲವು ವಿವಾದಗಳಿಗೆ ಈ ಪಂದ್ಯ ಸಾಕ್ಷಿಯಾಯಿತು.

ಆರಂಭಿಕನಾಗಿ ಕಣಕ್ಕಿಳಿದ ಅಭಿಷೇಕ್ ಶರ್ಮಾ ಪಾಕ್‌ನಲ್ಲಿ ಫೇಮಸ್ ಎನಿಸಿಕೊಂಡ ಬೌಲರ್‌ಗಳನ್ನ ಹಿಗ್ಗಾಮುಗ್ಗಾ ಚೆಂಡಾಡಿದರು. ಇದು ಪಾಕ್ ಬೌಲರ್‌ಗಳನ್ನ ಕೆರಳಿಸಿತು. ಅದಕ್ಕಾಗಿ ಅಭಿ ಜೊತೆಗೆ ಸ್ಲೆಡ್ಜಿಂಗ್ ನಡೆಸುತ್ತ ಕಿರಿಕ್ ತೆಗೆದ ಹ್ಯಾರಿಸ್ ರೌಫ್‌ಗೆ ಬ್ಯಾಟ್ ಮೂಲಕವೇ ಉತ್ತರ ಕೊಟ್ಟರು.

ಚೇಸಿಂಗ್ ವೇಳೆ ಶಾಹೀನ್ ಶಾ ಅಫ್ರಿದಿ ಎಸೆತಕ್ಕೆ ಮೊದಲ ಎಸೆತದಲ್ಲೇ ಅಭಿಶೇಕ್ ಶರ್ಮಾ ಸಿಕ್ಸರ್ ಸಿಡಿಸಿ ಪಾಕಿಸ್ತಾನ ಬೌಲರ್‌ಗಳನ್ನ ಕೆರಳಿಸಿದರು. ಬಳಿಕ ಸ್ಫೋಟಕ ಇನ್ನಿಂಗ್ಸ್ ಮೂಲಕ ಅಭಿಶೇಕ್ ಶರ್ಮಾ ಅರ್ಧಶತಕ ಸಿಡಿಸಿದರು. ಇದರ ನಡುವೆ ಶಾಹೀನ್ ಶಾ ಅಫ್ರಿದಿ ಹಾಗೂ ಹ್ಯಾರಿಸ್ ರೌಫ್ ಅವರ ಪ್ರತಿ ಎಸತದಲ್ಲೂ ಅಬ್ಬರಿಸಿದ್ದರು. ಇದರಿಂದ ಕೆರಳಿದ ಬೌಲರ್ಸ್ ಶರ್ಮಾ ವಿರುದ್ಧ ಸ್ಲೆಡ್ಜಿಂಗ್ ನಡೆಸಿದರು. ಇದಕ್ಕೂ ಜಗ್ಗದ ಅಭಿ, ಮಾತಿನ ಮೂಲಕ ತಿರುಗೇಟು ನೀಡಿದರು. ನೇರಾ ನೇರ ನಿಂತ ಅಭಿಶೇಕ್ ಶರ್ಮಾ ಅಷ್ಟೇ ಖಾರವಾಗಿ ಉತ್ತರಿಸಿದರು. ತಕ್ಷಣವೇ ಮಧ್ಯಪ್ರವೇಶಿಸಿದ ಅಂಪೈರ್ ಇಬ್ಬರ ಜಗಳ ಬಿಡಿಸಿದರು. ಅಭಿ ಜೊತೆಗೆ ನಿಂತ ಶುಭಮನ್ ಗಿಲ್ ಕೂಡ ಮಾತಿನ ಮೂಲಕ ತಿರುಗೇಟು ನೀಡಿದರು. ಸ್ಲೆಡ್ಜಿಂಗ್ ಮಾಡುತ್ತಿದ್ದ ಹ್ಯಾರಿಸ್ ರೌಫ್ ಎಸತದಲ್ಲಿ ಬೌಂಡರಿ ಸಿಡಿಸಿ ನೇರವಾಗಿ ರೌಫ್ ಬಳಿ ಬಂದು ಹೋಗಿ ಬಾಲ್ ತಗೊಂಡ್ ಬಾ ಅಂತ ವ್ಯಂಗ್ಯ ಮಾಡಿದರು. ಒಟ್ಟಿನಲ್ಲಿ ಟೀಂ ಇಂಡಿಯಾ ಅಬ್ಬರಕ್ಕೆ ಪಾಕ್ ಸುಸ್ತಾಗಿತ್ತು. ದುಬೈ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಾಕ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 171 ರನ್ ಗಳಿಸಿತ್ತು. ಗೆಲುವಿಗೆ 172 ರನ್‌ಗಳ ಗುರಿ ಪಡೆದ ಭಾರತ 18.5 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 174 ರನ್ ಗಳಿಸಿ ಜಯ ಸಾಧಿಸಿತು.

**ಅಭಿ ತಿರುಗೇಟು**

**ಪಂದ್ಯದಲ್ಲಿ ಭಾರೀ ಹೈಡ್ರಾಮಾಗಳು**



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966